ಮೂಲಕ: ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್
ಪದವಿಗಾಗಿ ಅರ್ಪಿಸಿದ ನಿಬಂಧ

ನಿಬಂಧದ ವಿಷಯ

ಕನಕದಾಸರ ಮೋಹನ ತರಂಗಿಣಿಯಲ್ಲಿ ಮೂಡಿಬಂದ ಶೃಂಗಾರ, ಶೌರ್ಯ, ಭಕ್ತಿ ಮತ್ತು ಸಮಕಾಲೀನ ಚಿತ್ರಣ

ಮಾರ್ಗದರ್ಶಕರು
ಡಾ. ಎಚ್.ಎ. ಸತ್ಯವತಿ

ಸಂಶೋಧನಾ ವಿದ್ಯಾರ್ಥಿನಿ
ಕರುಣಾ ರಾವ್

ವರ್ಷ: ೨೦೧೦-೨೦೧೧

ಅಧ್ಯಯನ ಕೇಂದ್ರ
ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ
ವಿ.ಸೀ ಸ್ನಾತಕೋತ್ತರ ಸಂಶೋಧನ ಕೇಂದ್ರ,
ಮುಖ್ಯ ರಸ್ತೆ, ನರಸಿಂಹ ರಾಜ ಕಾಲೋನಿ
ಬೆಂಗಳೂರು – ೫೬೦೦೧೯

ಮೂಲಕ: ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ. ಫಿಲ್
ಪದವಿಗಾಗಿ ಅರ್ಪಿಸಿದ ನಿಬಂಧ

ನಿಬಂಧದ ವಿಷಯ

ಕನಕದಾಸರ ಮೋಹನ ತರಂಗಿಣಿಯಲ್ಲಿ ಮೂಡಿಬಂದ ಶೃಂಗಾರ, ಶೌರ್ಯ, ಭಕ್ತಿ ಮತ್ತು ಸಮಕಾಲೀನ ಚಿತ್ರಣ

ಮಾರ್ಗದರ್ಶಕರು
ಡಾ. ಎಚ್.ಎ. ಸತ್ಯವತಿ

ಸಂಶೋಧನಾ ವಿದ್ಯಾರ್ಥಿನಿ
ಕರುಣಾ ರಾವ್

ವರ್ಷ: ೨೦೧೦-೨೦೧೧

ಅಧ್ಯಯನ ಕೇಂದ್ರ
ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ
ಎಂ.ವಿ.ಸೀ ಸ್ನಾತಕೋತ್ತರ ಸಂಶೋಧನ ಕೇಂದ್ರ,
೩ನೇ ಮುಖ್ಯ ರಸ್ತೆ, ನರಸಿಂಹ ರಾಜ ಕಾಲೋನಿ
ಬೆಂಗಳೂರು – ೫೬೦೦೧೯

908

ಅಭ್ಯರ್ಥಿಯ ಪ್ರಮಾಣಪತ್ರ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಎಂ.ವಿ.ಸೀ ಸ್ನಾತಕೋತ್ತರ ಸಂಶೋಧನ ಕೇಂದ್ರ, ಬೆಂಗಳೂರು ಇವರ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೧೦-೧೧ ನೇ ಸಾಲಿನ ಎಂ.ಫಿಲ್ ಪದವಿಗಾಗಿ **"ಕನಕದಾಸರ ಮೋಹನ ತರಂಗಿಣಿಯಲ್ಲಿ ಮೂಡಿಬಂದ ಶೃಂಗಾರ, ಶೌರ್ಯ, ಭಕ್ತಿ ಮತ್ತು ಸಮಕಾಲೀನ ಚಿತ್ರಣ"**
ಎಂಬ ಶೀರ್ಷಿಕೆಯ ಈ ನಿಬಂಧವನ್ನು ಡಾ. ಎಚ್.ಎ. ಸತ್ಯವತಿ.ರವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಸಲ್ಲಿಸುತ್ತಿದ್ದೇನೆ.

ಈ ನಿಬಂಧವು ನನ್ನ ಸ್ವಂತ ಬರವಣಿಗೆಯಾಗಿದ್ದು. ಇದರ ಯಾವುದೇ ಭಾಗವನ್ನು ಈವರೆಗೆ ಬೇರೆಲ್ಲೂ ಪ್ರಕಟಪಡಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸಂಶೋಧನಾ ವಿದ್ಯಾರ್ಥಿನಿ
ಕರುಣಾ ರಾವ್

ಸ್ಥಳ: ಬೆಂಗಳೂರು.
ದಿನಾಂಕ: 4-6-2011

Karunalekha
ಸಹಿ/-

ಮಾರ್ಗದರ್ಶಕರ ಪ್ರಮಾಣಪತ್ರ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಎಂ.ವಿ.ಸೀ ಸ್ನಾತಕೋತ್ತರ ಸಂಶೋಧನ ಕೇಂದ್ರ, ಬೆಂಗಳೂರು ಇವರ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೧೦-೧೧ ನೇ ಸಾಲಿನ ಎಂ.ಫಿಲ್ ಪದವಿಗಾಗಿ **"ಕನಕದಾಸರ ಮೋಹನ ತರಂಗಿಣಿಯಲ್ಲಿ ಮೂಡಿಬಂದ ಶೃಂಗಾರ, ಶೌರ್ಯ, ಭಕ್ತಿ ಮತ್ತು ಸಮಕಾಲೀನ ಚಿತ್ರಣ"**
ಎಂಬ ಶೀರ್ಷಿಕೆಯ ಈ ನಿಬಂಧವನ್ನು ಕರುಣಾ ರಾವ್ ರವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಸಲ್ಲಿಸಿದ್ದಾರೆ.

ಈ ನಿಬಂಧವು ಅವರ ಸ್ವಂತ ಬರವಣಿಗೆಯಾಗಿದ್ದು. ಇದರ ಯಾವುದೇ ಭಾಗವನ್ನು ಈವರೆಗೆ ಬೇರೆಲ್ಲೂ ಪ್ರಕಟಪಡಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಮಾರ್ಗದರ್ಶಕರು
ಡಾ. ಎಚ್.ಎ. ಸತ್ಯವತಿ

ಸ್ಥಳ: ಬೆಂಗಳೂರು.
ದಿನಾಂಕ: 4-6-2011

ಎಚ್. ಎ. ಸತ್ಯವತಿ
ಸಹಿ/-

ಪರಿವಿಡಿ

ಅಧ್ಯಾಯ ೧ ೧–೩

ಅಧ್ಯಯನದ ಉದ್ದೇಶ. ಸ್ವರೂಪ ಮತ್ತು ವ್ಯಾಪ್ತಿ

ಅಧ್ಯಾಯ ೨ ೪–೧೪

ಕವಿ ಪರಿಚಯ

ಅ. ಕನಕದಾಸರ ಜೀವನ

ಆ. ಕೃತಿಗಳು

ಅಧ್ಯಾಯ ೩ ೧೫–೨೫

ಮೋಹನ ತರಂಗಿಣಿಯಲ್ಲಿ ಮೂಡಿ ಬಂದ ಶೃಂಗಾರ. ಶೌರ್ಯ ಮತ್ತು ಭಕ್ತಿ

ಅಧ್ಯಾಯ ೪ ೨೬–೫೦

ಮೋಹನ ತರಂಗಿಣಿಯಲ್ಲಿ ಮೂಡಿ ಬಂದ ಸಮಕಾಲೀನ ಚಿತ್ರಣ

ಅ. ಮೋಹನ ತರಂಗಿಣಿಯಲ್ಲಿ ವರ್ಣನೆ

ಆ. ಮೋಹನ ತರಂಗಿಣಿಯಲ್ಲಿ ಮೂಡಿ ಬಂದ ವಿಜಯನಗರ ಸಾಮ್ರಾಜ್ಯ

ಇ. ಮೋಹನ ತರಂಗಿಣಿ ಮತ್ತು ಸ್ತ್ರೀವಾದಿ ಸಂವೇದನೆ

ಅಧ್ಯಾಯ ೫ ೫೧–೬೨

ಮೋಹನ ತರಂಗಿಣಿಯಲ್ಲಿ ಅಭಿವ್ಯಕ್ತವಾಗಿರುವ ಸಾಂಸ್ಕೃತಿಕವಿಚಾರಗಳು

ಅ. ಧಾರ್ಮಿಕ ಸಮನ್ವಯ

ಆ ಉತ್ಸವಗಳು ಮತ್ತು ಕ್ರೀಡೆಗಳು

ಇ. ಊಟೋಪಚಾರಗಳು

ಈ. ಸಂಪ್ರದಾಯಗಳು

ಉ. ವೇಷಭೂಷಣಗಳು

ಊ. ಶಕುನ. ನಂಬಿಕೆಗಳು

ಅಧ್ಯಾಯ ೬ ೬೩–೬೬

ಉಪ ಸಂಹಾರ

ಆಧಾರ ಗ್ರಂಥಗಳು ೬೭

ಅಧ್ಯಾಯ – ೧

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ಉದ್ದೇಶ : –

ಸುಮಾರು ಒಂದು ಸಾವಿರ ವರ್ಷಗಳ ಕನ್ನಡ ಸಾಹಿತ್ಯ ಇತಿಹಾಸವನ್ನು ಗಮನಿಸಿದರೆ ಜನಪರ ದೃಷ್ಟಿ. ಧೋರಣೆಗಳನ್ನು ಎರಡು ಪ್ರಮುಖ ಘಟ್ಟಗಳಲ್ಲಿ ಕಾಣುತ್ತೇವೆ. ಮೊದಲನೆಯದಾಗಿ ೧೨ ನೇ ಶತಮಾನದ ಶಿವಶರಣರ 'ವಚನ ಸಾಹಿತ್ಯಯುಗ'; ಎರಡನೆಯದಾಗಿ ೧೫ ನೇ ಶತಮಾನದಿಂದ ಪ್ರಾರಂಭವಾಗುವ ಹರಿದಾಸರ ದಾಸ ಸಾಹಿತ್ಯ. ಇವೆರಡೂ, ಕನ್ನಡ ಸಾಹಿತ್ಯ ಪರಂಪರೆಯ ಸುವರ್ಣಾಧ್ಯಾಯಗಳು. ಕನ್ನಡಿಗರ ಜೀವನದಲ್ಲಿ ಕ್ರಾಂತಿಕಾರಕವಾದ ಜೀವನ ತತ್ವವನ್ನು, ಆದರ್ಶವಿಚಾರಗಳನ್ನು ಜನರಿಗೆ ಅರ್ಥವಾಗುವ ಹಾಗೆ ಬೋಧಿಸಿದವರು ಶರಣರು ಮತ್ತು ದಾಸರು. ನಡೆ–ನುಡಿಗಳೊಂದಿಗೆ ಬಾಳಿದ ಇವರ ಬಾಳು ಇದರ ಬೋಧನೆಯಂತೆಯೇ ಜನರಿಗೆ ಆದರ್ಶಪ್ರಾಯವಾಯಿತು. ಅದುವರೆಗೂ ಸಂಸ್ಕೃತ ಭಾಷೆಯಲ್ಲೇ ಇದ್ದು ಜನರನ್ನು ನೇರವಾಗಿ ಮುಟ್ಟದಿದ್ದ ಭಕ್ತಿ. ತತ್ವ. ಧರ್ಮ–ಶಾಸ್ತ್ರಾದಿಗಳು ಜನರ ಆಡುಭಾಷೆಯಲ್ಲೇ ಅವರಿಗೆ ತಲುಪುವಂತಾಯಿತು. ದೇಶಭಾಷೆಗಳು ಭಕ್ತಿಯ ಪರಿಭಾಷೆಗಳಾದವು. ಜನಸಾಮಾನ್ಯರನ್ನು ಮುಟ್ಟುವ ಉದ್ದೇಶದಿಂದ ಗಹನ ತತ್ವಗಳೂ, ಗ್ರಾಂಥಿಕ ಭಾಷೆಯೂ ಸರಳ ಸುಲಭ ರೂಪ ಪಡೆದವು. ನಮ್ಮ ಆಚಾರತ್ರಯರಲ್ಲೊಬ್ಬರಾದ ಶ್ರೀಶಂಕರಾಚಾರ್ಯರು ಕರ್ನಾಟಕದ ಶೃಂಗೇರಿಯಲ್ಲಿ ತಮ್ಮ ನಾಲ್ಕು ಮಠಗಳಲ್ಲೊಂದನ್ನು ಸ್ಥಾಪಿಸಿದ್ದು: ಶ್ರೀರಾಮಾನುಜಾಚಾರ್ಯರು ಕರ್ನಾಟಕದ ಮೇಲುಕೋಟೆಯನ್ನು ತಮ್ಮ ಕಾರ್ಯಕ್ಷೇತ್ರವಾಗಿ ಮಾಡಿಕೊಂಡದ್ದು: ಮಧ್ವಾಚಾರ್ಯರು ಕರ್ನಾಟಕದಲ್ಲೇ ಉಡುಪಿ ಜಿಲ್ಲೆಯ ಪಾಜಕ ಕ್ಷೇತ್ರದಲ್ಲಿ ಹುಟ್ಟಿ ಬೆಳೆದು ದೇಶದಾದ್ಯಂತ ತಮ್ಮ ದ್ವೈತ ದರ್ಶನವನ್ನು ಬಿತ್ತರಿಸಿದ್ದು ಈಗ ಇತಿಹಾಸದ ಪುಟಗಳಲ್ಲಿ ಎದ್ದು ಕಾಣುತ್ತಿರುವ ವಿಷಯಗಳೇ ಆಗಿವೆ. ಈ ಹಿನ್ನೆಲೆಯಲ್ಲಿ ಕರ್ನಾಟಕದ ಹರಿದಾಸರೂ ತಮ್ಮ ಅಸ್ಖಲಿತ ವಾಣಿಯಿಂದ ಹರಿಭಕ್ತಿಯ ಪ್ರಚಾರ ನಡೆಸಿದರು. ಸುಮಾರು ೫೦೦ ವರ್ಷಗಳ ಇತಿಹಾಸವಿರುವ ಹರಿದಾಸರ ಪರಂಪರೆಯಲ್ಲಿ ಕನಕದಾಸರದು ಅತ್ಯಂತ ಪ್ರಮುಖ ಹೆಸರುಗಳಲ್ಲಿ ಒಂದು. ಸಾಮಾನ್ಯ ಜನತೆಯ ದೈನಂದಿನ ಕೆಲಸ ಕಾರ್ಯಗಳಿಗೂ ಭಕ್ತಿಯ ಲೇಪಕೊಟ್ಟವರು. ಡೊಳ್ಳುಬಡಿತ. ಭೂಕಂಪ, ಬಟ್ಟೆಬಗೆಯುವಿಕೆ. ಅಡಿಗೆ ಮಾಡುವುದು – ಇಂತಹ ಚಟುವಟಿಕೆಗಳಲ್ಲೂ ಹರಿಯ, ಹರಿಭಕ್ತಿಯ ಸಂದೇಶಗಳನ್ನು ಕಂಡುಕೊಂಡ ಕನಕ ದಾಸರು ಅವನ್ನು ತಮ್ಮ

ಕೃತಿಗಳ ಮೂಲಕ ಹೇಳಿ ಇಡೀ ವಾತಾವರಣವನ್ನೇ ಹರಿಮಯವನ್ನಾಗಿ ಮಾಡಿದರು. ಕನಕದಾಸರು ಇತರ ಹರಿದಾಸರುಗಳಂತೆ ತಾವು ಹೇಳಬೇಕಾದ ವಿಚಾರಗಳನ್ನು ಪುರಾಣಕಾವ್ಯಗಳ ಹಿನ್ನೆಲೆಯಲ್ಲಿ ಹೇಳಿರುವುದು ಗಮನಾರ್ಹ. ಕನಕದಾಸರ ರಚನೆಗಳಲ್ಲಿ ದಾಸ್ಯಭಾವ, ಸಖ್ಯಭಾವ, ಮಧುರಭಾವ, ವಾತ್ಸಲ್ಯ ಭಾವ, ಶಾಂತಭಾವಗಳನ್ನು ಕಾಣುತ್ತೇವೆ. ಕನಕದಾಸರು ಸಾಮಾನ್ಯವಾಗಿ ಎಲ್ಲರೂ ಗುರುತಿಸಿರುವಂತೆ ಹರಿದಾಸರಲ್ಲಿ ಕವಿಗಳು: ಕವಿಗಳಲ್ಲಿ ಹರಿದಾಸರು. ಅವರ ಈ ದ್ವಿಮುಖ ವ್ಯಕ್ತಿತ್ವ ಕವಿ-ಸಂತ ನೆಲೆಗಳಲ್ಲೂ ಸಾರ್ಥಕತೆ ಪಡೆದಿರುವಂಥದು. ಕನಕದಾಸರು ಅನೇಕ ಕೀರ್ತನೆಗಳನ್ನು, ಮುಂಡಿಗೆಗಳನ್ನು, ಕಾವ್ಯಗಳನ್ನು ರಚಿಸಿದ್ದಾರೆ. ಇಂತಹ ಭಕ್ತ ಕವಿಯ ಮಹತ್ವದ ಕಾವ್ಯಗಳಲ್ಲಿ 'ಮೋಹನ ತರಂಗಿಣಿ' ಎಂಬ ಕಾವ್ಯವೂ ಒಂದು. ಈ ಕಾವ್ಯದಲ್ಲಿ ಐತಿಹಾಸಿಕ ವಿವರಗಳಿರುವುದರಿಂದ, ಸಾಂಸ್ಕೃತಿಕವಾಗಿ ಮಹತ್ವ ಪಡೆದಿದೆ. ಈ ಕೃತಿಯ ವಿವರಗಳು ಪ್ರಸ್ತುತ ಕಾಲಕ್ಕೂ ಅನ್ವಯವಾಗುವಂತಿವೆ. ಈ ಕಾರಣದಿಂದ ನಾನು ಈ ಕಾವ್ಯವನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿದ್ದೇನೆ. 'ಮೋಹನ ತರಂಗಿಣಿ ಯಲ್ಲಿ ಮೂಡಿಬಂದಿರುವ ಶೃಂಗಾರ, ಶೌರ್ಯ, ಭಕ್ತಿ ಮತ್ತು ಸಮಕಾಲೀನ ಚಿತ್ರಣದ ಅಧ್ಯಯನ' ಮಾಡುವುದು ಪ್ರಸ್ತುತ ನಿಬಂಧದ ಉದ್ದೇಶವಾಗಿದೆ.

ಸ್ವರೂಪ : –

'ಮೋಹನ ತರಂಗಿಣಿ' ಒಂದು ನಿರ್ದಿಷ್ಟ ಚೌಕಟ್ಟಿನಲ್ಲಿರುವ ಕೃತಿಯಾಗಿದೆ. ೪೨ ಸಂಧಿಗಳಲ್ಲಿ ಸಾಂಗತ್ಯ ಛಂದೋರೂಪದಲ್ಲಿರುವ ಈ ಕೃತಿಯಲ್ಲಿ ೨೮೦೦ ಪದ್ಯಗಳಿವೆ. ಶ್ರೀಕೃಷ್ಣನನ್ನೇ ಈ ಕಾವ್ಯದ ಪ್ರಧಾನ ನಾಯಕನನ್ನಾಗಿ ಚಿತ್ರಿಸಲಾಗಿದೆ. ಒಂದು ಮಹಾಕಾವ್ಯದ ರೀತಿಯಲ್ಲಿ ಹೇಳ ಹೊರಟು ತಮ್ಮ ದೀರ್ಘಕಾಲದ ಬದುಕಿನಲ್ಲಿ ಕಂಡ ವಿಜಯನಗರ ಸಮಾಜದ ಏಳು-ಬೀಳುಗಳನ್ನು ಚಿತ್ರಿಸುವ, ೧೬ ನೆಯ ಶತಮಾನದ ಸಮಾಜ ಕಂಪನವನ್ನು ಕಾವ್ಯದಲ್ಲಿ ಮೂಡಿಸುವ ರೀತಿಯಲ್ಲಿ ಕನಕದಾಸರ ಕಾಳಜಿ ಈ ರಚನೆಯಲ್ಲಿದೆ. ಕನಕದಾಸರ ಸೂಕ್ಷ್ಮದೃಷ್ಟಿ ಅವರ ವರ್ಣನೆಗಳ ಭಾಗದಲ್ಲೂ ಬಹಳ ನೇರವಾಗಿ ಪ್ರತಿಬಿಂಬಿತವಾಗಿದೆ. 'ಮೋಹನ ತರಂಗಿಣಿ' ಯ ಮುಖ್ಯ ಮೋಹಿನಿಯೆಂದರೆ ವಿವಿಧ ವರ್ಣನೆಗಳ ವೈವಿಧ್ಯ ಮತ್ತು ಸ್ವಭಾವೋಕ್ತಿ. ಹದಿನೆಂಟು ವರ್ಣನೆಗಳ ರಸಗಳನ್ನು ಒಳಗೊಂಡಿರುವ ಇದೊಂದು ಅತ್ಯುತ್ತಮ ವರ್ಣಕ ಕಾವ್ಯವಾಗಿದೆ. ಕನ್ನಡ ಸಾಹಿತ್ಯದಲ್ಲಿ ಅದ್ವಿತೀಯವಾದ ಸಾಂಗತ್ಯ ಕೃತಿಯಿದು. ಮಾತ್ರವಲ್ಲ, ಕನಕದಾಸರ ಮೊದಲ ಕೃತಿ ಕೂಡ ಇದೇ ಆಗಿದೆ ಎಂಬುದು ವಿದ್ವಾಂಸರ ಅಭಿಪ್ರಾಯ. ಮೋಹನ ತರಂಗಿಣಿ ಹತ್ತು ಹಲವು ದೃಷ್ಟಿಯಿಂದ ಹೊಸತನವನ್ನು ಹೊಂದಿದೆ. ಕವಿ ಹೃದಯದ ಕನಕದಾಸರು ತನ್ನ ಸ್ವಾನುಭವ

ಸಂಪನ್ನತೆಯನ್ನು ಮೋಹನ ತರಂಗಿಣಿಯಲ್ಲಿ ಸಾಕಷ್ಟು ಮೆರೆದಿದ್ದಾರೆ. ಸ್ಕಂದ ಪುರಾಣದ ಮಾಹೇಶ್ವರ ಖಂಡದ ಕೇಂದಾರ ಖಂಡ, ಕೌಮಾರಿಕ ಖಂಡ, ವಿಷ್ಣುಪುರಾಣ, ಮಹಾಭಾರತದ ಸಭಾಪರ್ವ, ಭಾಗವತದ ದಶಮ ಸ್ಕಂದ, ಹರಿವಂಶದ ವಿಷ್ಣು ಪರ್ವದ ಜೊತೆಗೆ ಜೈನ ನೇಮಿನಾಥ ಪುರಾಣಗಳಲ್ಲಿನ ಕಾಮದ ಕಥೆಯನ್ನು ಎತ್ತಿಕೊಂಡು ಕನಕದಾಸರು ಮೋಹನ ತರಂಗಿಣಿಯ ಶರೀರವನ್ನು ಕಟ್ಟಿದ್ದಾರೆ. ಇನ್ನೂ ಹಲವಾರು ಕವಿಗಳ ಕಾವ್ಯಗಳನ್ನು ಓದಿ, ಮೆಚ್ಚಿ ತನ್ನ ಕಾವ್ಯಕ್ಕೆ ಪ್ರೇರಕವಾಗಿ ದುಡಿಸಿಕೊಂಡಿದ್ದಾರೆ. ತನ್ನ ಕಾಲದ ಅರಸ ವಿಜಯನಗರದ ಶ್ರೀ ಕೃಷ್ಣದೇವರಾಯನನ್ನೇ ಇಟ್ಟುಕೊಂಡು, ಅವನ ಗುಣಗಾನ ಮಾಡುತ್ತಾ ಶ್ರೀ ಕೃಷ್ಣನೊಂದಿಗೆ ಸಮೀಕರಿಸುವ ಪ್ರಯತ್ನ ಮಾಡಿದ್ದಾರೆ. ವಿಜಯನಗರ ಸಾಮ್ರಾಜ್ಯದ ಸಂಪತ್ತಿನ ಅಗಾಧತೆಯನ್ನು, ಕೃಷ್ಣದೇವರಾಯನ ಅಪೂರ್ವವಾದ ಆದರ್ಶಗಳನ್ನು ಸಹಜವಾಗಿ ಕಾವ್ಯದಲ್ಲಿ ಬಳಸಿಕೊಂಡು ಶ್ರೀಕೃಷ್ಣನ ಲೀಲಾ ವಿನೋದಗಳಿಗೆ ಯಥಾರ್ಥತೆಯನ್ನು, ಸಹಜತೆಯನ್ನು ಪ್ರಾಪ್ತಿಸಿದ್ದಾರೆ. ಕನಕದಾಸರು ತಮ್ಮ ಕಾಲದ ಸಾಂಸ್ಕೃತಿಕತೆಯೊಂದಿಗೆ ಮುಖಾಮುಖಿ ನಡೆಸಿದ್ದಂತೆ ಅನ್ನಿಸುತ್ತದೆ. ಈ ರೀತಿ ಪೌರಾಣಿಕ ಕಥೆಯೊಂದನ್ನು ಜನಪದ ಚೌಕಟ್ಟಿನಲ್ಲಿ ಕಟ್ಟುವ ಪ್ರಯತ್ನದ ಫಲವಾಗಿ ಕನಕದಾಸರ ಮೋಹನ ತರಂಗಿಣಿ ಇತರ ಕಾವ್ಯಗಳಿಗಿಂತ ಪ್ರತ್ಯೇಕವಾಗಿ ನಿಲ್ಲುತ್ತದೆ. ಪ್ರಸ್ತುತ ನಿಬಂಧದ ಅಧ್ಯಯನವು ಮೋಹನ ತರಂಗಿಣಿಯಲ್ಲಿ ಮೂಡಿ ಬಂದ ಶೃಂಗಾರ, ಶೌರ್ಯ, ಭಕ್ತಿ ಮತ್ತು ಸಮಕಾಲೀನ ಚಿತ್ರಣವನ್ನು ಚಿತ್ರಿಸುವ ಸ್ವರೂಪ ಹೊಂದಿದೆ.

ವ್ಯಾಪ್ತಿ :-

ಈ ನಿಬಂಧವು ಆರು ಅಧ್ಯಾಯಗಳನ್ನು ಒಳಗೊಂಡಿದೆ. ಕನಕದಾಸರ ಮೋಹನ ತರಂಗಿಣಿಯನ್ನು ಹಲವು ಬಾರಿ ಓದಿ, ಅದಕ್ಕೆ ಪೂರಕವಾಗಿ ಅರ್ಥೈಸಲು ಲಭ್ಯವಿರುವ ಇತರ ಆಕರ ಕೃತಿಗಳನ್ನು ಓದಿ, ಕನದಾಸರು ಬರೆದ ಹಲವಾರು ಕೀರ್ತನೆಗಳು, ಕೃತಿಗಳನ್ನು ಅರ್ಥೈಸಿಕೊಳ್ಳಲು ಪ್ರಯತ್ನಿಸಿ, ವಿದ್ವಾಂಸರ ಜೊತೆ ಚರ್ಚಿಸಿ, ಕೃತಿಯ ಅಂತರಂಗದ ಒಳತೋಟಿಯನ್ನು ಅರಿಯುವ ಪ್ರಯತ್ನ ಮಾಡಲಾಗಿದೆ. ಪ್ರಮುಖವಾಗಿ ಮೋಹನ ತರಂಗಿಣಿಯಲ್ಲಿ ಮೂಡಿ ಬಂದ ಶೃಂಗಾರ, ಭಕ್ತಿ ಮತ್ತು ಸಮಕಾಲೀನದ ಸಾಂಸ್ಕೃತಿಕ ಚಿತ್ರಣವನ್ನು ಬಿಂಬಿಸುವ ಪ್ರಯತ್ನ ಮಾಡಲಾಗಿದೆ.

ಅಧ್ಯಾಯ – ೨

ಕವಿ ಪರಿಚಯ

ಅ. ಕನಕದಾಸರ ಜೀವನ :–

ಕನ್ನಡ ಹರಿದಾಸ ಸಾಹಿತ್ಯ ಪರಂಪರೆಯಲ್ಲಿ ಕನಕದಾಸರು ಅಗ್ರಗಣ್ಯರು. ದಾಸಸಾಹಿತ್ಯದ ಸುವರ್ಣ ಯುಗದ ಪ್ರವರ್ತಕರಲ್ಲೊಬ್ಬರು. ಕನಕದಾಸರು ಯಾವ ಮತವನ್ನೂ ಬಿಡದೆ, ಯಾವ ಮತಕ್ಕೂ ಅಂಟಿಕೊಳ್ಳದೆ ಸಕಲ ತತ್ವಗಳನ್ನೂ ಮೀರಿ ವಿಶ್ವಮಾನವರಾಗಿ ವಿಜೃಂಭಿಸಿದ ಯೋಗ ಪುರುಷರು. ಭಕ್ತ ಶ್ರೇಷ್ಠರೂ, ಪವಾಡ ಪುರುಷರೂ ಮಾತ್ರವಲ್ಲದೆ, ಮೇಲ್ಮಟ್ಟದ ಕವಿಯೂ, ವಾಗ್ಗೇಯಕಾರರೂ ಆಗಿ ಕನ್ನಡ ನುಡಿ ಭಂಡಾರವನ್ನು ತುಂಬಿದ್ದಾರೆ.

ಕನಕದಾಸರ ತಂದೆ ಬೀರಪ್ಪ, ತಾಯಿ ಬಚ್ಚಮ್ಮ. ವಿಜಯನಗರದ ಆಡಳತಕ್ಕೊಳಪಟ್ಟ ಧಾರವಾಡ ಜಿಲ್ಲೆಯ ಬಂಕಾಪುರ ತಾಲ್ಲೂಕಿನ ಬಾಡ ಗ್ರಾಮವು ಕನಕದಾಸರ ಜನ್ಮಸ್ಥಳ. ಸುತ್ತಮುತ್ತಲಿನ ಹತ್ತಿಪ್ಪತ್ತು ಗ್ರಾಮಗಳ ಮಾಂಡಳಕನಾದ ಬೀರಪ್ಪ ನಾಯಕನಿಗೆ ವೃದ್ಧಾಪ್ಯ ಸಮೀಪಿಸುತ್ತಿದ್ದರೂ, ಸಕಲ ಲೌಕಿಕ ಅನುಕೂಲಗಳಿದ್ದರೂ ಮಕ್ಕಳಾಗಲಿಲ್ಲ. ಆದರೂ ಬೀರಪ್ಪ ದಂಪತಿಗಳು ಹತಾಶರಾಗದೆ, ತಿರುಪತಿಯ ವೆಂಕಟರಮಣಸ್ವಾಮಿಗೆ ಶರಣು ಬಿದ್ದು, ನಿಶ್ಚಲ ಭಕ್ತಿಯುತರಾಗಿ ವರ್ಷಾನುಗಟ್ಟಲೆ ಸೇವೆ ಸಲ್ಲಿಸಿದರು. ತತ್ಫಲವಾಗಿ ವಯೋವೃದ್ಧ ದಂಪತಿಗಳಿಗೆ ಗಂಡು ಮಗು ಜನಿಸಿತು. ಈ ಮಗುವು ತಿರುಪತಿಯ ತಿಮ್ಮಪ್ಪನ ವರ ಪ್ರಸಾದವಾದ್ದರಿಂದ "ತಿಮ್ಮಪ್ಪ" ನೆಂದೇ ಹೆಸರಿಡಲಾಯಿತು. ತಂದೆಯ ಮರಣದ ನಂತರ ತಿಮ್ಮಪ್ಪನಾಯಕನು ಸಂಸ್ಥಾನದ ಮಾಂಡಳಕನಾದನು. ಮುಂದೆ ಇದ್ದಕ್ಕಿದ್ದಂತೆ ಭೂ-ಶೋಧನೆಯನ್ನು ಮಾಡುತ್ತಿದ್ದಾಗ ಅಪಾರ ಧನರಾಶಿಯು ಲಭ್ಯವಾದ್ದರಿಂದ 'ಕನಕ' ನಾಯಕ ಎಂದು ಕರೆಯಲ್ಪಟ್ಟನು.

ಆದರೆ ಒಂದಾದ ನಂತರ ಒಂದು ಬಂದ ತಂದೆ, ತಾಯಿ, ಮಡದಿಯ ಸಾವು ಕನಕನಾಯಕನನ್ನು ವೈರಾಗ್ಯದೆಡೆಗೆ ಮೂಡಿಸಿತು. ಕಾಗಿನೆಲೆಯ ಆದಿಕೇಶವನಿಗೆ ತನ್ನ ಸರ್ವ ಸಂಪತ್ತನ್ನು ಅರ್ಪಿಸಿದನು. ಹೀಗೆ ಕನಕದಾಸರು ಹಾಲು ಮತಸ್ಥ ಕುರುಬರಾಗಿ ಜನಿಸಿ, ಮಾಂಡಳಕ ಅಧಿಕಾರ ನಡೆಸಿ, ಪುಣ್ಯವಶವಾಗಿ ದೊರೆತ ಕನಕ ಕೊಪ್ಪರಿಗೆಗಳ ಮಹದೈಶ್ವರ್ಯವನ್ನು ಸ್ವಾಮಿ ಸೇವೆಗಾಗಿ ವಿನಿಯೋಗಿಸಿ ಹರಿದಾಸರಾದರು ಎಂಬುದು ಸರ್ವಸಮ್ಮತ.

ಕಾಲನಿರ್ಣಯ : -

ಕನಕದಾಸರ ಕಾಲ ವಿಚಾರವನ್ನು ತಿಳಿಯಲು ಖಚಿತವಾದ ಯಾವ ಮಾಹಿತಿಯು ದೊರೆಯುವುದಿಲ್ಲ. ಕನಕದಾಸರ ಸಮಕಾಲೀನರು, ವ್ಯಾಸರಾಯರ ಮತ್ತೊಬ್ಬ ಶಿಷ್ಯರು ಆದ ಪುರಂದರದಾಸರ ಕಾಲ ಸುಮಾರು ೧೪೮೦ ರಿಂದ ೧೫೬೫. ಪುರಂದರದಾಸರ ವೈಕುಂಠ ಯಾತ್ರೆಯ ಅನಂತರವೂ ಕನಕದಾಸರು ಬದುಕಿದ್ದರೆಂಬ ಮಾತಿದೆ. ಕನಕದಾಸರು ತಮ್ಮ ಮೋಹನ ತರಂಗಿಣಿ ಕಾವ್ಯದ ಪ್ರಾರಂಭದಲ್ಲಿ ಕವಿ ಕುಮಾರವ್ಯಾಸ ಹಾಗೂ ಕುಮಾರ ವಾಲ್ಮೀಕಿಗಳನ್ನು ನೆನೆಯುತ್ತಾರೆ.

ಉರಗಾಲಯದ ಪೆಸರ್ವಡೆದವನ ಮತ್ತೊಬ್ಬೆ
ದರಜಾತೆಯಾತ್ಮಸಂಭವನ
ವರ ಪುರಾಣಂಗಳ ಕನ್ನಡಸಿದ ಕವೀ
ಶ್ವರರ ಕೊಂಡಾಡುವೆ ಮುದದಿ (೧-೧೭)

ಕುಮಾರವಾಲ್ಮೀಕಿಯ ಕಾಲ ಸುಮಾರು ಕ್ರಿ.ಶ. ೧೫೦೦ ಮತ್ತು ಕುಮಾರವ್ಯಾಸನ ಕಾಲ ಸುಮಾರು ಕ್ರಿ.ಶ. ೧೪೩೦. ಆದ್ದರಿಂದ ಕನಕದಾಸರು ಅವರಿಬ್ಬರಿಗಿಂತ ನಂತರದವರೆಂಬುದು ಸ್ಪಷ್ಟವಾಗುತ್ತದೆ. ಅಂತೆಯೇ ಕ್ರಿ.ಶ. ೧೭ ನೇಯ ಶತಮಾನದ ಕಾಖಂಡಕಿ ಕೃಷ್ಣರಾಯರು ತಮ್ಮ ಒಂದು ಕೀರ್ತನೆಯಲ್ಲಿ ಅನ್ನಮಾಚಾರ್ಯರೊಂದಿಗೆ ಕನಕದಾಸರನ್ನೂ ಹರಿಭಕ್ತಿ ಉಲ್ಲಾಸಕರೆಂದು ಕರೆದು ಭಕ್ತಿಯಿಂದ ಸ್ಮರಿಸಿದ್ದಾರೆ. ಆದ್ದರಿಂದ ಕನಕದಾಸರು ಕೃಷ್ಣರಾಯರಿಗಿಂತ ಹಿಂದೆ ಇದ್ದವರೆಂಬುದು ನಿರ್ವಿವಾದ. ಮೋಹನ ತರಂಗಿಣಿ ಕಾವ್ಯದಲ್ಲಿ ಕೃಷ್ಣದೇವರಾಯನ ಕಾಲದ ವಿಜಯನಗರದ ವೈಭವಯುತ ವರ್ಣನೆ ಇದೆ. ಸಮಕಾಲೀನ ಸಮಾಜದ ಯಥಾಸ್ಥಿತಿಯ ವರ್ಣನೆಯಿದಾಗಿದೆ ಎಂಬುದು ಎಲ್ಲ ವಿದ್ವಾಂಸರ ಅಭಿಪ್ರಾಯ. ಕೃಷ್ಣದೇವರಾಯನ ಆಳ್ವಿಕೆಯ ಕಾಲ ಕ್ರಿ.ಶ. ೧೫೦೯ ರಿಂದ ೧೫೩೦. ಅಲ್ಲದೇ ಮೋಹನ ತರಂಗಿಣಿ ಕಾವ್ಯದಲ್ಲಿ ಬರುವ 'ಪೆಟಲಂಬಿ' ಉಲ್ಲೇಖವನ್ನು ಗಮನಿಸಿದಾಗ. ಕ್ರಿ.ಶ. ೧೫೨೦ ರಲ್ಲಿ ನಡೆದ ರಾಯಚೂರಿನ ಯುದ್ಧದಲ್ಲಿ ಪೆಟಲಂಬುಗಳನ್ನು ಬಳಸಿದ್ದರೆಂಬುದು ಇತಿಹಾಸಕಾರರ ಅಭಿಪ್ರಾಯ. ಆದ್ದರಿಂದ ಮೋಹನ ತರಂಗಿಣಿ ಕಾವ್ಯವು ಕ್ರಿ.ಶ. ೧೫೨೦ ರ ನಂತರವೇ ರಚಿತವಾಯಿತೆಂಬುದು ಖಚಿತ. ಮೋಹನ ತರಂಗಿಣಿಯ ಇನ್ನೊಂದು ಕಡೆ ವ್ಯಾಸರಾಯರ ಇನ್ನೊಬ್ಬ ಶಿಷ್ಯರಾದ. ಸೋದೆಯಲ್ಲಿ ತ್ರಿವಿಕ್ರಮ ದೇವರನ್ನು ಪ್ರತಿಷ್ಠಾಪಿಸಿರುವ ವಾದಿರಾಜರನ್ನು ಪರೋಕ್ಷವಾಗಿ ಸ್ತುತಿಸಿದ್ದಾರೆ. ತಮ್ಮನ್ನು 'ತ್ರಿವಿಕ್ರಮದಾಸಸ್ಯದಾಸ' ಎಂದು ಕರೆದುಕೊಂಡಿದ್ದಾರೆ.

ಇನ್ನೊಂದು ಮಹತ್ವದ ವಿಚಾರವೆಂದರೆ ಅನಿರುದ್ಧನ ಜನ್ಮದಿನವೆಂದು ಹೇಳಿರುವ "ಆನಂದ ಸಂವತ್ಸರ, ಮಾಘಶುದ್ಧ ನವೀನ ಪಂಚಮಿ, ಆದಿವಾರ, ಭಾನುಉದಯದ ಸ್ವಾತಿಯ ನಕ್ಷತ್ರದೆ" ಎಂಬ ತಿಥಿಯನ್ನೇ ಕನಕದಾಸರ ಜನ್ಮದಿನವೆಂದು ವಿದ್ವಾಂಸರು ಅನುಮಾನಿಸಿದ್ದಾರೆ. ಕನಕದಾಸರು ಕ್ರಿ.ಶ. ೧೫ನೇ ಶತಮಾನದ ಕೊನೆಯ ಭಾಗದಲ್ಲಿ ಹುಟ್ಟಿರುವ ಸಂಭಾವ್ಯತೆಯಿರುವುದರಿಂದ ಕ್ರಿ.ಶ. ೧೪೯೬-೯೭ನೇ ಇಸವಿಯಲ್ಲಿ ಆನಂದನಾಮ ಸಂವತ್ಸರ ದಲ್ಲಿ ಹುಟ್ಟಿರಬಹುದಾದ ಸಂಭಾವ್ಯತೆಯನ್ನೂ ತೆಗೆದುಹಾಕುವಂತಿಲ್ಲ. ಈ ಎಲ್ಲ ಅಂತರ್‌ಬಾಹ್ಯ ಪ್ರಮಾಣಗಳನ್ನು ಆಧರಿಸಿ ಕನಕದಾಸರ ಕಾಲವನ್ನು ಸುಮಾರು ೧೪೯೬-೧೫೭೯ ಎಂದು ನಂಬಬಹುದು. ಆದರೂ ಅನೇಕ ವಿದ್ವಾಂಸರು ಅವರ ಕಾಲವನ್ನು ಕ್ರಿ.ಶ. ೧೫೦೯ - ೧೬೦೬ ಎಂದು ಭಾವಿಸಿದ್ದಾರೆ. ನಿಖರವಾದ ಕಾಲವನ್ನು ವಿದ್ವಾಂಸರು ಉಲ್ಲೇಖಿಸಿಲ್ಲ.

ಸಮಕಾಲೀನ ಹರಿದಾಸ ಪ್ರಭಾವ : -

ವಿಜಯನಗರ ದೊರೆಗಳಿಂದ ವಿಶೇಷ ಮನ್ನಣೆ ಪಡೆದ ವ್ಯಾಸರಾಯರು ವ್ಯಾಸಮಠದ ಸ್ವಾಮಿಯಾದರು. ಶ್ರೇಷ್ಠ ತರಗತಿಯ ಪಂಡಿತರೂ, ಯತಿಯೂ ಆಗಿ ತತ್ಕಾಲೀನ ಜನಜೀವನದ ಮೇಲೆ ಪ್ರಭಾವ ಬೀರಿ. ಶಿಷ್ಯರ ಮೂಲಕ ದಾಸಕೂಟ ವಾಙ್ಮಯಕ್ಕೆ ಎತ್ತರದ ಪೀಠವನ್ನು ಕಲ್ಪಿಸಿಕೊಟ್ಟು ಕನ್ನಡ ಜನತೆಗೆ ಮಹದೋಪಕಾರ ಮಾಡಿದ ಮಹಾವ್ಯಕ್ತಿ ವ್ಯಾಸರಾಯರು.

'ದಾಸ ಶ್ರೇಷ್ಠ' ಎಂದು ಹೊಗಳಿಸಿಕೊಂಡ ಪುರಂದರದಾಸರು, ಸಿರಿತನದ ಮಡಿಲಲ್ಲಿ ಬೆಳೆದು ಯಾವುದೊ ಒಂದು ಪ್ರಸಂಗದಲ್ಲಿ ಎಲ್ಲವನ್ನೂ ತ್ಯಾಗ ಮಾಡಿ ವೈರಾಗಿಯಾದರು. ವ್ಯಾಸರಾಯರಿಂದ ದಾಸ ದೀಕ್ಷೆ ಪಡೆದರು. ಪುರಂದರದಾಸರಿಗೆ ಸಮತೂಕವಾಗಿ, ಸ್ವತಂತ್ರ ಕ್ರಾಂತಿಯುಳ್ಳವರೂ ಆದ ಕನಕದಾಸರು ಪುರಂದರದಾಸರ ಸಮಕಾಲೀನರು. ಕಾಗಿನೆಲೆಯಲ್ಲಿ ಆದಿಕೇಶವನ ಗುಡಿಯನ್ನು ಕಟ್ಟಿಸಿ, ಅವನನ್ನೇ ತನ್ನ ಆರಾಧ್ಯ ದೈವವನ್ನಾಗಿ ಮಾಡಿಕೊಂಡರು. ಪುರಂದರದಾಸರು ಸರ್ವಸ್ವ ತ್ಯಾಗ ಮಾಡಿ ವಿಜಯನಗರಕ್ಕೆ ಬಂದಂತೆ ಕನಕದಾಸರು ಬಡತನದ ವ್ರತವನ್ನು ಕೈಕೊಂಡು ವ್ಯಾಸರಾಯರ ಅಚ್ಚುಮೆಚ್ಚಿನ ಶಿಷ್ಯರಾದರು. ಮಾಧ್ವ ಪರಂಪರೆಯ ಭಕ್ತರಾದರು. ಆದರೂ ಅವರ ಕೃತಿಗಳನ್ನು ವಿಮರ್ಶಿಸಲಾಗಿ, ಸ್ವೀಕಾರ ಮಾಡಿದ ಮತದ ಬಗ್ಗೆ ಸಂದೇಹ, ಗೊಂದಲಗಳಿವೆ.

“ಮೊದಲು ಶ್ರೀ ರಾಮನುಜಮತದ ಶ್ರೀ ವೈಷ್ಣವ ತತ್ವವನ್ನು ಸ್ವೀಕರಿಸಿ ‘ಮೋಹನ ತರಂಗಿಣಿ’ ಮೊದಲಾದ ಗ್ರಂಥಗಳನ್ನು ಬರೆದಿದ್ದರೂ ‘ಹರಿಭಕ್ತಿಸಾರ’ ದಲ್ಲಿಯೂ ಉಳಿದ ಪದ ಪದ್ಯಗಳಲ್ಲಿಯೂ ಮಾಧ್ವ ಸಂಪ್ರದಾಯದ ಪ್ರಮೇಯಗಳನ್ನು ಎತ್ತಿ ಹಿಡಿದಿದ್ದಾರೆ. ಆದ್ದರಿಂದ ಇವರು ಕಡೆಯ ಭಾಗದಲ್ಲಿ ಮಾಧ್ವ ವೈಷ್ಣವರಾಗಿ ಕಾಗಿನೆಲೆಯಲ್ಲಿ ನೆಲೆಸಿ ಅಲ್ಲಿಯೇ ಹರಿಪದವನ್ನೈದಿದರೆಂದು ತಿಳಿಯಬಹುದು”[೧] ಎಂದು ಪಂಚಮುಖಿಯವರು ಹೇಳಿದ್ದಾರೆ. ಕನಕದಾಸರು ಶ್ರೀ ವೈಷ್ಣವ ಸಂಪ್ರದಾಯದವರೇ ಆಗಿರಬೇಕು ಎಂಬ ಕೆಲವರ ವಾದಕ್ಕೆ ಇದು ಉತ್ತರ. ಆದರೆ ಪ್ರಾರಂಭದಲ್ಲೊಂದು ಮತ, ಆನಂತರ ಇನ್ನೊಂದು ಮತ ಎಂಬ ಸಂಪ್ರದಾಯ ಸ್ವೀಕಾರದ ಕಟ್ಟಿನಲ್ಲಿ ಕನಕದಾಸರನ್ನು ಇರಿಸುವುದು ಅವರಿಗೆ ಅನ್ಯಾಯವೆಂದು ನಮಗೆ ತೋರುತ್ತದೆ. ಪುರಂದರ ದಾಸರಿಗೂ, ಕನಕದಾಸರಿಗೂ ಈ ವಿಷಯದಲ್ಲಿ ಮೂಲಭೂತ ಭೇದವಿದೆ. ಪುರಂದರದಾಸರು ತನ್ನ ಗುರುವನ್ನು, ಮಾಧ್ವಮತವನ್ನು ಸಮಗ್ರವಾಗಿ ಸ್ವೀಕರಿಸಿ, ಅದರ ಸತತವಾದ ಆಚರಣೆಯಲ್ಲಿ ಅಳವಡುವಷ್ಟು ವಿಶಾಲಭಾವನೆಯನ್ನೂ, ಸರ್ವಸಂಗ್ರಹ ವೃತ್ತಿಯನ್ನೂ ತೋರಿದರು. ಆದರೆ ಕನಕದಾಸರು ಬೆಳೆದಂತೆ ಎಲ್ಲ ಮೇಲಾದ ಸಂಸ್ಕಾರಗಳಿಗೆ ಒಳಗಾಗಿ ಭಾಗವತ ಧರ್ಮದೃಷ್ಟಿಯನ್ನು ಸ್ಥಿರಪಡಿಸಿಕೊಂಡರು. ಯಾವುದೊಂದೂ ಮತದ ಪಡಿಯಚ್ಚಿನಲ್ಲಿ ಮಾತ್ರ ಬೆಳೆಯದೆ ಎಲ್ಲ ಮತದ ಸಾರಗ್ರಾಹಿಯಾದ ಪರಮಭಕ್ತರಾಗಿದ್ದರು. ಹೀಗಿದ್ದರೂ ರಾಮಾನುಜ ಮತವು ಮನೆತನದ ಸಂಪ್ರದಾಯದ ಮೂಲಕವೂ, ಆಮೇಲಿನ ಸಂಪರ್ಕಗಳಿಂದಲೂ, ಗಾಢ ಸಂಸ್ಕಾರಗಳನ್ನು ಉಂಟುಮಾಡಿದಂತೆ ಕಂಡು ಬರುತ್ತದೆ. ಅವರ ಮೇಲಾದ ಇನ್ನೊಂದು ಪ್ರಬಲ ಸಂಸ್ಕಾರವೆಂದರೆ ಮಾಧ್ವ ಮತದ್ದು.

“ಆದರೆ ಅದು ಮಾಧ್ವಮತ ತತ್ವ, ಸಂಪ್ರದಾಯ ಇವುಗಳ ಸಮಗ್ರ ಸ್ವೀಕಾರದ ಸ್ವರೂಪವನ್ನು ತಾಳಿರಲಾರದು. ಮಾಧ್ವಗುರುಗಳ ಹಾಗೂ ಹರಿಭಕ್ತರ ಸರ್ವಾರ್ಪಣದ ಜೀವನವು ದಾಸರನ್ನು ಮುಗ್ಧಮಾಡಿತು. ಹರಿವಾಯುಗಳ ಉಪಾಸನೆ ಅವರ ಮನ ಸೆಳೆಯಿತು. ಕನಕದಾಸರು ಕಾಲದೇಶ ಮತ ತತ್ವಗಳನ್ನು ಮೀರಿದ ದೇವ ಜೀವಿಗಳು, ಸರ್ವಸಮದರ್ಶಿಗಳು.” [೨]

---

[೧] ರಾ.ಸ್ವಾ.ಪಂಚಮುಖಿ : ‘ಹರಿದಾಸ ಸಾಹಿತ್ಯ’ ಪು.೩೩

[೨] ರಂ.ಶ್ರೀ. ಮುಗಳಿ ಕನಕದಾಸರು(ಜೀವನ.೨-೮, ಪು. ೪೫೭)

ಪುರಂದರದಾಸರು ಕನಕದಾಸರನ್ನು ಕುರಿತು ಹಾಡಿದ ಒಂದು ಪದ್ಯದಲ್ಲಿ

" ಕನಕದಾಸನ ಮೇಲೆ ದಯಮಾಡಲು ವ್ಯಾಸ
ಮುನಿ ಮಠದವರೆಲ್ಲ ದೂರಿಕೊಂಬುವರೋ ॥"

ಎಂದಿದ್ದಾರೆ. ಈ ಪದ್ಯದಿಂದಾಗಿ ನಮಗೆ ತಿಳಿದು ಬರುವುದೇನೆಂದರೆ ಕನಕದಾಸರು ಬ್ರಾಹ್ಮಣೇತರ ಜಾತಿಗೆ ಸೇರಿದವರಾಗಿದ್ದರೂ, ವ್ಯಾಸರಾಯರ ಮಠದಲ್ಲಿ ಅವರು ಗುರುಗಳ ಪ್ರೀತಿಗೆ ಪಾತ್ರರಾಗಿದ್ದರು. ಆದರೆ ಉಳಿದ ಶಿಷ್ಯವರ್ಗವು ಗುರು ದಯೆ ಕನಕದಾಸರ ಮೇಲೆ ಇರುವುದನ್ನು ಸಹಿಸಿಕೊಳ್ಳುತ್ತಿರಲಿಲ್ಲ.

ಕನಕದಾಸರ ನಯ, ವಿನಯ, ಮಹಿಮೆಗಳನ್ನು ಸ್ವತಃ ವ್ಯಾಸರಾಯರೇ ಮೆಚ್ಚಿರುವುದನ್ನು ವ್ಯಾಸರಾಯರು ಕನಕದಾಸರನ್ನು ಕುರಿತು ಹೇಳಿರುವ ಈ ಪದ್ಯದ ಮೂಲಕ ತಿಳಿಯಬಹುದು.

' ನೋಡಿದಿರ, ಈ ಕನಕನಾಡುವ ಮಾತುಗಳ
ಮೂಢ ಜನರರಿಯಬಲ್ಲರೆ ಮಹಿಮೆಯ
ನಾಡಾಡಿಯಂತೆಯೇ ಮಾಡಿಬಿಟ್ಟರು ಇವಗೆ
ನಾಡೆಲ್ಲ ಹುಡುಕಿದರು ಈಡಾರ ಕಾಣೆ ॥

ಎಂದು ಹೊಗಳಿದ್ದಾರೆ.

ಕನಕದಾಸರು ಉಡುಪಿಗೆ ಹೋದಾಗ ಶ್ರೀಕೃಷ್ಣನ ಅನುಗ್ರಹಕ್ಕೆ ಪಾತ್ರರಾಗಿದ್ದರೆಂದು 'ಕನಕನ ಕಿಂಡಿ' ಎಂಬ ವಿಶಿಷ್ಟ ಕುರುಹಿನಿಂದ ಗೊತ್ತಾಗುತ್ತದೆ. ಹೀಗೆ ದಾಸ ಪರಂಪರೆಯ, ಪುರಂದರದಾಸರ ಸಮಕಾಲೀನರಾದ ಮತ್ತು ವ್ಯಾಸರಾಯರ ಮೆಚ್ಚಿನ ಶಿಷ್ಯರು ಕನಕದಾಸರಾಗಿದ್ದರು. ಜ್ಞಾನಿಗಳಾದ ವ್ಯಾಸರಾಯರು ಕನಕದಾಸರ ಯೋಗ್ಯತೆಯನ್ನರಿತು ಅವರನ್ನು ಪರೀಕ್ಷೆಗೆ ಒಳಪಡಿಸಿ ಕನಕನು ಸಾಮಾನ್ಯನಲ್ಲ, ಮಹಾಮಹಿಮನು, ಅಪರೋಕ್ಷ ಜ್ಞಾನಿಯು ಎಂಬುದನ್ನು ಜಗತ್ತಿನ ನಿದರ್ಶನಕ್ಕೆ ತಂದರು ಪರಮಾತ್ಮನ ಸಾಕ್ಷಾತ್ಕಾರಕ್ಕೆ ಅರ್ಹರು, ಅಪರೋಕ್ಷ ಜ್ಞಾನವು ಕೆಲವೇ ಜಾತಿಗಳಿಗಷ್ಟೇ ಮೀಸಲಾಗಿಲ್ಲ ಎಂದು ಸಾರಿದರು.

ಆ. ಕೃತಿಗಳು : –

ಹರಿದಾಸರಂತೆ ಕನಕದಾಸರು ಸಾವಿರಾರು ಕೀರ್ತನೆಗಳನ್ನು ಮತ್ತು ಷಟ್ಪದಿ – ಸಾಂಗತ್ಯ ಕಾವ್ಯಗಳನ್ನು ರಚಿಸಿದ್ದಾರೆ. ಅವುಗಳೆಂದರೆ :–

೧) ಮೋಹನ ತರಂಗಿಣಿ

೨) ಹರಿಭಕ್ತಿಸಾರ

೩) ನಳ ಚರಿತ್ರೆ

೪) ರಾಮಧಾನ್ಯ ಚರಿತೆ

೫) ನೃಸಿಂಹ ಸ್ತೋತ್ರ (ಅಲಭ್ಯ)

ಅಲ್ಲದೆ ತತ್ವಪದ. ಡೊಳ್ಳಿನ ಪದ ಹಾಗೂ ಮುಂಡಿಗೆಗಳು ಇವೆ. 'ಮೋಹನ ತರಂಗಿಣಿ' ಯೊಂದರಲ್ಲಿ 'ಕನಕದಾಸನ ಕಾವ್ಯ' ಎಂಬ ಉಲ್ಲೇಖವು ಆದಿಕೇಶವನ ಅಂಕಿತದೊಡನೆ ಇದೆ. ಉಳಿದ ಕೃತಿಗಳನ್ನು ಅಂಕಿತ ಬಲದಿಂದ ಮಾತ್ರ ಕನಕದಾಸರದೆಂದು ತಿಳಿಯಲಾಗಿದೆ.

ಮೋಹನ ತರಂಗಿಣಿ : – ದ್ವಾರಕಾಧೀಶ ಶ್ರೀಕೃಷ್ಣನ ಕಥೆಯುಳ್ಳ ಮೋಹನ ತರಂಗಿಣಿಯಂತೂ ಅವರ ಮಾತಿನಲ್ಲಿಯೇ ಹೇಳುವುದಾದರೆ "ಕೇಳ್ವರಿಗಿದು ತನಿಬೆಲ್ಲದಚ್ಚು". ಕನಕದಾಸರ ಮೋಹನ ತರಂಗಿಣಿ ಶೃಂಗಾರ. ಶೌರ್ಯ. ಭಕ್ತಿ ಮತ್ತು ಸಮಕಾಲೀನ ಸಾಮಾಜಿಕ ಚಿತ್ರಣದೊಡನೆ ಪ್ರಭುತ್ವವನ್ನು ಕುರಿತು ತಿಳಿಸುವ ಕೃತಿಯಾಗಿದೆ. ಸಾಂಗತ್ಯವನ್ನು ಛಂದಸ್ಸಾಗಿ ಬಳಸಿಕೊಂಡಿರುವ. ವರ್ಣನೆ ಪ್ರಧಾನವಾಗಿರುವ ಕೃತಿ. ಹರಿದಾಸರಾದ ಕನಕದಾಸರು ಕೃಷ್ಣನನ್ನು ತಮ್ಮ ಕಾವ್ಯದ ತುಂಬ ಹರಿದಾಡಿಸಿದ್ದಾರೆ. ಕನ್ನಡದಲ್ಲಿ ಮೊದಲ ಬಾರಿಗೆ ಶೃಂಗಾರದ ಭಾವದಲ್ಲಿ ಕೃಷ್ಣನ ಲೀಲೆಗಳನ್ನು ತೆರೆದಿರಿಸಿದ್ದಾರೆ. ಇಂತಹ ಲೀಲೆಗಳನ್ನು ಹೇಳಲು ಪ್ರಧಾನವಾಗಿ ಮೂರು ತಲೆಮಾರಿನ ಕಥಾವಸ್ತುವನ್ನು ಬಳಸಿಕೊಂಡಿದ್ದಾರೆ. ಇವುಗಳನ್ನು ವಿಷ್ಣುಪುರಾಣದಿಂದ ಕೃಷ್ಣ – ರುಕ್ಮಿಣಿಯರ ಪ್ರಸಂಗವನ್ನು, ಶೈವಪುರಾಣದಿಂದ ಕಾಮದಹನ ಪ್ರಸಂಗವನ್ನು, ಭಾಗವತ ಪರಂಪರೆಯಿಂದ ಬಾಣಾಸುರ ಮತ್ತು ಶಂಬರಾಸುರ ವಧೆಯ ಪ್ರಸಂಗವನ್ನು ತಂದು ಒಂದೆಡೆ ಜೋಡಿಸಿ, ಮಹಾಕಾವ್ಯಕ್ಕೊಂದು ವಸ್ತುವನ್ನು ಸೃಷ್ಟಿಸಲಾಗಿದೆ.

ಕೃಷ್ಣ– ರುಕ್ಮಿಣಿಯರ ಪ್ರೇಮಪ್ರಸಂಗ. ಮಗುವಿಗಾಗಿ ಹಂಬಲಿಸುವ ರುಕ್ಮಿಣಿಯ ಬಯಕೆ, ಇಂತಹ ಬಯಕೆ ಹುಟ್ಟುವುದಕ್ಕೊಂದು ಉದ್ದೇಶದ ಕಲ್ಪನೆ, ಹಾಗೆಯೇ ಪ್ರದ್ಯುಮ್ನನ ಜನನದ ಉದ್ದೇಶದ ಹಿಂದಿರುವ ಶಂಬರಾಸುರನ ವಧೆ. ಉಷೆಯ ಬಯಕೆಯ

ಹಿಂದೆ ಬಾಣಾಸುರನ ವಧೆ – ಹೀಗೆ ಬಯಕೆಯ ಹುಟ್ಟುವಿಕೆಯ ಹಿಂದೆ ಒಂದು ಉದ್ದೇಶವಿದೆ ಎನ್ನುವುದು ನಮ್ಮ ಧಾರ್ಮಿಕ ನಂಬಿಕೆಯನ್ನೇ ಪುನರುಚ್ಚರಿಸುತ್ತದೆ. ಇಂತಹದ್ದನ್ನು ಇಡೀ ಕಾವ್ಯದ ಒಳಹೆಣಿಗೆಯಾಗಿಯೇ ತನ್ನ ತಾತ್ವಿಕತೆಯನ್ನು ಹೊಂದಿರುವುದನ್ನು ಗಮನಿಸಿದರೆ ಕೃತಿಯು ಪಾರಂಪರಿಕ ದೃಷ್ಟಿಕೋನವನ್ನೇ ಹೊಂದಿದೆ ಎಂಬುದಾಗಿ ಹೇಳಬಹುದು. ಇದರೊಡನೆ ವರ್ಣನೆಯಲ್ಲಿಯೂ ಕಂಡುಬರುವ ಅಷ್ಟಾದಶ ವರ್ಣನೆ, ಹೆಣ್ಣಿನ ವರ್ಣನೆ, ಪ್ರಕೃತಿಯ ವರ್ಣನೆಯಲ್ಲಿನ ಪಾರಂಪರಿಕ ಅಲಂಕಾರಗಳ ಬಳಕೆಯು ಇದನ್ನೇ ಪುನರುಚ್ಚರಿಸುತ್ತದೆ. ತನ್ನ ಕಾಲದ ಪ್ರಭುತ್ವದ ಚಿತ್ರಣವನ್ನು, ಅದರಲ್ಲಿನ ಬದುಕಿನ ಕ್ರಮವನ್ನು ಹೇಗೆ ಹಿಡಿಯುತ್ತದೆ ಎಂಬುದು ಸಹ ಇದರೊಡನೆಯೆ ದಾಖಲಾಗಿದೆ. ಹೀಗಾಗಿ ಮೋಹನ ತರಂಗಿಣಿ ಒಂದು ಮಹತ್ವದ ಕಾವ್ಯವಾಗಿದೆ.

ಹರಿಭಕ್ತಿ ಸಾರ : – 'ಹರಿಭಕ್ತಿಸಾರ' ವು ಕನಕದಾಸರ ಆಧ್ಯಾತ್ಮ ಸಾಧನೆಯ, ದೈವಭಕ್ತಿ ಬೋಧನೆಯ ಸುಂದರ ಶೈಲಿಯ ಚಿಕ್ಕ ಹಾಗೂ ಚೊಕ್ಕ ಕೃತಿ. ಹರಿಭಕ್ತಿ ಸಾರವು ಭಾಮಿನಿಯ ೧೦೮ ಪದ್ಯಗಳಲ್ಲಿ ಹರಿನಾಮಸ್ತವ, ಪ್ರಾರ್ಥನೆಗಳನ್ನು ಒಳಗೊಂಡಿದೆ.

ಶ್ರೀಯರಸ ಗಾಂಗೇಯನುತ ಕೌಂ ।
ತೇಯವಂದಿತ ಚರಣ ಕಮಲದ ।
ಆಯ ತಾಂಬಕ ರೂಪ ಚಿನ್ಮಯ ದೇವಕಿತನಯ ॥
ರಾಯ ರಘುಕುಲವರ್ಯ ಭೂಸುರ ।
ಪ್ರೀಯ ಸುರಪುರನಿಲಯ ಚೆನ್ನಿಗ ।
ರಾಯ ಚತುರೋಪಾಯ ರಕ್ಷಿಸು ನಮ್ಮನನವರತ ॥

'ಹರಿಭಕ್ತಿಸಾರ'ದಲ್ಲಿ ಭಕ್ತನ ಎದೆ ತುಂಬಿದ ಮೊರೆ ತಿಳಿಯಾದ ಸರಣಿಯಲ್ಲಿದೆ. ತತ್ವ ನೀತಿಗಳ ಮಿಶ್ರಣವಿದ್ದರೂ ಆರ್ತ ಭಕ್ತಿಯ ಮತ್ತು ಶರಣವೃತ್ತಿಯ ರಸಾವೇಶವು ಅವಿರತವಾಗಿದ್ದು ಭಕ್ತಿ ಪ್ರಕೃತಿಯ ಜನರ ಪಾರಾಯಣಕ್ಕೆ ಯೋಗ್ಯವಾಗಿದೆ. ಅವರ ಪರಿಪಕ್ವ ಹೃದಯದ್ಯೋತಕವಾಗಿದೆ. " ರಕ್ಷಿಸು ನಮ್ಮನನವರತ " ಎಂದು ಪ್ರತಿ ಪದ್ಯದ ಕೊನೆಯಲ್ಲೂ ಬರುವ ೧೦೮ ಷಟ್ಪದಿಗಳ ಝೇಂಕಾರ ಸದಾ ಚಿರಕಾಲ ಉಳಿಯುವಂತಹದು. ಮಾನವನ ಪೂರ್ಣಾಯಸ್ಸಿನಲ್ಲಿ ಆಧ್ಯಾತ್ಮಿಕ ಸಾಧನೆಗೆ ಸಿಗುವ ಕಾಲ, ಪರಮಾತ್ಮನಿಗೂ ಜೀವಾತ್ಮನಿಗೂ ಇರುವ ವ್ಯತ್ಯಾಸ, ತಾಯಿಯ ಪ್ರೀತಿ,

ದೇವನಿಗೆ ಸಮಾನರು ಉಂಟೆ? ಜಗತ್ತನ್ನು ಪಾಲಿಸುವ ದೇವನೇ ನನಗೆ ಮುಕ್ತಿ ನೀಡು ಮುಂತಾದ ದೀನ ಭಾವಗಳು ಈ ಕೃತಿಯಲ್ಲಿ ವ್ಯಕ್ತವಾಗಿವೆ.

ನಳಚರಿತ್ರೆ : - ನಳಚರಿತ್ರೆಯಲ್ಲಿ ಸುಪ್ರಸಿದ್ಧವಾದ ನಳ ದಮಯಂತಿ ಕಥೆ ತುಂಬ ಸ್ವಾರಸ್ಯಕರವಾಗಿ ನಿರೂಪಿತವಾಗಿದೆ. ಇದು ಪ್ರಧಾನವಾಗಿ ಲೌಕಿಕ ಕಾವ್ಯವಾದರೂ "ಕಮಲನಾಭನ ಕರುಣ ಕವಚವು ಸವೆದರಾರೇಗುವರು" (೪-೩೫), "ದೈವದನೆನೆವ ಭಕ್ತರಿಗುಂಟೆ ಭಯವೆಲೆ ನೃಪತಿ" (೫-೫೦) ಎಂಬ ಉಕ್ತಿಗಳು ಕನಕದಾಸರ ಭಕ್ತಿಪರತೆಯನ್ನು ತೋರುತ್ತದೆ. ಕತೆಯ ಚೌಕಟ್ಟು, ಕಣ್ಣಿಗೆ ಕಟ್ಟುವಂಥ ಪಾತ್ರ ರಚನೆ, ವರ್ಣನೆಯ ತೊಡಕಿಲ್ಲದ, ಭಾರವಿಲ್ಲದ ವಸ್ತು ರಚನೆ, ನೇರವಾಗಿ ಗುರಿ ಮುಟ್ಟುವ ಶೀಘ್ರಗತಿಯ ಕ್ರಿಯೆ, ಅಲಂಕಾರಗಳ ಭಾರವಿಲ್ಲದ ಸರಳ, ಸುಂದರ, ಸರಸ ದೇಶಿ ಶೈಲಿಗಳಿಂದ ಮಿಗಿಲಾಗಿ ನಳ ದಮಯಂತಿಯರ ತ್ಯಾಗಮಯ ದೈವಿ ಪ್ರೇಮ – ಈ ಗುಣಗಳಿಂದ ಈ ಕೃತಿ ಸರ್ವಜನ ಪ್ರಿಯವಾಗಿದೆ.

ರಾಮಧಾನ್ಯ ಚರಿತೆ (ರಾಗಿ ರಾಮಾಯಣ) : - ಕನಕದಾಸರು ಈ ಕೃತಿಯನ್ನು ಭಾಮಿನಿ ಷಟ್ಪದಿಯಲ್ಲಿ ರಚಿಸಿದ್ದಾರೆ. ಇದು ೧೫೮ ಪದ್ಯಗಳ ಒಂದು ಚಿಕ್ಕ ಗಾತ್ರದ ಕೃತಿಯಾಗಿದೆ. ಜಗತ್ತಿನ ಎಲ್ಲಾ ಕಾಲ ದೇಶಗಳಲ್ಲಿ, ಜಾತಿ, ಧರ್ಮ, ಹಣ, ಅಧಿಕಾರ ತೋಳ್ಬಲ ಹಾಗೂ ಬುದ್ಧಿವಂತಿಕೆ ಇವುಗಳ ಆಧಾರದಿಂದ ಮೇಲ್ವರ್ಗದ ಜನ ಕೆಳವರ್ಗದ ಜನರನ್ನು ಹೀನಾಯವಾಗಿ ಕಾಣುವುದು, ಅಮಾನವೀಯವಾಗಿ ನಡೆಸಿಕೊಳ್ಳುವುದು, ಗುಲಾಮರಂತೆ ಬಳಸಿಕೊಳ್ಳುವುದು ನಡೆಯುತ್ತಲೇ ಬಂದಿದೆ. ಹೀಗೆ ಅವಮಾನಕ್ಕೆ, ಅವಹೇಳನಕ್ಕೆ ಒಳಗಾದವರ ನೋವು, ಒಳತುಮುಲ ಹಾಗೂ ಸ್ವಾಭಿಮಾನವನ್ನು ರೂಪಕವಾಗಿ ಕನಕದಾಸರು ಈ ಕೃತಿಯಲ್ಲಿ ಚಿತ್ರಿಸಿದ್ದಾರೆ ಎನ್ನಬಹುದು.

ಶ್ರೀಮಂತರ ಆಹಾರವಾದ ಭತ್ತ ಮತ್ತು ಬಡವರ ಆಹಾರವಾದ ರಾಗಿ ಧಾನ್ಯಗಳ ಮೂಲಕ ಕನಕದಾಸರು ಸಮಾಜದಲ್ಲಿದ್ದ ಸಂಘರ್ಷವನ್ನು ತೋರಿಸಲು ಪ್ರಯತ್ನಿಸಿದ್ದಾರೆ. ಇದರಲ್ಲಿ ಸಂಘರ್ಷವೆಂಬುದು ತಾತ್ವಿಕ ನೆಲೆಯಲ್ಲಿ ನಿರೂಪಿತವಾಗಿದ್ದರೂ ಈ ಎರಡೂ ವರ್ಗಗಳು ಸಹಮತದಿಂದ ಸಮನ್ವಯದ ರೀತಿಯಲ್ಲಿ ಬದುಕ ಬೇಕೆಂಬುದನ್ನು ಈ ಕಾವ್ಯದಲ್ಲಿ ಪ್ರತಿಪಾದಿಸಿದ್ದಾರೆ. ಇದಕ್ಕೆ ರಾಮನ ಎದುರಿನಲ್ಲಿ ಸಂಧಾನವೇರ್ಪಡಿಸಿ ರಾಜಿ ಮಾಡಿಸಿರುವುದು ಕನಕದಾಸರ ಸಮನ್ವಯ ಮನೋಧರ್ಮಕ್ಕೆ ಸಾಕ್ಷಿಯಾಗಿದೆ. ತುಂಬಿದ ಸಭೆಯಲ್ಲಿ ರಾಗಿಯನ್ನು ಎತ್ತಿ

ಕೊಂಡಾಡಿದಾಗ ಭತ್ತ ಅವಮಾನಕ್ಕೆ ಗುರಿಯಾಗಿ ತಲೆ ತಗ್ಗಿಸಿ ನಿಲ್ಲುತ್ತದೆ. ಇದನ್ನು ಗಮನಿಸಿದ ರಾಮನು ಸಮಾಧಾನ ಹೇಳುತ್ತಾ ಬರಗಾಲದಲ್ಲಿ ಬಡವರನ್ನು ಕಾಪಾಡುವ ಕಾರಣದಿಂದ ರಾಗಿಯನ್ನು ಹೊಗಳದೆಯಲ್ಲದೇ ಅನ್ಯ ಭಾವ ಇದರಲ್ಲಿ ಇಲ್ಲ. ದೀನ-ದರಿದ್ರರನ್ನು ಕಷ್ಟದಲ್ಲಿ ಕಾಪಾಡುವುದೇ ಜೀವನದ ಪರಮ ಧ್ಯೇಯ ಎಂಬುದನ್ನು ಕನಕದಾಸರು ರಾಮನ ಮೂಲಕ ಹೇಳಿಸಿದ್ದಾರೆ. ಇದು ಕನಕದಾಸರ ಸಾಮಾಜಿಕ ಕಾಳಜಿಗೆ ನಿದರ್ಶನವಾಗಿದೆ.

ಈ ಕೃತಿಯಲ್ಲಿ ಕಂಡು ಬರುವ ಪ್ರಮುಖ ಧೋರಣೆಗಳೆಂದರೆ : -

೧) ಜಾತ್ಯಾತೀತ ಮನೋಭಾವದ ಪ್ರತಿಪಾದನೆ

೨) ಸಾಮಾಜಿಕ ನ್ಯಾಯದ ಪ್ರತಿಪಾದನೆ

೩) ಜಾತಿ ಮತ್ತು ಕೋಮು ಸಾಮರಸ್ಯದ ಪ್ರತಿಪಾದನೆ

೪) ಸಮಾನತೆಯ ಪ್ರತಿಪಾದನೆ

೫) ಮಾನವೀಯತೆಯ ಪ್ರತಿಪಾದನೆ

ಒಟ್ಟಾರೆಯಾಗಿ ಇಂದಿನ ಸಂದರ್ಭದಲ್ಲಿ ಎದುರಾಗುತ್ತಿರುವ ಜಾತಿ-ಧರ್ಮಗಳ ಮೂಲದಿಂದ ಸಂಘರ್ಷಗಳಿಗೆ, ಜಾತಿ-ಜಾತಿ, ಧರ್ಮ-ಧರ್ಮಗಳ ನಡುವಿನ ಸಂವಾದಕ್ಕೆ ಅಡ್ಡಿಯಾಗುತ್ತಿರುವ ಸೂಕ್ಷ್ಮ ವಿಚಾರಗಳಿಗೆ ಪರಿಹಾರದ ಉಪಾಯಗಳನ್ನು ಕನಕದಾಸರ ರಾಮಧಾನ್ಯ ಚರಿತೆ ನಮಗೆ ಸೂಚಿಸುತ್ತದೆ ಎನ್ನಬಹುದು. ಈ ಕಲ್ಪನೆಯಲ್ಲಿಯೂ ಕವಿ ತನ್ನ ಭಾಗವತಮನೋಭಾವವನ್ನೂ, ಜನತಾದೃಷ್ಟಿಯನ್ನೂ ಪ್ರಕಟಗೊಳಿಸಿದ್ದಾರೆ.

ಕನಕದಾಸರ ಕೀರ್ತನೆಗಳು : -

ಕನಕದಾಸರ ಭಕ್ತಿ ತರಂಗಿಣಿ ಅವರ ಕೀರ್ತನೆಗಳಲ್ಲಿ ಹೊರ ಹೊಮ್ಮಿದೆ. ಭಜನೆ, ಕೀರ್ತನೆಗಳನ್ನು ಹಾಡುತ್ತ ಊರೂರು ತಿರುಗಿ ಪುಣ್ಯ ಕ್ಷೇತ್ರಗಳನ್ನು ಸಂದರ್ಶಿಸಿ ಅಲ್ಲಲ್ಲಿ ನೆಲೆಸಿರುವ ದೇವನನ್ನು ಭಕ್ತಿಭಾವದಿಂದ ಸ್ತುತಿಸಿದ್ದಾರೆ. ಶಾರದಾ ದೇವಿಯನ್ನು ಗಣಪತಿಯನ್ನು ಸ್ತುತಿಸಿದ್ದಾರೆ.

ನಮ್ಮಮ್ಮ ಶಾರದೆ ಉಮಾ ಮಹೇಶ್ವರಿ ನಿಮ್ಮೊಳಗಿಹನ್ಯಾರಮ್ಮ
ಕಮ್ಮಗೊಲ್ಲನ ವೈರಿಸುತನಾದ ಸೊಂಡಿಲ ಹೆಮ್ಮೆಯ ಗಣನಾಥನೆ ॥

ಕನಕದಾಸರ ಕೀರ್ತನೆಗಳಲ್ಲಿ ಗೂಡಾರ್ಥ, ಶ್ಲೇಷಾರ್ಥ, ವ್ಯಂಗ್ಯಾರ್ಥ ಇವುಗಳು ವಿಶೇಷವಾಗಿವೆ. ಸಮಾಜದ ಕುಹಕ ನಡವಳಿಕೆ, ಢಂಬಾಚಾರಗಳನ್ನು ದಾಕ್ಷಿಣ್ಯಪರರಾಗದೆ ಉಗ್ರವಾಗಿ ತಮ್ಮ ಕೀರ್ತನೆಗಳ ಮೂಲಕ ಖಂಡಿಸಿದ್ದಾರೆ.

ಉಡುಪಿಯ ಶ್ರೀಕೃಷ್ಣನನ್ನು ದರ್ಶನ ಮಾಡಲು ಬಂದಾಗ ಅರ್ಚಕರು ಯಾವ ಕುಲದವರೆಂದು ಸಂಶಯದಿಂದ ಪ್ರಶ್ನಿಸಲಾಗಿ, "ಕುಲ ಕುಲವೆನ್ನುತಿಹರೆ – ಕುಲ ಯಾವುದು ನೋಡಿ ಸತ್ಯ ಸಜ್ಜನರೆ"

ಕೆಸರೊಳು ತಾವರೆ ಪುಟ್ಟಲು ಅದ ತಂದು
ಬಿಸಜನಾಭನಿಗೆ ಅರ್ಪಿಸಲಿಲ್ಲವೇ ?
ಹಸುವಿನ ಮಾಂಸದೊಳುದಿಸಿದ ಕ್ಷೀರವ
ವಸುಧೆಯೊಳಗೆ ಭೂಸುರರುಣಲಿಲ್ಲವೆ ?

ಕನಕದಾಸರ ವಾದಕ್ಕೆ ಕಿವಿಗೊಡದೆ ಅರ್ಚಕರು ಪ್ರವೇಶಕ್ಕೆ ಆಸ್ಪದ ಕೊಡದೆ ದೇವಾಲಯದ ದ್ವಾರವನ್ನು ಮುಚ್ಚಿ ಬೀಗಮುದ್ರೆ ಹಾಕಿ ಹೊರಟು ಹೋದ ಮೇಲೂ ಕನಕದಾಸರು ಬಿಡಲಿಲ್ಲ. ಆಗ ಬಲು ದೈನ್ಯದಿಂದ " ಬಾಗಿಲನು ತೆರೆದು ಸೇವೆಯನು ಕೊಡು ಹರಿಯೇ ಕೂಗಿದರೂ ಧ್ವನಿ ಕೇಳಲಿಲ್ಲವೇ ಶ್ರೀಹರಿಯೇ " ಎಂಬ ಕೀರ್ತನೆ ಹಾಡಿದ ನಂತರ ದೊಡ್ಡ ಪವಾಡವೇ ನಡೆಯಿತು. ದೇವಾಲಯದ ಪಶ್ಚಿಮ ಭಾಗದ ಗೋಡೆಯಲ್ಲಿ ಬಿರುಕು ಕಾಣಿಸಿ, ಶ್ರೀಕೃಷ್ಣನ ಮೂರ್ತಿಯೇ ಆ ದಿಕ್ಕಿಗೆ ತಿರುಗಿ ಗೋಡೆಯ ಬಿರುಕಿನಲ್ಲಿ ಉಂಟಾದ ಕಿಂಡಿಯಲ್ಲಿ ದರ್ಶನವಿತ್ತಾಗ ಆನಂದದಿಂದ ಕುಣಿದಾಡುತ್ತ ಹಲವಾರು ಕೀರ್ತನೆಗಳನ್ನು ರಚಿಸಿ, ಕೃತಜ್ಞತೆಯನ್ನು ಅರ್ಪಿಸಿದ್ದಾರೆ. ಇಂತಹ ಘಟನೆಗಳು 'ದಂತಕಥೆ' ಗಳಾಗಿರುವ ಸಾಧ್ಯತೆ ಇರಬಹುದಾದರೂ, ಇವುಗಳು ಧ್ವನಿಸುವ 'ಭಕ್ತಿಯ ಆಳ' ವನ್ನು ಅರಿಯಬಹುದು.

ಕನಕದಾಸರ ಅಂತರಂಗದ ಆಳವನ್ನೂ, ಭಕ್ತಿ ನಿರ್ಭರತೆಯನ್ನೂ ತಿಳಿಸುವ ಕೀರ್ತನೆಗಳು ಕನ್ನಡದ ಹಿರಿಯ ಭಾವಗೀತೆಗಳಾಗಿವೆ. ತನು ನಿನ್ನದು ಜೀವನ ನಿನ್ನದು, ತಲ್ಲಣಿಸದಿರು ಕಂಡ್ಯ ತಾಳು ಮನವೇ, ನೀ ಮಾಯೆಯೊಳಗೋ ನಿನ್ನೊಳು ಮಾಯೆಯೋ, ನನ್ನಿಂದ ನಾನೇ ಜನಿಸಿ ಬಂದೆನೇ – ಮೊದಲಾದವುಗಳಲ್ಲಿ ಭಾವ ಮತ್ತು ಭಕ್ತಿ ಸಮರಸವಾಗಿದೆ. ಅವರ ಕೀರ್ತನೆಗಳಲ್ಲಿ ನವೋನವಪ್ರತಿಭೆ ಸಹಜ ಲಾಸ್ಯದಿಂದ ಕುಣಿದಿದ್ದಾಳೆ. ದೇಸಿಯ ಸವಿಯ ತಿರುಳು ಮೈಗೊಂಡಿದೆ.

ಹೀಗೆ ಕನಕದಾಸರು ದಾಸ ಪರಂಪರೆಯೊಳಗೆ ನಿಂತು, ಕೀರ್ತನೆಗಳ ಕೊಡುಗೆ ಸಲ್ಲಿಸಿದುದಲ್ಲದೆ ವಸ್ತುನಿಷ್ಠ ಕೃತಿಗಳನ್ನು ರಚಿಸುವುದರ ಮೂಲಕ ಕವಿಗಳ ಸಾಲಿಗೂ ಸೇರಿದ್ದಾರೆ. ಭಗವಂತನನ್ನು ತನ್ನ ಬಂಧುವಿನಂತೆ ಅಂದರೆ ತಂದೆ, ತಾಯಿ, ಮಗ, ಸ್ನೇಹಿತ ಎಂದು ಭಾವಿಸಿ ನಡೆದುಕೊಂಡ ನಿದರ್ಶನಗಳಲ್ಲಿ ಅನೇಕ ಕೀರ್ತನೆಗಳನ್ನು ರಚಿಸಿದ್ದಾರೆ. ಕೆಲವು ವೇಳೆ ಮೂದಲಿಸಿ, ಸರಸವಾಡಿ ರೇಗಿಸಿಯೂ ಇದ್ದಾರೆ.

ಕನಕದಾಸರ ಕೃತಿಗಳು ಮತ್ತು ಕೀರ್ತನೆಗಳು ಎಂತಹ ಸಾಮಾನ್ಯ ಓದುಗನ ಮನಸ್ಸನ್ನೂ ಸೂರೆಗೊಳ್ಳುವಂತಿದೆ. ಅವರ ಷಟ್ಪದಿಗಳಲ್ಲಿ ಕುಮಾರವ್ಯಾಸನ ಪ್ರಭಾವವಿದೆ. ಅವರ ಕ್ರೀರ್ತನೆಗಳಲ್ಲಿ ಪುರಂದರದಾಸರ ಛಾಯೆಯಿದೆ. ಅವರ 'ಕನಕನ ಮುಂಡಿಗೆ' ಗಳೆಂಬ ಕೆಲವು ರಚನೆಗಳಲ್ಲಿ ಬೆಡಗಿನ ವಚನಗಳ ಅನುಕರಣವಿದೆ. ಜೀವನವನ್ನೇ ಒಂದು ಸವಾಲಾಗಿ ಸ್ವೀಕರಿಸಿರುವ ಕನಕದಾಸರ ಮನೋಭಾವಕ್ಕೆ ಮುಂಡಿಗೆ ಒಂದು ಸಹಜ ಅಭಿವ್ಯಕ್ತಿಯೇ ಆಗಿದೆ. ತಮ್ಮ ಕವಿವಿಶಿಷ್ಟವಾದ ಸಹಜ ಪ್ರತಿಭೆಯಿಂದ, ಮನಸ್ಸಿನ ಉದಾರತೆಯಿಂದ, ವಸ್ತು ವೈವಿಧ್ಯ ಹಾಗೂ ಛಂದೋವೈವಿಧ್ಯಗಳಿಂದ, ಸಮಕಾಲೀನ ಜೀವನ ಪ್ರಜ್ಞೆಯಿಂದ, ಪಂಥಬದ್ಧವಲ್ಲದ ವ್ಯಕ್ತಿತ್ವದಿಂದ ದಾಸ ಪರಂಪರೆಯಲ್ಲಿ ಮಾತ್ರವಲ್ಲದೇ ಕನ್ನಡದ ಮೇರು ಕವಿಗಳ ಪಂಕ್ತಿಯಲ್ಲಿ ವಿಶಿಷ್ಟ ಸ್ಥಾನವನ್ನು ಸಂಪಾದಿಸಿ ಕೊಂಡಿದ್ದಾರೆ.

ಅಧ್ಯಾಯ – ೩

ಮೋಹನ ತರಂಗಿಣಿಯಲ್ಲಿ ಮೂಡಿಬಂದ ಶೃಂಗಾರ, ಶೌರ್ಯ ಮತ್ತು ಭಕ್ತಿ : –

ಶೃಂಗಾರ:–

ಭರತನು ತನ್ನ ನಾಟ್ಯ ಶಾಸ್ತ್ರದಲ್ಲಿ ಎಂಟು ರಸಗಳನ್ನು ಗುರುತಿಸಿದ್ದಾನೆ.ಮುಂದಿನ ಲಾಕ್ಷಣಿಕರು ಎಂಟು ರಸಗಳ ಜೊತೆಗೆ ಶಾಂತರಸವನ್ನು ಸೇರಿಸುವ ಪ್ರಯತ್ನ ಮಾಡಿದ್ದಾರೆ.ರಸಗಳಲ್ಲಿ ಮೊದಲನೆಯದು ಶೃಂಗಾರ: ಪಟ್ಟಿಯಲ್ಲಿ ಮಾತ್ರವಲ್ಲ, ಜನಪ್ರಿಯತೆಯಲ್ಲಿ ಕೂಡ. ಸ್ತ್ರೀ ಪುರುಷರಿಗಿರುವ ಪರಸ್ಪರ ಪ್ರೇಮವೇ ರತಿ. ಇದನ್ನು ಅರಿಯದ ಮಾನವರಿಲ್ಲ. ಪಶು ಪಕ್ಷಿಗಳಲ್ಲಿಯೂ ಈ ಆಕರ್ಷಣೆ ಇದ್ದೇ ಇದೆ. ರತಿಭಾವ ಹೀಗೆ ಸಕಲ ಹೃದಯ ಸಂವಾದಿಯಾಗಿರುವುದರಿಂದ ಶೃಂಗಾರಕ್ಕೆ ಪ್ರಮುಖ ಸ್ಥಾನ ದೊರೆತಿದೆ. ಶೃಂಗಾರದಲ್ಲಿ ಸಂಭೋಗ ಶೃಂಗಾರ (ಪ್ರಿಯರ ಸೇರಿಕೆ). ವಿಪ್ರಲಂಭ ಶೃಂಗಾರ (ಅಗಲಿಕೆ) ಎಂದು ಎರಡು ವಿಧ. ಸಂಭೋಗ ಶೃಂಗಾರದಲ್ಲಿ ಪರಸ್ಪರ ದರ್ಶನ. ಸಲ್ಲಾಪ. ಸಮಾಗಮ – ಈ ಮೊದಲಾದವೆಲ್ಲ ಸೇರುತ್ತದೆ. ಇದರ ನಿರೂಪಣೆಯಲ್ಲಿ ಅಶ್ಲೀಲತೆಯ ದೋಷ ಸಂಘಟಿಸದಂತೆ ಕವಿ ಎಚ್ಚರದಿಂದ ಇರಬೇಕಾದದ್ದು ಅವಶ್ಯಕ.

ಮೋಹನ ತರಂಗಿಣಿಯನ್ನು ಮುಖ್ಯವಾಗಿ ಶೃಂಗಾರ ರಸ ಪ್ರಧಾನವಾದ ಕಾವ್ಯವೆಂದು ಭಾವಿಸಲಾಗಿದೆ. ಶೃಂಗಾರರಸ ಪೂರ್ಣ ವಂಚೆನಡೆಯಳೆ ವಿಶ್ರಮಿಸು (೧೯–೨) ಎನ್ನುವ ಮಾತೂ ಇದಕ್ಕೆ ಪೋಷಕವಾಗಿದೆ. ಕನಕದಾಸರು ಶೃಂಗಾರರಸವನ್ನು ನಿರ್ವಹಿಸುವಲ್ಲಿ ರತಿಶಾಸ್ತ್ರದ ನೆರವು ಪಡೆದಿದ್ದಾರೆ. ಮೋಹನ ತರಂಗಿಣಿಯಲ್ಲಿ ಸುಜ್ಞಾನವಧೂಟಿಗೆ ಬೇರೆ ಬೇರೆ ಬಗೆಯ ಶೃಂಗಾರ ಪೂರ್ಣ ಸಂಬೋಧನೆಗಳನ್ನು ಬಳಸಿದ್ದಾರಲ್ಲದೇ ಮದ್ವಲ್ಲಭೆ (೨೧–೨) ಯೆಂದು ಹೇಳಿದ್ದಾರೆ. ಮುಂದುವರಿದು –

ಒಡಲಾಂತು ಹರಿಯ ಕೀರ್ತನೆಗೆಯ್ಯದ ಜಿಹ್ವೆ
ಕಡಲನಾಲಗೆಯಾಗದಿಹುದೆ
ಮಡದಿ ಕೇಳಿದಱಿಂದೆ ಕೃಷ್ಣಚರಿತ್ರವ
ತಡೆಯದೆ ನಿನಗೆ ವಿಸ್ತರಿಪೆ॥ ೧೩–೨

ಎಂದಿದ್ದಾರೆ. ಆದ್ದರಿಂದ ಕನಕದಾಸರು ಮೋಹನ ತರಂಗಿಣಿಯನ್ನು ತಮ್ಮ ಹೆಂಡತಿಗೆ ಹೇಳಿದ್ದಾರೆಂದು ಭಾವಿಸಬಹುದು. ಸುಜ್ಞಾನವಧೂಟಿಯೆಂಬ ಸ್ತ್ರೀ ಪಾತ್ರದ ಪ್ರೇರಣೆಯ

ಮೇರೆಗೆ ಮೋಹನ ತರಂಗಿಣಿಯ ಕಾವ್ಯವು ಶೃಂಗಾರ, ಶೌರ್ಯ, ಭಕ್ತಿಯ ನೆಲೆಯಲ್ಲಿ ಮೂಡಿ ಬಂದಿದೆ. ಕನ್ನಡದಲ್ಲಿ ಮೊದಲ ಬಾರಿಗೆ ಕನಕದಾಸರು ಕೃಷ್ಣನ ಲೀಲೆಗಳನ್ನು ಶೃಂಗಾರದ ಭಾವದಲ್ಲಿ ತೆರೆದಿರಿಸಿದ್ದಾರೆ. ಇಂತಹ ಲೀಲೆಗಳನ್ನು ಹೇಳಲು ಪ್ರಧಾನವಾಗಿ ಮೂರು ತಲೆಮಾರಿನ ಕಥಾವಸ್ತುವನ್ನು ಬಳಸಿಕೊಂಡಿದ್ದಾರೆ.

ಇವುಗಳನ್ನು ವಿಷ್ಣುಪುರಾಣದಿಂದ ಕೃಷ್ಣ-ರುಕ್ಮಿಣಿಯರ ಪ್ರಸಂಗವನ್ನು, ಶೈವ ಪುರಾಣದಿಂದ ಕಾಮದಹನ ಪ್ರಸಂಗವನ್ನು, ಭಾಗವತ ಪರಂಪರೆಯಿಂದ ಬಾಣಾಸುರ ಮತ್ತು ಶಂಬರಾಸುರ ವಧೆಯನ್ನು ತಂದು ಒಂದೆಡೆ ಜೋಡಿಸಿ ವಸ್ತುವನ್ನು ಸೃಷ್ಟಿಸಲಾಗಿದೆ. ಕನಕದಾಸರ ಶೃಂಗಾರದ ಕಲ್ಪನೆಯಲ್ಲಿ ಎರಡು ಅಂಶಗಳನ್ನು ಸ್ಪಷ್ಟವಾಗಿ ಗುರುತಿಸಬಹುದು.

ಮೊದಲನೆಯ ಅಂಶವೆಂದರೆ – ಹೆಣ್ಣು ಗಂಡಿನೆಡೆಗೆ ಆಕರ್ಷಿತಳಾಗುತ್ತಾಳೆ. ಆಕೆಗೆ ಮಿಲನದ ಬಯಕೆ ಗಂಡಿಗಿಂತ ಅಧಿಕ. ಈ ಅಂಶವನ್ನು ಪುತ್ರ ಸೌಭಾಗ್ಯವನ್ನು ಉದ್ದೇಶವಾಗಿಟ್ಟುಕೊಂಡ ರುಕ್ಮಿಣಿಯಲ್ಲಿ, ಮನ್ಮಥನಿಂದ ಗರ್ಭದಾನ ಬಯಸಿದ ರತಿಯಲ್ಲಿ ಹಾಗೂ ಅನಿರುದ್ಧನ ಸಾಂಗತ್ಯ ಬಯಸುವ ಉಷೆಯಲ್ಲಿಯೂ ಕಾಣುತ್ತೇವೆ. ಮೋಹನ ತರಂಗಿಣಿ ಕೃಷ್ಣನನ್ನೇ ಕೇಂದ್ರವಾಗಿಟ್ಟುಕೊಂಡು ರಚಿಸಿದ ಕೃತಿಯಾದದ್ದರಿಂದಲೋ ಏನೋ ಹೆಣ್ಣು ಗಂಡನ್ನು ಮೊರೆ ಹೋಗುವುದು ಅಧಿಕವಾಗಿಯೇ ತೋರುತ್ತದೆ.

ಎರಡನೇಯ ಅಂಶವೆಂದರೆ – ಪುರುಷ ಹೆಣ್ಣಿನ ಕಾಮನೆಗಳನ್ನು ಸಂತಸದಿಂದ ಪೂರೈಸುವವನಾಗಿದ್ದಾನೆ. ಆದರೆ ಇಲ್ಲಿ ಬರುವ ಹೆಣ್ಣುಗಳು ಕುಲೀನ ಸ್ತ್ರೀಯರೂ, ರಾಜವಂಶಕ್ಕೆ ಸೇರಿದವರೂ ಆಗಿದ್ದಾರೆ. ಶೃಂಗಾರ ಸಮಯವು ವ್ಯವಧಾನದಿಂದ ಕೂಡಿದ್ದು, ಸಮಯವೇ ನಿಂತಂತೆ ಭಾಸವಾಗುವ ಹಾದಿಯಲ್ಲಿ ಭೋಗ ಪರಂಪರೆಗೆ ಸೇರಿದ ನಿಟ್ಟಿನಲ್ಲಿ ನಡೆಯುತ್ತದೆ. ಶೃಂಗಾರ ಸಮಯವು ಆದರ್ಶನೀಯ ಭೋಗ ವೈಭೋಗದ ಪರಂಪರೆಯನ್ನು ಎತ್ತಿಹಿಡಿಯುತ್ತದೆ. ಕನಕದಾಸರು ಶೃಂಗಾರ ಚಿತ್ರಗಳನ್ನು ಕೊಡುವಲ್ಲಿ ವೈಶಿಷ್ಟ್ಯವನ್ನು ಮೆರೆದಿದ್ದಾರೆ. ಉಷಾದೇವಿ ಬಲತೋಳನ್ನು ದಿಂಬಿಗಿಟ್ಟು –

ನಿದ್ರಾನ್ವಿತೆಯಾಗಿ ಕಣ್ದೆಟ್ಟಿಯೊಳಗನಿ
ರುದ್ಧನ ಕಂಡಮರ್ದಪ್ಪಿ
ಮುದ್ದಾಡಿ ಮುದ್ದ ಬಾಯೊಳಗಿಟ್ಟು ಚುಂಬಿಸು
ತಿದ್ದಳು ರತಿಶಾಸ್ತ್ರದಲ್ಲಿ॥ ೨೭-೪೧

ಮುಟ್ಟದಿರಾಳ್ದ ಮುಟ್ಟವೆನಾತ್ಮೇಶ್ವರಿ
ಮುಟ್ಟಲಾಯುವು ಕ್ಷೀಣವಹುದು
ಮುಟ್ಟದೊಡಸು ನಿಲ್ಲದೆನುತೊರ್ವ ತೊಲಗಿದ
ಬಟ್ಟಜವ್ವನೆಯನಪ್ಪಿದನು॥ ೧೮-೫೩

ಇಲ್ಲಿ ಎಲ್ಲ ಮಾತುಗಳನ್ನು ಹೇಳಿಯೂ ತೊಲಗದ ಬಟ್ಟಜವ್ವನೆಯೆನ್ನುವ ಮಾತಿನಲ್ಲಿ, ಆಕೆಗೂ ಆತನ ಅಪ್ಪುಗೆ ಬೇಕಿದೆ ಎನ್ನುವುದರ ಸೂಕ್ಷ್ಮವನ್ನು ಗಮನಿಸಬಹುದಾಗಿದೆ.

ಪ್ರೇಮ ಪ್ರಸಂಗಗಳಲ್ಲಿ ಕಂಡು ಬರುವ ಶೃಂಗಾರವು ಭೋಗವನ್ನು ಒಳಗೊಂಡೆ ಚಿತ್ರಿಸಲ್ಪಡುತ್ತದೆ. ತನ್ನ ಸಮಕಾಲೀನ ಬದುಕಿನ ವಿಲಾಸಕ್ಕೆ ಸ್ಪಂದಿಸಿದ ಕವಿ 'ಭೋಗ' ವನ್ನು ಮೌಲ್ಯವನ್ನಾಗಿ ಪರಿಗಣಿಸಿ ಅದನ್ನು ಕಾವ್ಯದ ಎಲ್ಲ ವಿವರಗಳೊಂದಿಗೆ ಬೆಸೆದಿದ್ದಾನೆ. ಇದಕ್ಕೆ ಜಲಕ್ರೀಡೆಯ ಭಾಗವು ಸಾಕ್ಷಿಯಾಗಿದೆ. ಗಂಡು-ಹೆಣ್ಣಿನ ಸಂಬಂಧದಲ್ಲಿ ಪರಂಪರಾಗತ ನಿಲುವನ್ನು ಕವಿ ವ್ಯಕ್ತಪಡಿಸಿದರೂ. ಕವಿಯು ಕಾವ್ಯದ ನೆಲೆಯಲ್ಲಿ ಈ ಅಂಶವನ್ನು ಮೀರಿದ್ದಾನೆ. ಗಂಡು-ಹೆಣ್ಣಿನ ಸಂಬಂಧವು. ಒಂದು ಗಂಡಿಗೊಂದು ಹೆಣ್ಣು. ಹೆಣ್ಣಿಗೊಂದು ಗಂಡು ಎಂಬ ನೆಲೆಯಲ್ಲಿ ಹೇಳಲ್ಪಟ್ಟಿದ್ದರೂ. ಇವು ಒಂದು ಸಾಮಾಜಿಕ ನೆಲೆಯ ಯೋಜನೆಯಾಗಿದ್ದರೂ. ದೈಹಿಕ ಬಯಕೆಯೂ ಈ ಮಿತಿಯನ್ನು ದಾಟಿ ಸ್ಪಂದಿಸಿರುವುದನ್ನು ಅನೇಕ ಪ್ರಸಂಗಗಳು ಹೇಳುತ್ತವೆ. ಉದಾಹರಣೆಗೆ – ಉಷೆಯು ಶಿವನ ಆಶೀರ್ವಾದವನ್ನು ಪಡೆಯಲೆಂದು ತೆರಳಿದಾಗ ಅವನ ಒಡ್ಡೋಲಗದಲ್ಲಿದ್ದ ದೇವತೆಗಳು ಇವಳನ್ನು ಕಂಡು ಮನ್ಮಥನ ಕಾಟಕ್ಕೆ ತುತ್ತಾದಳು. ಎಂದು ಹೇಳುತ್ತ ಸ್ವಯಂ ಶಿವನೂ ಸಹ ಇವಳ ಸೌಂದರ್ಯಕ್ಕೆ ಮನ ಸೋತು, ನಂತರ 'ಮನದೊಳಗೆ ಕಾತರಿಸದೆ ತನ್ನ ಮಗಳೆಂದು ನೋಡಿದ ಭೂತೇಶ ಕರುಣಿ ನಿರ್ಮಲನು' ತನ್ನ ಮನಸ್ಸನ್ನು ಹಿಡಿತಕ್ಕೆ ತಂದು ಕೊಂಡನು. ಕಾಮಹರನಾದ ಶಿವನನ್ನು ಬಿಟ್ಟು ಉಳಿದವರೆಲ್ಲ ವಿರಹ ವ್ಯಥೆಯಿಂದ ಬೆಂದು ಹೋದರು. ಶೃಂಗಾರವನ್ನು ಪರಿಪರಿಯಾಗಿ ಚಿತ್ರಿಸುವ ಕವಿ. ದೈಹಿಕ ಬಯಕೆಯ ಹುಟ್ಟನ್ನು ಸೌಂದರ್ಯದ ಮೂಲದಿಂದ ಗುರುತಿಸುತ್ತಾ. ಯಾವುದೇ ಸಂಸ್ಕೃತಿಯಿಂದಲೂ ನಿಯಂತ್ರಿತವಾಗದೆ ಸಹಜವಾಗಿ ಹುಟ್ಟುವ ಬಯಕೆಯನ್ನು ಹಿಡಿಯುವಲ್ಲಿ ಸೃಷ್ಟಿಕರ್ತನೆ ಆಗುತ್ತಾನೆ. ಇದರಿಂದಾಗಿ ಮನುಷ್ಯ ಲೋಕದ ಮನಸ್ಸಿನ ಆಳವನ್ನು ತೆರೆದಿಡುವಲ್ಲಿ, ಯಾವುದೇ ನೈತಿಕತೆಯ ಹಿಡಿತದಲ್ಲಿ ಸಿಲುಕದ ಅನುಭವಗಳನ್ನು ಹಿಡಿಯುತ್ತಾನೆ. ಇದರಿಂದಾಗಿ ಕಾಮ ಮೂಲವಾದ ದೇಹಕ್ಕೆ, ಲೌಕಿಕಕ್ಕೆ ಮಹತ್ವ ದೊರೆತಿದೆ. ದಾಸ

ಪರಂಪರೆಯ ಮುಕ್ತಿಯ ವ್ಯಾಖ್ಯೆಯು ಇಲ್ಲಿ ದೇಹ ಮೂಲದಿಂದಲೇ ಹೇಳಲ್ಪಟ್ಟಿದೆ. ಶೃಂಗಾರಕ್ಕೆ ಮಹತ್ವ ದೊರೆತ ಕಾವ್ಯದಲ್ಲಿ ಇದೇನು ಹೊಸದೆಂದು ತೋರದಿದ್ದರೂ, ದಾಸ ಪರಂಪರೆಯ ಕಾಲದಲ್ಲಿ ಮುಕ್ತಿಯನ್ನು ದೇಹದ ಬಯಕೆಯ ತೃಪ್ತಿಯಲ್ಲಿ ನೋಡಿದ್ದು ಕನಕದಾಸರ ದೃಷ್ಟಿಕೋನದ ವಿಭಿನ್ನತೆಯನ್ನು ಹೇಳುತ್ತದೆ.

ಉದಾಹರಣೆಗೆ:-

'ನಾರದನು ವಿವಾಹ ವೃತ್ತಾಂತವನ್ನು ಬಾಣಾಸುರನಿಗೆ ಅಱುಹುವನು' ಎಂಬ ಭಾಗದಲ್ಲಿ 'ಸುಱುಗುರುಳಬಲೆಯ ತೋಳತೆಕ್ಕೆಯೊಳೊಂದು/ಗಳಿಗೆ ಬ್ಬಾಳಲು ಮುಕ್ತಿಯಹುದು' ಎನ್ನುವ ಅಂಶವಾಗಲಿ, 'ನುಣ್ಮೊಲೆಯ ಸ್ಥಳದಲ್ಲಿ ಮೊಗವಿಟ್ಟು ಮುಂಡಾಡಿ ಸೊಗ ಮೈಯ್ಯೊ/ಳಳವಟ್ಟು ಸಾವುದಚ್ಚರಿಯೆ' ಎಂಬ ಹೇಳಿಕೆಯಾಗಲಿ ಇಹದ ಸಂಭ್ರಮದ ಗಳಿಗೆಗಳೇ ಮುಕ್ತಿಯ ದಾರಿಗಳು ಎಂಬ ತಾತ್ವಿಕತೆಯನ್ನು ಬೆಳೆಸುತ್ತವೆ. "ಮೋಹನ ತರಂಗಿಣಿಯಲ್ಲಿ ಬರುವ ಪ್ರಮುಖ ಕಥಾವಸ್ತುಗಳಾದ ಕಂದರ್ಪ ಜನನ, ಮಾರ ಜನನ, ಜಲಕ್ರೀಡೆ, ರತಿಯ ಗರ್ಭದಾನ, ಅನಿರುದ್ಧನ ಜನನ, ಅನಿರುದ್ಧನ ನಗರ ಶೋಧನೆ, ಉಷಾದೇವಿಯ ಶೃಂಗಾರ, ಉಷೆಯ ಸ್ವಪ್ನ, ಉಷಾ–ಅನಿರುದ್ಧರು ಏಕಾಂತದಲ್ಲಿ ಸುಖಪಟ್ಟ ರೀತಿಗಳಲ್ಲಿ ಸಂಭೋಗ ಶೃಂಗಾರ ಕಂಡು ಬರುತ್ತದೆ. ಉಷೆಯ ವಿರಹದಲ್ಲಿ ವಿಪ್ರಲಂಭ ಶೃಂಗಾರವಿದೆ. ಆದರೆ ಇಲ್ಲಿನ ಶೃಂಗಾರ ಕೃಷ್ಣಾರ್ಪಿತವಾದದ್ದು. ದೈವಕ್ಕೆ ಸಮರ್ಪಣೆಯಾದುದು. ಇಲ್ಲಿ ಶೀಲ ಅಶ್ಲೀಲದ ಪ್ರಶ್ನೆ ಏಳುವುದಿಲ್ಲ. ಕೃತಿಯ ನಿರ್ವಹಣೆಗೆ ಅಗತ್ಯವಾದಷ್ಟನ್ನು ಕನಕದಾಸರು ನಿರ್ವಹಿಸಿದ್ದಾರೆ." [೩]

ಶೃಂಗಾರವು ಕೇವಲ ದೇಹದ ಬಯಕೆಯ ನೆಲೆಯಲ್ಲಿ ಮಾತ್ರ ನಿಂತಿಲ್ಲ, ದೇಹದ ಬಯಕೆಯ ಉತ್ಕಟ ಸ್ಥಿತಿಯ ವರ್ಣನೆಯಲ್ಲಿ ಅಲ್ಲಲ್ಲಿ ಅತಿರಂಜಕತೆ ಕಂಡು ಬಂದರೂ ದೈಹಿಕ ಬಯಕೆಗಳು ಸಂಸ್ಕೃತಿಯ ಗತಿಶೀಲತೆಯಲ್ಲಿಯೇ ಸಾಗುತ್ತವೆ. ಇದರಲ್ಲಿ ಸಂಬಂಧಗಳಲ್ಲಿನ ಸ್ವಚ್ಛಂದತೆಗಿಂತ ಉತ್ಕಟತೆ ತೀವ್ರವಾಗಿದೆ. ಇಂತಹ ಉತ್ಕಟತೆಯೆ ಬದುಕನ್ನು ಪೋಷಿಸುವ ದ್ರವ್ಯವಾಗಿರುತ್ತದೆ. ಆದ್ದರಿಂದಲೇ ರತಿ ಮತ್ತು ಪ್ರದ್ಯುಮ್ನನ ಪ್ರಸಂಗದಲ್ಲಿ ರತಿಯು ಉಳಿಯುವುದೆ ಕಾಮನನ್ನು ಸೇರಲೆಂದು. ಕಾವ್ಯವು ಪಾತ್ರಗಳ ಮೂಲಕ ಕಥಾವಸ್ತುವನ್ನು ಬೆಳೆಸುತ್ತಿದ್ದರೂ ಪಾತ್ರಗಳು, ಸನ್ನಿವೇಶಗಳು ಸಾಂಕೇತಿಕವಾಗುತ್ತ ಸೂಚಿತ ಅರ್ಥ ಪರಂಪರೆಯನ್ನು ದಾಟುತ್ತಿರುತ್ತವೆ. ಇದರಿಂದಾಗಿ ರತಿಯು ಕಾಮದಹನದ ನಂತರ ಅವನಿಗಾಗಿ ಹಂಬಲಿಸಿ, ಶೋಕಗ್ರಸ್ಥೆಯಾಗಿ ದಿಕ್ಕು

---

[೩] ಕಾ.ತ.ಚಿಕ್ಕಣ್ಣ (ಸಂ), ಕನಕ ಕಿರಣ, ಕಾಳಿದಾಸ ಸಾಂಸ್ಕೃತಿಕ ಸಂಘ, ಪು.೭೪

ದೆಸೆಗಳಲ್ಲಿ ಅಲೆದಾಡುತ್ತ, ಶಂಬರಾಸುರನ ಕೈಗೆ ಸಿಲುಕಿದರೂ ಮನ್ಮಥನ ಮೇಲಿನ ಹಂಬಲ ಮಾತ್ರ ಕಡಿಮೆಯಾಗದೇ ಅವನಿಗಾಗಿಯೇ ಬದುಕುತ್ತಾಳೆ. ಕೃಷ್ಣ-ರುಕ್ಮಿಣಿಯರ ಮಗುವಾದ ಪ್ರದ್ಯುಮ್ನನ ರೂಪದಲ್ಲಿರುವ ಮನ್ಮಥನನ್ನು ರತಿಯೇ ಬೆಳೆಸುತ್ತಾಳೆ. ಈ ಪ್ರಸಂಗದಲ್ಲಿ ರತಿಯು ಮಗುವಿನೊಡನೆ ಆಡುವ ಆಟಕ್ಕಿಂತ ತನ್ನ ಕಾಮದೊಡನೆ ತಾನೆ ಬೆಳೆಸಿಕೊಳ್ಳುವ, ಅದಕ್ಕೆ ಮರುಳಾಗುವ, ಮರುಳಾಗುವಿಕೆಯಲ್ಲಿಯೇ ಅದನ್ನು ಪೋಷಿಸುವ ಆತ್ಮರತಿಯು ಇದೆ. ಕೃತಿಯ ಪ್ರಾರಂಭದಲ್ಲಿ 'ತರುಣಿ ಲಕ್ಷ್ಮೀಯ ಕುಚವಿಡಿದ ಕೈಯಿಂದ ಸತ್ಕರುಣವೀವುದು ಕೃಷ್ಣ ನಮಗೆ' ಎಂದು ಪ್ರಾರ್ಥಿಸಿರುವರು. ಕೊನೆಗೆ ತಮ್ಮ ಕಾವ್ಯದ ಸ್ವರೂಪವನ್ನು ಕುರಿತು :

ತೆಂಗಿನಕಾಯ ತೋರದ ಮೊಲೆವೊತ್ತ ಲ
ತಾಂಗಿಯ ಬಂದುಗೆವಾಯ
ರಂಗಿಪ ಚೆಂದುಟಿಯಿನಿದೆನೆ ಮೋಹನ ತ
ರಂಗಿಣಿವೇಳ್ವೆ ಕೇಳಬಲೆ॥

ಎಂದು ಅಲ್ಲಿಯೂ ತಮ್ಮ ರಸಿಕತೆಯನ್ನು ಕನಕದಾಸರು ಮೆರೆದಿದ್ದಾರೆ. ಕೃಷ್ಣನ ಅರಮನೆ, ಅವನ ಹದಿನಾರು ಸಾವಿರ ಹೆಂಡಿರಲ್ಲಿ ರುಕ್ಮಿಣಿ ಸತ್ಯಭಾಮೆಯರ ವರ್ಣನೆ, ದಾಸೀ ಜನರ ವರ್ಣನೆಗಳ ಮೂಲಕ ಎಲ್ಲವನ್ನೂ, ಎಲ್ಲರನ್ನೂ ನಮ್ಮ ಕಣ್ಮುಂದೆ ತಂದು ನಿಲ್ಲಿಸಿದ್ದಾರೆ. ಇವುಗಳೆಲ್ಲ ದೈವಿಕ ಹಿನ್ನಲೆಯುಳ್ಳ ವ್ಯಕ್ತಿಗಳಿಗೆ ನೀಡಿದ ಶೃಂಗಾರ ಚಿತ್ರಣವಾದರೆ, ಕೃಷ್ಣನ ದ್ವಾರಕಾಪುರದ ಜನಸಾಮಾನ್ಯರ ರಸಿಕತೆಯೆಷ್ಟಿತ್ತು ಎಂಬುವುದನ್ನು ವಿವರಿಸುವಾಗಲೂ ಕನಕದಾಸರು ತಮ್ಮ ರಸಿಕತೆಯನ್ನು ಮೆರೆದಿದ್ದಾರೆ.

ಕಳೆವೆತ್ತ ವಾರನಾರಿಯರ ಕನ್ನಿಕೆಯರ
ಮೊಳೆಮೊಲೆಗಳ ನೋಡಿ ನಗುತ್ತ
ಎಳವೆರಲ್ಗಳ ಚಿಟುಕೊತ್ತಿ ಕೈದೊಡಿಸುವ
ಬಳೆಗಾರರಿರ್ದರಿಕ್ಕೆಲದಿ॥

ಚೆಲುವೆಯರ ಚಿಗುರುಮೊಲೆಗಳನ್ನು ನೋಡಿ ನಗುತ್ತ, ಅವರ ಎಳೆಯ ಬೆರಳುಗಳ ನೆಟಿಗೆ ತೆಗೆಯುತ್ತ, ಅವರ ಕೈಗೆ ಬಳೆ ತೊಡಿಸುತ್ತಿರುವ ಬಳೆಗಾರರು ನಗರದ ಬೀದಿಯ ಎರಡು ಬದಿಗಳಲ್ಲಿದ್ದರೆನ್ನುವರು. ಹೀಗೆ ಮೋಹನ ತರಂಗಿಣಿಯಲ್ಲಿ ಶೃಂಗಾರದ ಚಿತ್ರಣವನ್ನು ಕಾಣಬಹುದಾಗಿದೆ.

ಶೌರ್ಯ:-

ಶೌರ್ಯಕ್ಕೆ ಉತ್ಸಾಹವು ಸ್ಥಾಯಿಭಾವವಾಗಿದೆ. ಉತ್ಸಾಹವು ಉತ್ತಮ ಪ್ರಕೃತಿಯವರ, ಉದಾತ್ತರ ಸ್ವಭಾವವಾಗಿದೆ. ಮೋಹನ ತರಂಗಿಣಿಯಲ್ಲಿ ಶೌರ್ಯರಸವು ಪುರುಷ ಪ್ರಧಾನ ಕಾಳಗಗಳಲ್ಲಿ ಕಂಡುಬರುತ್ತದೆ. ಸಹಜವಾಗಿ ಪ್ರಾರಂಭವಾಗಿ ನಡೆಯುವ ಕಾಳಗಗಳು ಒಂದು ಹಂತದಲ್ಲಿ ಶಕ್ತಿಯ ಗರಿಷ್ಟ ಮಟ್ಟವನ್ನು ಮುಟ್ಟಿ, ಇನ್ನೇನು ಸೋಲು, ಗೆಲುವಿನ ನಿರ್ಧಾರವಾಗುತ್ತದೆ ಅಂದುಕೊಳ್ಳುವಷ್ಟರಲ್ಲಿ ದೈವೀ ಶಕ್ತಿಯ ಪ್ರವೇಶವಾಗುತ್ತದೆ. ಮತ್ತೆ ಕಾಳಗ ಮುಂದುವರೆಯುತ್ತದೆ. ನೈಜ ವಿಷಯಗಳು, ಘಟನೆಗಳು ತಮ್ಮ ನಿಜ ಸ್ವರೂಪವನ್ನು ಕಳೆದುಕೊಂಡು ಒಂದು ಆದರ್ಶ ರೂಪವನ್ನು ಪಡೆಯುತ್ತದೆ. ಹೀಗೆ ಸುರಾಸುರರ ಕಾಳಗವನ್ನು ಅತ್ಯಂತ ಮನೋಜ್ಞವಾಗಿ ಮೂಡಿಸಿದ್ದಾರೆ.

ಉದಾಹರಣೆಗಾಗಿ : -

ಬಾಣಾಸುರ ಒಬ್ಬ ಅಸುರ. ಆದರೆ ಬಾಣಾಸುರನ ಶಿವಭಕ್ತಿಯನ್ನು ಕನಕದಾಸರು ಹೃದಯಂಗಮವಾಗಿ ವಿವರಿಸಿದ್ದಾರೆ. ಶಿವನ ಜಡೆಯ ಹಿಕ್ಕು ಬಿಡಿಸುವ ಬಾಣಾಸುರನ ಮಮತೆ. ಕಕ್ಕುಲತೆ ಮನಸ್ಸಿಗೆ ನಾಟುವಂತೆ ಚಿತ್ರಿತವಾಗಿದೆ. ಪರಶಿವನ ಮನ ಮುದಗೊಂಡು ಬಾಣಾಸುರನಿಗೆ ವರ ಪ್ರಧಾನವಾಗುತ್ತದೆ. ಆದರೆ ಬಾಣಾಸುರನಿಗೆ ತನ್ನೊಡನೆ ಕಾದಾಡಿ ತನ್ನನ್ನು ಸೋಲಿಸಿ ತನಗೆ ಮರಣವುಣಿಸುವ ವೀರನೊಡನೆ ಹೋರಾಡಲು ಅವಕಾಶ. ತನ್ನ ಸಾವಿರ ಭುಜಗಳು ಶೌರ್ಯದಿಂದ ತುಂಬಿ ತುಳುಕಾಡುತ್ತಿದ್ದು ಸಮಬಲರ ಎದುರಾಳಿತನವಿಲ್ಲದೆ ಬೇಸತ್ತಿದೆ : ಹೋರಾಟಕ್ಕೆ ಕಾತರಿಸುತ್ತಿವೆ : ಸಮಬಲವನ್ನು ನೀಡು. ಸಾವಿರ ಮಂದಿ ಬೇಡ : ಒಬ್ಬನನ್ನು ನೀಡು, ಸಾಕು ಎಂದು ಬೇಡುತ್ತಾನೆ. ಬಾಣಾಸುರನ ಶಕ್ತಿ, ಶೌರ್ಯ ಎಷ್ಟೇ ಇದ್ದರೂ ಆತ ಮೂರು ಲೋಕವನ್ನು ಆಳುವ, ಚಕ್ರಾಧಿಪತಿಯಾಗುವ ಚಿತ್ರಣವನ್ನು ಕನಕದಾಸರು ಕಲ್ಪನೆಯಲ್ಲೂ ನೀಡಲಾರರು. ಆತನ ಶಕ್ತಿ, ಶೌರ್ಯಗಳೇನೇ ಇದ್ದರೂ ಆತ ಮರಣ ಮುಖೇನ ಕೈಲಾಸ ಸೇರುವ ಕನಸಷ್ಟೇ ಹೊರತು. ಕೈಲಾಸಾಧಿಪತಿಯಾಗುವ ಕನಸನ್ನಲ್ಲ. ಅಷ್ಟೇ ಅಲ್ಲ ಬಾಣಾಸುರನ ಶೌರ್ಯಕ್ಕೆ ಸಮನಾದ ಇನ್ನೊಬ್ಬ ಅಸುರನನ್ನು ಸೃಷ್ಟಿ ಮಾಡಲು ಕೂಡ ಕನಕದಾಸರು ಅಸಮರ್ಥರು. ಅಸುರರನ್ನು ಮಣಿಸಲು ದೇವರೇ ಬೇಕು. ಅದು ದೈವತ್ವವನ್ನು ಹೊಂದಿದ ಸುರಲೋಕದವರಿಂದ ಮಾತ್ರ ಸಾಧ್ಯ. ಆದ್ದರಿಂದಲೇ ಬಾಣಾಸುರನ ಮರಣವು ಕೃಷ್ಣನ ಮೂಲಕವೇ ಆಗಬೇಕು. ಸುರರ ಮಟ್ಟಕ್ಕೆ ಅಸುರರು ಏರಲು ಸಾಧ್ಯವಿಲ್ಲವಷ್ಟೇ ಅಲ್ಲ ಸುರರಿಂದ ಹತನಾಗುವುದು ಕೂಡ ಇಲ್ಲಿ ಅಸುರನ ಭಾಗ್ಯವೇ ಆಗಿದೆ. ಬಾಣಾಸುರ ಸಾವಿರ ಭುಜಗಳನ್ನು ಹೊಂದಿದ್ದರೂ. ಶಕ್ತಿವಂತನಾಗಿದ್ದರೂ ಬಾಣಾಸುರ ಗೆಲ್ಲುವುದಿಲ್ಲ. ಆತನನ್ನು ಗೆಲ್ಲಲು ಒಂದು ಸುದರ್ಶನ ಚಕ್ರ ಸಾಕು. ಇದು ವಾಸ್ತವ ಸತ್ಯವಾಗಿದೆ. ಬಾಣಾಸುರ ಕೊನೆಯಲ್ಲಿ ತನ್ನ ಗೆಲುವು ಹಾಗೂ

ಸೋಲು ಎರಡರ ಬಗ್ಗೆಯೂ ಲಜ್ಜಿತನಾಗುತ್ತಾನೆ. ಕೊನೆಗೆ ದೇವರನ್ನು ಆಶ್ರಯಿಸಿ ಆತನ ಯಜಮಾನ್ಯವನ್ನು ಸಂತಸದಿಂದ ಒಪ್ಪಿಕೊಳ್ಳುತ್ತಾನೆ. ಪರಸ್ಪರ ಕಾದಾಡುವಾಗ ವೀರಾಲಾಪಗಳಿಗೆ ಮಹತ್ವ ಹೆಚ್ಚಿದಂತಿದೆ. ವೀರಾಲಾಪವಿಲ್ಲದ ಯುದ್ಧ, ಯುದ್ಧವೇ ಅಲ್ಲ ಎನ್ನುವ ದೃಷ್ಟಿಯನ್ನು ಧ್ವನಿಸುತ್ತದೆ. ಅಲ್ಲದೇ ಶೌರ್ಯದ ಸಂಕೇತವಾದ ಗಂಡು ಕಾಮದ ದುರ್ಬಲತೆಗೆ ಒಳಗಾಗುವುದಿಲ್ಲ. ಉದಾಹರಣೆಗೆ ಸುರಗುರುವಿನ (ಬೃಹಸ್ಪತಿ) ಮಾತನ್ನು ಕೇಳಿ ಪರಹಿತಕ್ಕಾಗಿ ಶಿವನ ಮೇಲೆ ಯುದ್ಧಕ್ಕೆ ಹೊರಟ ಮನ್ಮಥ ಕಮ್ಮಲರ್ವಕ್ಕಿಯ ಎದೆಯನ್ನು ಜೇವೊಡೆದು ಕಿವಿವರೆಗೆ ನೀಲೋತ್ಪಲ ಬಾಣವನ್ನು ತೆಗೆದು ಪ್ರಯೋಗಿಸಿದ.

ತಾಗಿದು ಮರ್ಮಸ್ಥಾನವ ಕಡಿದು ವಿ
ಭಾಗಿಸೆ ದೃಢಚಿತ್ತವಿಡಿದು
ಭೋಗಿಭೂಷಣ ಕೋಪವ ತಾಳ್ದು ಕಿಡಿಕಿಡಿ
ಯೋಗಿ ಕೆಂಗಿಡಿಗಣ್ಣ ತೆಱೆದ॥ ೭ – ೩೮

ಭುಗಿ ಭುಗಿ ಛಟಿ ಛಟಿಲೆಂದು ಲೋಚನದೊಳ
ರ್ದೋಗೆದ ದಳ್ಳುರಿ ಸುತ್ತಿ ಸ್ಮರನ
ಬಿಗಿದ ಬತ್ತಳಿಕೆ ಕರ್ವಿಲ್ಲು ಸಹಿತೆ ಸು
ಟ್ಟುಗಿದುದು ಕುಡಿ ನಭಸ್ಥಳಕ್ಕೆ॥ ೭ – ೩೯

ಒಂದು ಬಿಲ್ಲೈದಲರ್ಗೋಲಿನ ಮೊನೆಯೊಳೈ
ತಂದು ಮೂಜಗವ ಶಿಕ್ಷಿಸುವ
ಕಂದರ್ಪನ ದೇಹ ಹರನ ಕಣ್ಣುರಿಯಿಂದ
ಬೆಂದುದು ನಿಮಿಷಮಾತ್ರದಲಿ॥ ೭ – ೪೦

ನಿಮಿಷ ಮಾತ್ರದಲ್ಲಿ ಮನ್ಮಥನ ದೇಹ ಬೆಂದು ಹೋಯಿತು. ಕವಿಯ ಉದ್ಗಾರ ಅಲ್ಲಿ ನಡೆದ ಅಸಮ ಯುದ್ಧವನ್ನು ಉತ್ತಮವಾಗಿ ಚಿತ್ರಿಸುತ್ತದೆ. ಈ ಬಗೆಯ ಯುದ್ಧಗಳು, ಮಾಯಾಯುದ್ಧದ ಪ್ರಯೋಗಗಳ ಪ್ರಸಂಗಗಳು ಅನಿರುದ್ಧ – ಕುಂಭಾಂಡ, ಬಾಣಾಸುರ – ಅನಿರುದ್ಧ , ಹರಿ – ಹರ, ಕೃಷ್ಣ – ಬಾಣಾಸುರರ ಕಾಳಗದಲ್ಲಿ ಕಂಡುಬರುತ್ತವೆ. ಅಲ್ಲಿ ಬರುವ ಗಣೇಶ ಮತ್ತು ಬಲರಾಮರ ನಡುವಣ ಯುದ್ಧ ವಿಶಿಷ್ಟವಾಗಿ ವರ್ಣಿತವಾಗಿದೆ. ವೀರರಸದ ಹೊನಲಿನಲ್ಲಿಯೇ ಹಾಸ್ಯರಸವೂ ಎಡೆ ಪಡೆದಿರುವುದು ಈ ಸಂದರ್ಭದ ವಿಶೇಷವಾಗಿದೆ.

ಗರುಡ ಮತ್ತು ನಂದೀಶ್ವರರ ನಡುವಿನ ಯುದ್ಧದಲ್ಲಿ ಗರುಡನ ಮೇಲೆ ಗಣೇಶ ಬಿದ್ದ. ಗರುಡ ಬರಲು ಗಣೇಶ ಕುಳಿತಿದ್ದ ಇಲಿ ಬೆದರಿತು. ವಿಘ್ನೇಶ್ವರನನ್ನು ಕರೆದುಕೊಂಡು ಓಡಿತು. ಬೆನಕರಾವುತ ಬೆಂಡಾದ ಆತನು ಒಂದು ಕೈಯ ವಾಘೇಯದಲ್ಲಿ ನಿಲ್ಲಲಾರದೇ ಬೆಕ್ಕಸಗೊಳ್ಳುವುದನ್ನು ಬಲರಾಮನು ಕಂಡು ಯುದ್ಧಭೂಮಿಯಲ್ಲಿ ನಕ್ಕನು. ಇಲಿ ಬೆದರಿದರೆ ರಣಪರಿಹಾಸಕ ಬೇಡವೆಂದು ವಿಘ್ನೇಶ್ವರ ಬಲರಾಮನನ್ನು ಕುರಿತು ಘರ್ಜಿಸಿದನು. ಆಗ ಬಲರಾಮನು –

ಬಡವ ನಾನೊಂದು ನೇಗಿಲಲಿ ನಿನ್ನುವ ಬೀಳ
ಹೊಡೆದು ಕಾರ್ಗಲಸಿ ಗದ್ದೆಯನು
ತಡೆಯದೆ ಸತ್ಕೀರ್ತಿಗಂಧಶಾಲಿಯ ಬಿತ್ತಿ
ಪಡೆವೆನು ಫಲವ ನೋಡೆಂದ॥ ೩೮ –೪೯

ಕಡುತೇಜದೊಕ್ಕಲು ತೆತ್ತು ಹೊತ್ತವನಲ್ಲ
ದುಡಿದಿಕ್ಕುವಡೆ ದಾಷ್ಟಿಕವ
ನುಡಿದಂತೆ ಕೂರ್ಗೋಲ ಕೊರತೆ ಕೋಯೆನು
ತಿಡಿದನು ಡೊಳ್ಳುಹೊಟ್ಟೆಗನು॥ ೩೮ – ೫೦

ಇವರಿಬ್ಬರ ಯುದ್ಧವನ್ನು ಕಂಡು ಹರ್ಷಿಸಿದ ದೇವತೆಗಳು ಹೂಮಳೆಗರೆದರು. ಈಶ್ವರನು ಗಣಪತಿಯನ್ನು, ಕೃಷ್ಣನು ಬಲರಾಮನನ್ನು ಸಂತೈಸಿದರು.

ಸ್ವತಃ ಯುದ್ಧ ಬೀರುವಾದ ಕನಕದಾಸರು ಯುದ್ಧ ವಿವರಗಳಲ್ಲಿ ತಮ್ಮ ಸ್ವಂತಿಕೆಯನ್ನು ಮೆರೆದಿದ್ದಾರೆ. ಆದಿಕವಿ ಪಂಪನು ತನ್ನ ಕಾವ್ಯದಲ್ಲಿ ಸ್ವಾನುಭವ ಪೂರ್ಣ ಯುದ್ಧವಿವರಗಳನ್ನು ನೀಡುವಂತೆ ಕನಕದಾಸರೂ ಕೂಡ ಈ ದೃಷ್ಟಿಯಿಂದ ಹೊರತಾಗಿಲ್ಲ ಅನಿಸುತ್ತದೆ. ಬಾಣಾಸುರನನ್ನು ಸೋಲಿಸುವುದಕ್ಕಾಗಿ ದಂಡೆತ್ತಿ ಹೋಗುವ ಸಂದರ್ಭದ ವಿವರಗಳು ಸೊಗಸಾಗಿ ಮೂಡಿ ಬಂದಿದೆ.

ಮುತ್ತಿನ ಗದ್ದುಗೆ ಗರುಡನ ಹೆಗಲನೊ
ಲೆತ್ತಿಸಿ ಬಿಗಿದು ಹಲ್ಲಣಿಸೆ
ಅತ್ಯಂತ ಸೌಖ್ಯವ ಮಾಡಿ ಸಂತಸದಿಂದೆ
ಹತ್ತಿದ ಶ್ರೀ ಕೃಷ್ಣರಾಯ

ಕೃಷ್ಣದೇವರಾಯ ವಿಜಯನಗರದಿಂದ ದಂಡೆತ್ತಿ ಹೋಗುವ ದೃಶ್ಯದೊಂದಿಗೆ ಸಮೀಕರಿಸಿಕೊಂಡು ಈ ಕಥಾವಿವರಗಳನ್ನು ವಿಸ್ತರಿಸಿದ್ದಾರೆ. 'ಕನಕನಾಯಕ'ನಾಗಿದ್ದಾಗ ಯುದ್ಧದಲ್ಲಿ ಸ್ವತಃ ಭಾಗವಹಿಸಿದ ಅನುಭವಗಳನ್ನು ಕನಕದಾಸರು ಈ ಸಂದರ್ಭಗಳಲ್ಲಿ ಬಳಸಿಕೊಂಡಿದ್ದಾರೆ. ಅವರು ಬದುಕಿ ಬಾಳಿದ ಕಾಲ ಸಂಪತ್ ಸಮೃದ್ಧಿಯ ಕಾಲವಾಗಿದ್ದಂತೆಯೇ ಯುದ್ಧಸಮಯವೂ ಆಗಿದ್ದಿತು. ರಾಯಚೂರು ಕಾಳಗ, ರಕ್ಕಸತಂಗಡಿ ಕಾಳಗ ಮುಂತಾದವು ಕನಕದಾಸರ ಕಾಲದಲ್ಲಿಯೇ ನಡೆದಿರುವುದು ಗಮನಾರ್ಹ.

ಮೋಹನ ತರಂಗಿಣಿಯಲ್ಲಿ ಮೂಡಿ ಬಂದ ಶೌರ್ಯವು ವೀರ ರಸ ಪ್ರಧಾನವಾಗಿದ್ದು, ಸಮಬಲರೊಡನೆ ಯುದ್ಧ, ದೈವಶಕ್ತಿಯ ಮೂಲಕ ಸೋಲನ್ನನುಭವಿಸಿದವನಿಗೆ ಮುಕ್ತಿ. ವೀರಾಲಾಪಗಳಿಲ್ಲದ ಯುದ್ಧ ಯುದ್ಧವೇ ಅಲ್ಲ, ಮಾಯಾಯುದ್ಧ ಮಾಡುವುದು ಮೊದಲಾದವುಗಳನ್ನು ಮತ್ತು ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ ಸಲ್ಲದು ಎಂಬ ತತ್ವವನ್ನು ಬಿಂಬಿಸುತ್ತದೆ.

ಭಕ್ತಿ :-

'ಶ್ರೀಕೃಷ್ಣ ಮಹಿಮಾಸ್ತುತಿ' ಯು ಮೋಹನ ತರಂಗಿಣಿ ಕಾವ್ಯ ರಚನೆಯ ಉದ್ದೇಶಗಳಲ್ಲಿ ಪ್ರಮುಖವಾದುದು. ಕನಕದಾಸರು 'ಶ್ರೀಕೃಷ್ಣ ಚರಿತೆ' ಎಂದು ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ. ಪ್ರತಿ ಸಂಧಿಯ ಮೊದಲಲ್ಲಿ ತಮ್ಮ ಸತಿಯ ಮುಂದೆ ಶ್ರೀ ಕೃಷ್ಣನ ಮಹಿಮಾ ಸ್ತುತಿಯನ್ನು ಮಾಡದಿದ್ದರೆ ಕವಿಗೆ ಸಮಾಧಾನವೇ ಇಲ್ಲ. ಶ್ರೀ ಕೃಷ್ಣ ಮಹಿಮಾಸ್ತುತಿಯು ಸರ್ವಜನ್ಮಗಳ ಪಾಪವನ್ನು ನಾಶಗೊಳಿಸಿ ಮೋಕ್ಷ ಪದವಿಯನ್ನು ದಯಪಾಲಿಸುತ್ತದೆ ಎಂಬುದು ಕವಿಯ ನಿಷ್ಠೆ, ನಂಬಿಕೆ. ಮೋಹನ ತರಂಗಿಣಿಯಲ್ಲಿ ವಿಷ್ಣು ಭಕ್ತಿ ಮತು ಶಿವಭಕ್ತಿಗಳ ಸಮಾವೇಶವಾಗಿದೆ. ವಿಷ್ಣುಪುರಾಣ, ಹರಿವಂಶ, ಭಾಗವತಗಳಲ್ಲಿಯೇ ಈ ನೆಲೆಗಟ್ಟು ಇರುವುದರಿಂದ ಕನಕದಾಸರಿಗೆ ವಿಷ್ಣುಪಾರಮ್ಯ ಮತ್ತು

ಶಿವಪಾರಮ್ಯಗಳ ಸಾಮರಸ್ಯವನ್ನು ಸಾಧಿಸಲು ಅಡ್ಡಿ ಅಡಚಣೆಗಳು ಉಂಟಾಗಲಿಲ್ಲ. ಸುಜ್ಞಾನವಧೂಟಿಯ –

ವೆಂಠಣಿಸಿದ ವಿಷ್ಣು ಭಕ್ತಿನಂದನ ಕಲ
ಕಂಠ ನಿನ್ನಯ ಸವಿವಾತು
ಉಂಟಾದುದೆನ್ನಯ ಕರ್ಣಕ್ಕೆ ಪರಲೋಕ
ನಂಟರು ಕೇಳುವಂತುಸಿರು॥ ೨ – ೨

ಎನ್ನುವ ಮಾತಿಗನುಗುಣವಾಗಿಯೇ ಮೋಹನ ತರಂಗಿಣಿಯನ್ನು ರಚಿಸಿದ್ದಾರೆ ಭಾಗವತದ "ಕಲೌ ತದ್ ಹರಿ ಕೀರ್ತನಾತ್" ಮತ್ತು ಕಲಿಯುಗದಲ್ಲಿ ಪುಣ್ಯಸಂಪಾದನೆ ಶ್ರೀಹರಿನಾಮದಿಂದ ಮಾತ್ರ ಎನ್ನುವ ಮಾತನ್ನು ಸಾರ್ಥಕಗೊಳಿಸಿದ್ದಾರೆ. ಕೃಷ್ಣನ ಪ್ರೇರಣೆ ಜಗದ ಪ್ರತಿಯೊಬ್ಬನಿಗೂ ಅವಶ್ಯಕ ಎನ್ನುವುದನ್ನು ಈ ಪದ್ಯ ಹೇಳುತ್ತದೆ.

ಪರಿಪೂರ್ಣಭಾವ ಶುದ್ಧಿಯನ್ನುಳ್ಳ ಜಗದಂ
ತರಿಯಾಮಿ ಮುಂಗೆಲಸಕ್ಕೆ
ತುರಿಹ ದಿಂದವಳ ಪ್ರೇರಕನಾಗಿ ಪರಮ ತಾ
ತ್ವರಿಯದಿಂದೊಳವುಗಿಸಿದನು॥

ಇಡೀ ಕಾವ್ಯ ಕೃಷ್ಣನ ರಾಜ್ಯವಾದ ದ್ವಾರಕೆಯ ವೈಭವೋಪೇತ ಭೋಗದ ನೆಲೆಯಾಗಿ ಚಿತ್ರಿತವಾಗಿದ್ದರೂ. ಬಾಣಾಸುರನ ಶಿವ ಪೂಜೆಯ ಸಂದರ್ಭದಲ್ಲಿ ಶಿವಭಕ್ತಿ ತಾನೇ ತಾನಾಗಿ ವಿಜೃಂಭಿಸಿದೆ. ಕನಕದಾಸರ ದೃಷ್ಟಿಯಲ್ಲಿ ಶಿವ – ಆದಿಕೇಶವರಿಬ್ಬರೂ ಏಕಸ್ಥಾನಿಗಳು : ಸಮಾನರು. ಈ ಭಾಗವತ ಮನೋಭಾವ ಈ ಕಾವ್ಯದಲ್ಲಿ ಮುಗಿಲು ಮುಟ್ಟಿದೆ. ಹರಿಹರರ ಪ್ರತಿನಿಧಿಗಳೆಂಬಂತೆ ತೋರುವ ಅನಿರುದ್ಧ – ಉಷೆಯರ ವಿವಾಹದವರೆಗೂ ಹಾದಿದೆ. ಅವರಿಬ್ಬರೂ ಏಕಪೀಠದಲ್ಲಿ ಕುಳಿತು ಭಾಳಾಕ್ಷ ಹಾಗೂ ಪುಂಡರೀಕಾಕ್ಷರನ್ನು ಬಿಲ್ವಪತ್ರೆ, ತುಳಸಿಗಳಿಂದ ಪೂಜಿಸುವರು. ಎಲ್ಲ ಹರಿದಾಸರಂತೆ ಹರಿ – ಹರ ಭಕ್ತಿ ಸಮನ್ವಯ ದೃಷ್ಟಿಯನ್ನು ಕನಕದಾಸರಲ್ಲಿ ಕಾಣುತ್ತೇವೆ.

ಕನಕದಾಸರ ಈ ಕಾವ್ಯದ ಪ್ರಧಾನ ಮನ್ನಣೆ ಶೃಂಗಾರವಾದರೂ. ಈ ಶೃಂಗಾರ ರಸಕ್ಕೆ ಜೊತೆಯಾಗಿ ಪ್ರೇಮ – ಭಕ್ತಿರಸಗಳು ಜೊತೆ ಜೊತೆಯಾಗಿ ಚಲಿಸಿವೆ.

ವರ ಮೋಹನ ತರಂಗಿಣಿಯೆಂಬ ಕಾವ್ಯವ
ಬರೆದೋದಿ ಕೇಳಿದ ಜನರ
ತರಣಿ ಚಂದ್ರಮರುಳ್ಳನಕ ಸತ್ಕೃಪೆಯಿತ್ತು
ಪೊರೆವ ಲಕ್ಷೀಕಾಂತ ಬಿಡದೆ॥

ಇಲ್ಲಿಯೂ ಕೂಡ ಕನಕದಾಸರ ಭಕ್ತಿಯೇ ಧ್ವನಿತವಾಗಿದೆ. ಶ್ರೀ ಕೃಷ್ಣನನ್ನು ನಂಬಿದ ಭಕ್ತರನ್ನು ಆತ ಕೈ ಬಿಡದೆ ಸಲಹುತ್ತಾನೆ. ದುಷ್ಟ ಸಂಹಾರ, ಭಕ್ತರ ರಕ್ಷಣೆ ಕೃಷ್ಣನ ಕಾರ್ಯವೆಂಬುವುದನ್ನು ಕನಕದಾಸರು ಪ್ರಚುರಪಡಿಸಿದ್ದಾರೆ.

'ಮೋಹನ ತರಂಗಿಣಿ'ಯಲ್ಲಿ ಕಂಡುಬರುವ ಶೃಂಗಾರ, ಶೌರ್ಯ ಮತ್ತು ಭಕ್ತಿಯ ಚಿತ್ರಣವು ಒಂದು ನಿರ್ದಿಷ್ಟ ಸೂತ್ರವನ್ನು ಹೊಂದಿದೆ. ಭಾರತೀಯ ಮಹಾ ಕಾವ್ಯ ಪರಂಪರೆಯಲ್ಲಿ ಶ್ರೀಕೃಷ್ಣನು ಜೀವನಪ್ರೀತಿಯ ಸಂಕೇತ. ಬದುಕಿನ ಎಲ್ಲ ಸೌಂದರ್ಯವನ್ನು ಸವೆಯುವ ರಸಿಕಹೃದಯಿ. ಹಾಗೆಯೇ ಜೀವನದ ಸವಾಲುಗಳನ್ನು ಎದುರಿಸುವ ಸಂದರ್ಭದಲ್ಲಿ ತನ್ನದೇ ನಿಲುವುಗಳಿಗೆ ಬದ್ಧನಾಗಿ ನಿಂತವನು. ಇದರಿಂದಾಗಿ ನಿಯಮಾತೀತನು ಹೌದು. ಶ್ರೀ ಹರಿಯ ಚರಣಗಳಿಗೆ ಶರಣಾದ ವ್ಯಕ್ತಿತ್ವವು. ಲೋಕದ ಕಂಟಕಗಳ ನಿವಾರಣೆಗೆ ವಿಷ್ಣುವನ್ನೇ ನೆಚ್ಚಿಕೊಂಡಿದೆ. ಪೌರಾಣಿಕ ಲೋಕದಲ್ಲಿನ ಲೋಕ ಕಂಟಕಗಳನ್ನು ಆಗಾಗ್ಗೆ ಅವತಾರವೆತ್ತಿ ಅಥವಾ ಬೇರೆ ಬೇರೆ ದಾರಿಗಳ ಮೂಲಕ ಅಂತಹವರನ್ನು ನಾಶ ಮಾಡುವ ವಿಷ್ಣು ಶಿವ ಶಕ್ತಿಗಳು ನಮ್ಮ ಪರಂಪರೆಯಲ್ಲಿನ ಅಲೌಕಿಕತೆಯ ಬಗೆಗಿನ ನಂಬಿಕೆಯನ್ನೇ ಹೇಳುತ್ತವೆ. ಹಾಗೆಯೇ ಮೋಹನ ತರಂಗಿಣಿಯಲ್ಲಿ ಶೃಂಗಾರ, ಶೌರ್ಯ ಮತ್ತು ಭಕ್ತಿ ರಸಗಳು ಜೊತೆಜೊತೆಯಾಗಿ ಚಲಿಸುತ್ತವೆ. ಕನಕದಾಸರು ಲೌಕಿಕ ಮತ್ತು ಪಾರಮಾರ್ಥಿಕ ಸುಖಗಳಿಗೆರಡಕ್ಕೂ ಸಮಾನ ಮಹತ್ವ ನೀಡಿರುವುದು ಕಂಡುಬರುತ್ತದೆ. ಲೌಕಿಕ ಸುಖದ ಮೂಲಕ ಮೋಕ್ಷ ಸಂಪಾದನೆ ಎಂಬುದನ್ನು ತಿಳಿಸುತ್ತದೆ.

ಅಧ್ಯಾಯ – ೪

ಮೋಹನ ತರಂಗಿಣಿಯಲ್ಲಿ ಮೂಡಿ ಬಂದ ಸಮಕಾಲೀನ ಚಿತ್ರಣ

ಅ. ಮೋಹನ ತರಂಗಿಣಿಯಲ್ಲಿ ವರ್ಣನೆ : –

ಸೂಕ್ಷ್ಮವೂ ಸ್ಥೂಲವೂ ಆದ ಕಥಾವಸ್ತುವಿಗೆ ವರ್ಣನೆಗಳನ್ನು ಅಳವಡಿಸಿ ಕಾವ್ಯಗಳನ್ನು ರಚಿಸುವುದು ಲೋಕರೂಢಿ. ವರ್ಣನೆಗಳಲ್ಲಿ ಕವಿಕಲ್ಪನೆಯ ವರ್ಣನೆಗಳು, ಕವಿಸಮಯಾದಿಗಳಿಂದ ರೂಪುಗೊಂಡ ಪರಂಪರಾಗತ ವರ್ಣನೆಗಳು ಮತ್ತು ಕವಿ ತನ್ನ ಜೀವನದಲ್ಲಿ ಕಂಡುಂಡ ಅನುಭವಗಳಿಂದ ಮೂಡಿದ ವರ್ಣನೆಗಳು ಕಂಡು ಬರುತ್ತವೆ. ಈ ಎಲ್ಲಾ ವರ್ಣನೆಗಳನ್ನೂ ಸೇರಿಸಿ ಲಾಕ್ಷಣಿಕರು ಹದಿನೆಂಟು ವರ್ಣನೆಗಳಲ್ಲಿ ಸಮಾಮ್ನಾಯಗೊಳಿಸಿದ್ದಾರೆ. ಅಂತಹ ಒಂದು ಸಂಕಲನ ಗ್ರಂಥವಾದ ಸೂಕ್ತಿಸುಧಾರ್ಣವದಲ್ಲಿ –

ಉದಧಿ ಪುರಾಧಿಪ ಸುತ ಮಂ
ತ್ರಿ ದೂತ ಗಮನಾಜಿ ವಿರಹ ಪರಿಣಯ ಸುರತ
ರ್ತು ದಿನೇಶ ಚಂದ್ರ ಮಧು ಕು
ಭೃದುದಕ ವನಸ್ಪತಿಯೆ ಕೃತಿಗೆ ಪದಿನೆಂಟಂಗಂ॥

ಎನ್ನುವ ಪದ್ಯದಲ್ಲಿ ಸೂತ್ರರೂಪವಾಗಿ ಹೇಳಲಾಗಿದೆ. ಸೊಬಗಿನ ಸೋನೆಯಲ್ಲಿ ದೇವರಾಜನು ಈ ಹದಿನೆಂಟು ಅಂಗಗಳನ್ನು ಅಂಗೀಕರಿಸಿದ್ದಾನೆ –

ಪುರ ಗಿರಿ ಋತು ನಂದನ ರವಿ ಶಶಿ ಸಾಗ
ರ ರತಿ ಮಧು ಮಂತ್ರ ನೃಪರೇಳ್ಗೆ
ಧುರ ಚರ ಜಲಕೇಳಿ ಸುತ ಕಲ್ಯಾಣ
ವಿರಹ ಕಾವ್ಯಕ್ಕೆ ಪದಿನೆಂಟಂಗಂ॥   ೧ – ೨೩

ಕನಕದಾಸರು ಮೋಹನ ತರಂಗಿಣಿಯನ್ನು ಮಹಾಕಾವ್ಯದ ನೆಲೆಗೆ ತರುವ ದೃಷ್ಟಿಯಿಂದ ಸಮುದ್ರ, ನದಿ, ಸೂರ್ಯೋದಯ, ಸೂರ್ಯಾಸ್ತ, ಬೇಟೆ, ವೇಶ್ಯಾವಾಟಿಕೆ ಇತ್ಯಾದಿ ಸಾಂಪ್ರದಾಯಿಕ ಅಷ್ಟಾದಶ ವರ್ಣನೆಗಳನ್ನೂ ಉದ್ದೇಶಪೂರ್ವಕವಾಗಿಯೇ ತಂದಂತಿದೆ.

ಕನಕದಾಸರ ವರ್ಣನಾವೈಖರಿ ಅತ್ಯದ್ಭುತವಾದದ್ದು. ಮೋಹನ ತರಂಗಿಣಿ ಪ್ರಾರಂಭವಾಗುವುದೇ –

ಈ ಕಾವ್ಯಕಾದಿವರ್ಣನೆಯಾವುದೆನಲು ರ
ತ್ನಾಕರ ನೆಲವೆಣ್ಣಿನುಡೆಯ
ಮೇಖಲೆಯೆಂಬಂತೆ ಪರಿವೇಷ್ಟಿಸಿರ್ದುದ
ನೇಕ ಸಂಭ್ರಮವನೇನೆಂಬೆ॥ ೨ – ೪

ಸಮುದ್ರ ವರ್ಣನೆ ನೀಡುವಾಗ –

ನೀರಾನೆ ನೆಗಳು ಪಾಠೀನ ಕಮಠ ಶಿಂಶು
ಮಾರ ಕರ್ಕಟ ಜಳ್ಳೂಕ
ಘೋರಾಹಿ ಮೊದಲಾದ ದುಷ್ಟಜಂತುಗಳಿಂದ
ವಾರಾಶಿ ಕಣ್ಗೆ ರಂಜಿಸಿತು॥ ೨ – ೫

ಆದರೆ ಕನಕದಾಸರ ಸಮುದ್ರ ವರ್ಣನೆ ಸ್ವತಃ ಅನುಭವಿಸಿದಂತೆ ಕಾಣುತ್ತದೆ. ಬಹುಶಃ ಉಡುಪಿಯಲ್ಲಿ ಸಮುದ್ರ ಕಂಡ ಫಲವಾಗಿರಬಹುದು. ಸೂರ್ಯೋದಯ, ಸೂರ್ಯಾಸ್ತಗಳ ವರ್ಣನೆಯ ಸೊಗಸೇ ಸೊಗಸು:

ಸಾರ್ವಭೌಮಾಧೀಶ್ವರ ಕಂತುತನಯಂಗೆ
ಪೂರ್ವದಿಗಂಗನೆ ತಂದು
ತೋರ್ವಮಾಣಿಕದ ಕನ್ನಡಿಯೆನೆ ಕಾಂತಿಯ
ಬೀರ್ವ ಭಾಸ್ಕರ ಮೂಡಿದನು॥

ಸಾರ್ವಭೌಮನ ಅಧೀಶ್ವರನಾದ ಅನಿರುದ್ಧನಿಗೆ ತೋರಿಸಲು ಪೂರ್ವ ದಿಶಾಂಗನೆಯು ತಂದ ರನ್ನಗನ್ನಡಿಯಂತೆ ಪ್ರಕಾಶಮಾನನಾದ ಸೂರ್ಯ ಮೂಡಿದನು.

ಕಂಜಬಾಂಧವನಸ್ತಮಿಸೆ ಪಡುವಣವೆಣ್ಣು
ಮುಂಜೇತನಗುಂದಿ ತನ್ನ
ಮಂಜುಲಬಾಯ ತಂಬುಲವುಗುಳ್ವಂತೆ
ಸಂಜೆಗೆಂಪೆಸೆದಿರ್ದುದಾಗ

ಸೂರ್ಯಾಸ್ತದ ನೈಜ ವರ್ಣನೆಯನ್ನು ಕವಿ ನೀಡಿದ್ದಾರೆ.

ಕೊಡೆ ಮೇಣಗಪ್ಪಡಗೊಂಗಡಿ ಬಹು ರಮ್ಯ
ವಡೆದಿರ್ದ ಸಕಲಾತಿದಳೆದು
ಬಿಡಯವಿಲ್ಲದೆ ಪುರದೊಳು ನೀರ್ಮಾನುಜರಂ
ತೆಡೆಯಾಡುತಿರ್ದರೂರುಗರು॥

ಮಳೆ ಸುರಿಯಲಾರಂಭಿಸಿದಾಗ ಊರಿನ ರಸ್ತೆಗಳು ಹೇಗೆ ಕಾಣುತ್ತಿದ್ದವು ? ಕೊಡೆ ಹಿಡಿದು ಓಡಾಡುವ ಜನರು ಜಲಮಾನವರಂತೆ ಅಲೆದಾಡುತ್ತಿದ್ದರು ಎಂಬ ಚಿತ್ತವತ್ತಾದ ದೇಸಿಪದಗಳಿಂದ ಕೂಡಿದ ವರ್ಣನೆಯಲ್ಲಿ ಕನಕದಾಸರ ಕೌಶಲ್ಯವನ್ನು ಕಾಣಬಹುದು. ಪರ್ವತವನ್ನು ವರ್ಣಿಸುವಾಗ ಕಂಬಸೂತ್ರವ ಪ್ರತಿಷ್ಠೆಯ ಮಾಡಿದಂದದಿ ಪೊಂಬೆಟ್ಟ ಕಣ್ಗೆ ರಾಜಿಸಿತಂತೆ

ಎಂಬತ್ತುನಾಲ್ಕು ಲಕ್ಷದ ಜೀವ ರುಗಳೆಂ
ದೆಂಬ ಬೀಜವ ಸೃಷ್ಟಿಕರ್ತ
ಮುಂಬೆಳಸಿಗೆ ಪಣತವ ಕಟ್ಟಿದಂದದಿ
ಪೊಂಬೆಟ್ಟ ಕಣ್ಗೆ ರಂಜಿಸಿತು॥ ೨ - ೧೨

'ಮುಂಬೆಳಸಿಗೆ ಪಣತವ ಕಟ್ಟಿದಂದದಿ' ಎನ್ನುವ ಮಾತು ಪರ್ವತ ವರ್ಣನೆಗೆ ಸಂಬಂಧಿಸಿದಂತೆ ಕನಕದಾಸರಿಗೆ ಮೀಸಲಾದುದು. ಮೋಹನ ತರಂಗಣಿಯಲ್ಲಿ ಋತು ವರ್ಣನೆಗಳು ಅಲ್ಲಲ್ಲಿ ಬಂದಿವೆ. ಕನಕದಾಸರ ವರ್ಣನಾ ಪ್ರತಿಭೆಯನ್ನು ಎತ್ತಿ ತೋರುವ ಮಳೆಯ ವರ್ಣನೆ ಈ ರೀತಿ ಇದೆ. ಮಳೆ ಬಂದಾಗ ಬರುವ ಬಿರುಗಾಳಿ ಹೇಗಿದೆಯೆಂದರೆ –

ತುಱುಗಿದ ಕಾಯಿಪಣ್ಗಳ ಸಾಲುಸಾಲುವೃಕ್ಷವ
ಮುರಿದು ದೂಳಿಯ ಚೆಲ್ಲಿಕೊಳುತ
ಸುರಿವ ಸೊಂಡಿಲ ನೀರ್ಗರೆಯುತ ಬಂದುದು
ಬಿರುಗಾಳಿ ಮದಗಜದಂತೆ॥ ೪ – ೩೭

ಮದಗಜದ ಮುಂದೆ ಯಾರೂ ನಿಲ್ಲುವ ಹಾಗಿಲ್ಲ. ಅಂತೆಯೇ ಬಿರುಗಾಳಿಯನ್ನು ಎದುರಿಸುವವರು ಯಾರೂ ಇಲ್ಲ. ಮಳೆಗಾಳಿಯ ರಭಸ ಹೇಗಿದ್ದಿತ್ತೆಂದರೆ ಹಣ್ಣುಕಾಯಿ ತುಂಬಿದ ಸಾಲುಮರಗಳನ್ನು ಮುರಿದು ಬರುವ ಮದಗಜದಂತಿತ್ತು. ಆ ಗಾಳಿಗೆ ಮೇಲೆದ್ದ ಧೂಳನ್ನು ಮದಗಜ ತನ್ನ ಮೇಲೆ ತಾನೆ ತೂರಿಕೊಳ್ಳುವ ಮಣ್ಣಿನ ಧೂಳನಂತಿದ್ದಿತು.

ಮಳೆ ಹುಯ್ಯುವಾಗ ಆಲೆಕಲ್ಲು ಬಿದ್ದ ರೀತಿ - ನವಿಲ ನಾಟ್ಯಕ್ಕೆ ಮೆಚ್ಚಿ ಇಂದ್ರನೇ ಮೊದಲಾದ ಮೂವತ್ತೂ ಮೂರು ಕೋಟಿ ದೇವತೆಗಳು ಮುತ್ತಿನ ತ್ಯಾಗವ ಕೊಟ್ಟಂತಿತ್ತು ಎಂದಿದ್ದಾರೆ. ಸತತವಾಗಿ ಸುರಿವ ಮಳೆ ವಿಶ್ವರೂಪದಂತೆ ಕಂಡಿತ್ತು ಎನ್ನುವಲ್ಲಿ ಅವರ ಅಗಾಧ ಕಲ್ಪನಾಶಕ್ತಿ ಕಂಡು ಬರುತ್ತದೆ. ಕೆರೆತೊರೆ ತುಂಬಿದವು ಕೃಷ್ಣನು ಹರ್ಮ್ಯವನ್ನೇರಿ ನೋಡುತ್ತಿದ್ದನು ಎಂದು ವರ್ಣಿಸಿದ್ದಾರೆ. ಮಳೆಗಾಲ ಕಳೆದು ಮಾಗಿ ಕಾಲ ಬಂದಿತು. ಮಾಗಿಯ ಹಿಮ ವಿಟನಂತೆ ಕಣ್ಣಿಗೆ ರಂಜಿಸಿತು. ಅದರ ಆರ್ಭಟವನ್ನು ಕವಿ ಹೀಗೆ ವರ್ಣಿಸುತ್ತಾರೆ -

ಪಗಲಾಣ್ಮ ನಡನಡುಗಿದ, ಹುತಾಶನ ಬೇಱ್
ನೆಗಳದ ಪ್ರತಿಗಿಚ್ಚತನಗೆ
ಮಗಳಕೊಟ್ಟವನ ಭಂಗಿಸಿ ರುದ್ರ ಹಳೆಯಾನೆ
ದೊಗಲುಟ್ಟ ಹಿಮದುಪಟಳಕೆ॥ ೪ - ೪೭

ಚಳಗಾಲದಲ್ಲಿ ಸೂರ್ಯ, ಅಗ್ನಿ, ರುದ್ರರ ಪಾಡೇ ಹೀಗಾದ ಮೇಲೆ ಉಳಿದವರ ಪಾಡೇನು ? ಕವಿ ಋತು ವೈಪರಿತ್ಯವನ್ನು ವರ್ಣಿಸುವ ಪರಿ ಅತ್ಯದ್ಭುತವಾಗಿ ಮೂಡಿ ಬಂದಿದೆ. ಓದುಗರ ಕಲ್ಪನೆಗೇ ಬಿಟ್ಟಂತಿದೆ. ಮಾತೃವಾತ್ಸಲ್ಯವನ್ನು ಕುರಿತು ಕನಕದಾಸರಲ್ಲಿದ್ದ ಅತಿಮಧುರ ಭಾವಗಳು – ತನ್ನ ಗರ್ಭದಲ್ಲಿ ಜನಿಸಿದ ಬಾಲ ಅನಿರುದ್ಧನಿಗೆ ರತಿದೇವಿಯು ತೋರುವ ಮಾತೃಪ್ರೇಮದಲ್ಲಿ ವ್ಯಕ್ತವಾಗಿದೆ.

ಅಕ್ಕುಲಿಗೊಳಸುವಳ್ ಮುನಿದು ನೋಡುವಳು ತಾ
ನಕ್ಕು ತನ್ನೊಳಗೆ ಹಿಗ್ಗುವಳು
ಮುಕ್ಕಳಿಸುವ ಜೊಲ್ಲುವಾಯಿಗೆ ಕಡುಸೀಹ
ಸೊಕ್ಕಾಂತು ಮುತ್ತನಿಕ್ಕುವಳು॥

ಹಾಗೇ ಬಾಲ ಪ್ರದ್ಯುಮ್ನನನ್ನು ಶಂಬರಾಸುರ ಕದ್ದೊಯ್ದಾಗ ರುಕ್ಮಿಣಿದೇವಿಯ ವಿಲಾಪದ ವರ್ಣನೆ ಎಲ್ಲ ತಾಯಿಯರ ಮನ ಮಿಡಿಸುವ ಕರುಣರಸದಿಂದ ಕೂಡಿದೆ.

ಎಣ್ಣೆ ತಲೆಗೂಡಿದುದಿಲ್ಲ ನೊರೆವಾಲು
ಬೆಣ್ಣೆ ಮೆಲ್ಲಿಸಿದುದಿಲ್ಲ
ಕಣ್ಣಿವೆ ಹಳಚಿ ನೋಡಿದುದಿಲ್ಲ ಮಗನ ಲಾ
ವಣ್ಯ ಏನೆಂದಳಳದಳು॥
ಹಾಲಿಗೆ ಹಂಬಲಿಸುವನಲ್ಲ ಬಿಡದಂಬೆ
ಗಾಲಿಕ್ಕಿ ತೆರಳುವವನಲ್ಲ
ಕಾಲು ಬಡಿದು ದಟ್ಟಡಿಯಿಡುವವನಲ್ಲ
ಬಾಲನೆಲ್ಲಿಗೆ ಹೋದನವ್ವ॥

ಎಂಬುದಾಗಿ ರೋದಿಸುವ ಭಾಗ ಹೃದಯವಿದ್ರಾವಕವಾಗಿದೆ.

ನೆಟ್ಟನೆ ಮೊಗನೋಡಿ ಮುದ್ದಿಪಳ್ ತರಳನ
ಪುಟ್ಟ ಕೈಗಳ ತಂದು ತನ
ಬಟ್ಟ ಬಲ್ಮೊಲೆಗಡುರ್ಚುವಳು ಬಾಯಾಳು ಬಾಯ
ನಿಟ್ಟು ಗಲ್ಲವ ಪಿಡಿದಳು॥

ಎಂಬಲ್ಲಿ "ರತಿಯು ಮಗುವಾಗಿದ್ದ ತನ್ನ ಗಂಡನೊಡನೆ ನಡೆಸುವ ಈ ಸರಸ ಶೃಂಗಾರದ ಮಾರ್ದತೆ ಯನ್ನು ಮಿಡಿಯದೆ ಕಾಮದ ಅಭೀಪ್ಸೆಯನ್ನು ಹೊರಹಾಕುತ್ತದೆ. ರತಿಯ ಪಾತ್ರದ ದೃಷ್ಟಿಯಿಂದಲೂ ಇದು ಔಚಿತ್ಯ ಮೀರಿದ ಕ್ರಿಯೆಯಾಗುತ್ತದೆ"[೪] ಎಂಬಲ್ಲಿ ವಾತ್ಸಲ್ಯರಸ ಭೋಗಮಿಶ್ರಿತ ವರ್ಣನೆಯು ಪರಮಾವಧಿಗೇರಿದ ರೀತಿಯನ್ನು ಗಮನಿಸಬಹುದಾಗಿದೆ.

ವಿಜಯನಗರದ ಪುರವರ್ಣನೆಯನ್ನು ಗಮನಿಸಿದಾಗ ಕೃಷ್ಣದೇವರಾಯನ ಕಾಲದ ವೈಭವೋಪೇತ ನಗರ ಸಮೃದ್ಧಿಯನ್ನು ಕಾಣುತ್ತೇವೆ.

---

[೪] ಜೆ. ಎನ್. ಶ್ಯಾಮರಾವ್. ಮೋಹನತರಂಗಿಣಿ- ಒಂದು ಅಧ್ಯಯನ, ಕನಕಕಿರಣ, ಪುಟ ೮೩

ಸೋಮಸೂರಿಯ ವೀಧಿವೀಧಿಯಕ್ಕೆಲದಲ್ಲಿ
ಹೇಮನಿರ್ಮಿತ ಸಾಲಸೌಧಾ
ರಾಮನೀಯತೆವೆತ್ತ ಕಳಸದಂಗಡಿಯಿರ್ದು
ವಾ ಮಹಾ ದ್ವಾರಕಾಪುರದೆ॥

ವಿಜಯನಗರದ ಪುರವರ್ಣನೆಯಂತೆಯೇ ಜಲಕೇಳಿ, ವನಕೇಳಿ, ಬೇಟೆ, ಸೂಳೆಗೇರಿಯ ವರ್ಣನೆಗಳು ಎಲ್ಲೂ ಅನುಚಿತವೆನಿಸದೆ ಸಹಜವಾಗಿ ಮೂಡಿ ಬಂದಿದೆ.

ಮೂಲತಃ ದಂಡನಾಯಕನಾಗಿ ಯುದ್ಧದ ಅನುಭವಗಳನ್ನು ಸ್ವತಃ ಪಡೆದು ಶೌರ್ಯ. ಸಾಹಸ ಪ್ರದರ್ಶಿಸಿ ಜನನಾಯಕನಾಗಿದ್ದ ತಿಮ್ಮಪ್ಪನಾಯಕ ಕನಕದಾಸರಾದರೂ ಕಾವ್ಯದಲ್ಲಿ ಯುದ್ಧ ಸಂದರ್ಭಗಳು ಬಂದಾಗಲೆಲ್ಲ ವೀರರಸ ಸ್ಫುರಿಸುವಂತೆ ಅತ್ಯದ್ಭುತವಾಗಿ ವರ್ಣಿಸಿದ್ದಾರೆ.

ಕಡೆಯ ಪೆಂಡೆಯ ಗೆಜ್ಜೆ ಕಣಕಾಲ ಬಾಸಿಂಗ
ಮಡೆಯ ಬದ್ದುಗೆಯ ಕಿಗ್ಗಟ್ಟು
ಬಿಡೆಯಿಲ್ಲದೆ ಪೋಲಗಟ್ಟಿನ ಬಿಲ್ಲಾಳ
ಪಡೆನಡೆಯಿತು ಬಾಣನೊಡನೆ ॥

ವೀರತನ ಆ ಕಾಲದ ಸಾಮಾಜಿಕ ಪ್ರತಿಷ್ಠೆಗಾಗಿ ಮೆರೆದ ರೀತಿಗೆ ಉದಾಹರಣೆಯಂತೆ ಕೃಷ್ಣನ ಪ್ರತಿನಾಯಕನಾದ ಬಾಣಾಸುರನ ವರ್ಣನೆ ಬಂದಿದೆ. ಶಿವನಲ್ಲಿ ವರಬೇಡುವ ಪ್ರಸಂಗ ಬಂದಾಗ ಬಾಣಾಸುರ ತನ್ನ ಜೊತೆಯಲ್ಲಿ ಸಮನಾಗಿ ಕಾದಬಲ್ಲ ವೈರಿಯನ್ನು ದಯಪಾಲಿಸು ಎಂಬುದಾಗಿ ಪರಾಕ್ರಮಕ್ಕೆ ಸವಾಲನ್ನು ಬೇಡಿದರೆ, ಮಗಳೊಂದಿಗೆ ಸಂಬಂಧ ಬೆಳೆಸಿದ ಅನಿರುದ್ಧನನ್ನು ಯುದ್ಧದಲ್ಲಿ ಸೆರೆಹಿಡಿದಾಗ, ಮಗಳ ರೋದನವನ್ನು ಕೇಳಿ ಅವನನ್ನು ಕೊಲ್ಲದೇ ಬಿಟ್ಟು ಮಾನವೀಯತೆಯನ್ನು ಪ್ರದರ್ಶಿಸುತ್ತಾನೆ. ಹೀಗೆ ಅತ್ಯಂತ ಉದಾತ್ತತೆಯನ್ನು, ತಾತ್ವಿಕ ಮೌಲ್ಯಗಳನ್ನು ಯುದ್ಧ ಪ್ರಸಂಗಗಳಲ್ಲೂ ತರುವ ಕವಿಗೆ ಯುದ್ಧ ಸಮರದ ಭೀಕರ ಚಿತ್ರಣವಾಗುವುದಕ್ಕಿಂತ ಸೌಹಾರ್ದಯುತ ಸ್ಪರ್ಧೆಯಂತೆ ಕಂಡಿದೆ. ವಿಜಯನಗರವು ತನ್ನ ವೈಭವದ ತುತ್ತತುದಿಯಲ್ಲಿದ್ದ ಕಾಲದಲ್ಲಿ ತನ್ನ ಸಮಕಾಲೀನ ಬದುಕಿನ ವಿಲಾಸಕ್ಕೆ ಸ್ಪಂದಿಸಿ ಅದರ ಚಿತ್ರಣವನ್ನು ಕಾವ್ಯಗಳಲ್ಲಿ ನೀಡುವಾಗ ಕವಿ ಮೂರನೆಯ ವ್ಯಕ್ತಿಯಾಗಿ ಮಾತನಾಡದೇ ಅದರೊಳಗೇ ಒಂದಾಗಿ

ಯುದ್ಧ, ಭೋಗ, ಭಕ್ತಿಯ-ವರ್ಣನೆಗಳನ್ನು ಮಾಡುತ್ತಾರೆ. ಇತಿಹಾಸ ವಂಚಿತರ ಬದುಕಿಗೆ ಅರ್ಥವಂತಿಕೆಯನ್ನು ತುಂಬಿದ್ದಾರೆ.

ಪ್ರಮುಖವಾಗಿ ಮೋಹನ ತರಂಗಿಣಿ ಒಂದು ವರ್ಣಕ ಕಾವ್ಯವಾಗಿದೆ. ಕೃಷ್ಣನ ರಾಜಧಾನಿ ದ್ವಾರಕಾಪುರದ ವರ್ಣನೆ, ಬಾಣಾಸುರನ ಶೋಣಿತಪುರದ ವರ್ಣನೆಗಳು, ಪ್ರದ್ಯುಮ್ನ-ರತಿ, ಉಷಾ – ಅನಿರುದ್ಧರ ಶೃಂಗಾರ ವರ್ಣನೆಗಳು ಒಂದನ್ನೊಂದು ಮೀರಿಸುವಂತಿದೆ. ನಾಡಿನ ಸಂಪತ್ತು ಸಮೃದ್ಧಿಗಳ ವರ್ಣನೆ, ಊಟೋಪಚಾರಗಳ ವರ್ಣನೆ, ವಸಂತೋತ್ಸವದ ರಂಗಿನಾಟದ ವರ್ಣನೆ ಹೀಗೆ ಒಂದೊಂದು ವರ್ಣನೆಯೂ ಕಣ್ಣಿಗೆ ಕಟ್ಟುವಂತೆ ಪುಂಖಾನುಪುಂಖವಾಗಿ ಉಕ್ಕಿ ಹರಿದಿದೆ. ಕನಕದಾಸರು ತಮ್ಮ ಈ ಕಾವ್ಯಧಲ್ಲಿ ಉಪಮಾಲಂಕಾರವನ್ನು ಯಥೇಚ್ಛವಾಗಿ ತಂದಿದ್ದಾರೆ. ಇಲ್ಲಿಯ ಉಪಮೆಗಳು ಕಾವ್ಯ ಸೌಂದರ್ಯವನ್ನು ಹೆಚ್ಚಿಸಿವೆ.

ಅಂಬರದಲಿ ಪ್ರತಿಬಿಂಬಿಸುತಿಹ ಕುಚ
ಕುಂಭ ತತ್ಕುಂಭವೆಂಬಂತೆ
ಕುಂಭಾನ್ವಿತ ಕರಕಮಲದಿ ಸ್ತ್ರೀನಿಕು
ರುಂಭ ನೀರ್ಪಿಡಿದು ನಿಂದಿಹುದು ॥

ಹದಿನಾರು ಬಣ್ಣದ ಸೊನ್ನೆಯ ಸರಳ್ಗಳ
ಕುದಿಗಾಸಿ ನೀರೊಳಗಿಟ್ಟಂತೆ
ಉದಿಸಿತು ಘುಳು ಘುಳು ಧ್ವನಿ ತಂ
ಗೊಳದೊಳು ತನು ತಾಪದಿಂದೆ ॥

ಕಾವ್ಯದ ಸೌಂದರ್ಯವನ್ನು ಉಪಮಾಲಂಕಾರಗಳ ಮೂಲಕ ಹೆಚ್ಚಿಸಿರುವುದನ್ನು ಈ ಉದಾಹರಣೆಗಳಲ್ಲಿ ಕಾಣಬಹುದು. ಅದರಂತೆ ಕಾವ್ಯದಲ್ಲಿ ರೂಪಕಲಂಕಾರಗಳಗೂ ಕೊರತೆಯಿಲ್ಲ.

ಬಾಲೆಯ ಕೊರಲು ಹೊನ್ನೊರಲು ಸುಸ್ವರ ಕಣಿ
ಲೀಲೆಗತ್ತರಿ ಕುರುಳ್ಕೊಂಕು
ಪಾಲೆರ್ದಕುಚ ಕೊಪ್ಪರಿಗೆ ನಿಟ್ಟೆಸಱ
ಣ್ಣಾಲೆಯ ಮನೆಗಳೊಪ್ಪಿದವು॥

ಬಾಲೆಯರ ಕೊರಳೇ ಬಂಗಾರದ ಒರಳು, ಮಧುರ ಧ್ವನಿ ಕಬ್ಬಿನ ಗಣಿ, ಕೊಂಕಿದ ಕೂದಲೇ ವಿನೋದದ ಕತ್ತರಿ, ಹಾಲು ತುಂಬಿದ ಕುಚಗಳೇ ಕಡಾಯಿ, ನಿಡಿದಾದ ಎಸಳುಗಣ್ಣಿನ ಆಲೆಮನೆಗಳು ಶೋಭಿಸಿದವು.

ಕನ್ನಡ ಕಾವ್ಯಗಳ ಪ್ರಮುಖ ಶಬ್ದಾಲಂಕಾರವಾದ ದ್ವಿತೀಯ ಪ್ರಾಸ ಕನಕದಾಸರ ಎಲ್ಲಾ ರಚನೆಗಳಲ್ಲೂ ಕಾಣಬಹುದು.

ದಾನಮಂಟಪ ಸಿಂಹಾಸನದಲಿ ಬಂದು
ದಾನವಾಧೀಶ ಮಂಡಿಸಿದ
ದಾನಪಾತ್ರರ ಬರಹೇಳ್ದೆ ವಿಬುಧಪ್ರ
ಧಾನ ಸಂದೋಹವೈತಂದು
ಭುಜಗಾಭರಣ ತಚ್ಚರಣಂಗೆ ಸಾಸಿರ
ಭುಜಬಲ ವ್ರಜವ ಪಾಲಿಸಿದೆ
ಭುಜಬಲದಿಂದಲೆನ್ನೊಡನೆ ಕಾದುವನೊಬ್ಬ
ಭುಜಬಲಾಧಿಪನ ಪಾಲಿಪುದು

ಜಾನಪದ ವಿದ್ವಾಂಸರ ಪ್ರಕಾರ "ಜಾನಪದ ದೃಷ್ಟಿಯಿಂದಲೂ ಈ ಕಾವ್ಯಕ್ಕೆ ಒಂದು ಮಹತ್ವದ ಸ್ಥಾನ ಲಭ್ಯವಾಗುತ್ತದೆ." [೫] ಜನಪದ ಸಾಹಿತ್ಯದ ಅತ್ಯಂತ ಸಾರವತ್ತಾದ ಭಾಗಗಳೆಂದರೆ ಗಾದೆಗಳು. ಕಾವ್ಯಕ್ಕೆ ಶಕ್ತಿ ಕೊಡುವ ಗಾದೆಗಳನ್ನು ಕನಕದಾಸರು ಆಡುಮಾತಿನ ಸಹಜ ಸೌಂದರ್ಯದೊಂದಿಗೆ ಲೀಲಾಜಾಲವಾಗಿ ಬಳಸಿದ್ದಾರೆ. 'ಕಣ್ಗರಿಯದಿರ್ದೊಡೇನ್ ಕರುಳ್‌ಬಲ್ಲುದು'. ' ಕೊಡವಾಲು ಪುಳಿವೆರೆದಱವುದಲ್ಲದೇ ಪಾಲ್ಗಡಲು ನಾಶವನ್ನೆದುವುದೆ? ' ವಿಷಯಾತುರಗೆ ವಿವೇಕವಿಲ್ಲ' ಇತ್ಯಾದಿ. ಜಾನಪದ

---

[೫] ಡಾ.ಜೀಶಂಪ-ಕನಕ ಸಾಹಿತ್ಯ ದರ್ಶನ, ಪುಟ-೬೨

ಭಕ್ಷ್ಯಗಳಾದ ವಡೆ, ಸುಕ್ಕಿನುಂಡೆ, ರೊಟ್ಟಿಬುತ್ತಿಗಳ ಪ್ರಸ್ತಾಪವಿದೆ. ಅಂತೆಯೇ ವ್ಯವಸಾಯ ಪದ್ಧತಿ, ಕಲ್ಲಗಾಣ ಮೊದಲಾದ ಶಿಕ್ಷೆಯ ವಿಧಾನಗಳು, ವೇಷಭೂಷಣಗಳು, ಬೇಟೆ, ಜೂಜಿನ ಬಗೆಗಳು ಶಕ್ತಿ ಪೂಜೆಯ ವಿಧಾನ, ಜನಪದ ದೇವತೆಗಳು ಇವೆಲ್ಲಾ ವಿವರಣೆಗಳಿಂದ ಮೋಹನ ತರಂಗಿಣಿ ಜೀವಂತವಾಗಿ ನಾಡಿನ ಜನಜೀವನಕ್ಕೆ ಸ್ಪಂದಿಸಿದೆ. ಕನಕದಾಸರ ಮೋಹನ ತರಂಗಿಣಿ ಕಾವ್ಯವು ಒಂದು ಶ್ರೇಷ್ಠ ಮಹಾಕಾವ್ಯವಾಗಿದೆ ಮತ್ತು ಅವರೇ ಹೇಳುವಂತೆ ನಿಜಕ್ಕೂ

ಹರಿಶರಣರಚ್ಚು ಬುಧಜನರಿಗೆ ಪೆಚ್ಚು
ದುರಿತವನಕ್ಕೆ ಕಾಳ್ಕಿಚ್ಚು
ವಿರಹಿಗಳಿಗೆ ಪುಚ್ಚು ವೀರರ್ಗೆ ನುಚ್ಚು ಕೇ
ಳ್ವರಿಗಿದು ತನಿಬೆಲ್ಲದಚ್ಚು॥

ಮೋಹನ ತರಂಗಿಣಿಯ ವರ್ಣನೆಗಳು ಕೇವಲ ವರ್ಣನೆಗಾಗಿ ಬಂದಿಲ್ಲ. ಇದರಲ್ಲಿ ಕನಕದಾಸರ ಲೋಕ ನಿರೀಕ್ಷಣ ಶಕ್ತಿ ಮತ್ತು ಅದರ ಅಭಿವ್ಯಕ್ತಿ ಸ್ಪಷ್ಟವಾಗಿ ಕಂಡು ಬರುತ್ತದೆ. ಇಲ್ಲಿ ಕಲ್ಪನೆಗಳು ಕವಿ ಕಲ್ಪನೆಯ ನೆಲೆಯಲ್ಲಿ ನಿಲ್ಲದೆ, ಕವಿ ಸಮಯದಲ್ಲಿ ಮುಳುಗಿ ಹೋಗದೆ ಸಮಕಾಲೀನ ಸಮಾಜ ಚಿತ್ರಣಕ್ಕೆ ಅವಕಾಶ ಮಾಡಿಕೊಟ್ಟಿರುವುದು ವಿಶೇಷವಾಗಿದೆ.

ಆ. ಮೋಹನ ತರಂಗಿಣಿಯಲ್ಲಿ ಮೂಡಿಬಂದ ವಿಜಯನಗರ ಸಾಮ್ರಾಜ್ಯ

ರಾಜಕೀಯ ಮತ್ತು ಸಾಮಾಜಿಕ ಅಂಶಗಳು : –

ಕನ್ನಡ ನಾಡಿನ ದಾಸಪರಂಪರೆಯಲ್ಲಿಯೇ ವಿಶಿಷ್ಟ ಸ್ಥಾನ ಪಡೆದ ಕವಿ ಮನೋಧರ್ಮದ ದಾಸರೆಂದರೆ ಕನಕದಾಸರು. ವಿಜಯನಗರದ ಅರಸರ ಪಾಳೆಯಗಾರರಾಗಿದ್ದು ಅನಂತರ ವಿರಕ್ತವಾದ ಮಹಿಮಾಶ್ರೇಷ್ಠರು. ಕಾಳಗವೊಂದರಲ್ಲಿ ಸೋಲುಂಟಾದ್ದರಿಂದ, ಮನಪರಿವರ್ತನೆಯಾಗಿ ವ್ಯಾಸತೀರ್ಥರಿಂದ ಹರಿದಾಸ ದೀಕ್ಷೆಯನ್ನು ಪಡೆದರು. ಕವಿ, ಕಲಿ, ಭಕ್ತ ಹೀಗೆ ಹತ್ತು ಹಲವು ಹಿನ್ನೆಲೆಗಳನ್ನು ಪಡೆದುಕೊಂಡು ಅಭಿವ್ಯಕ್ತಿ ಸಂದರ್ಭದಲ್ಲಿ ಅವುಗಳೆಲ್ಲದರ ಸಾರವನ್ನೆರೆದು ಶ್ರೇಷ್ಠ ಕಾವ್ಯವಾಗಿಸಿದ ಕವಿ ಶ್ರೇಷ್ಠರು. ವಿಜಯನಗರದ ಸೈನ್ಯ ಸೇರಿ ಆ ಕಾಲದ ಮೌಲ್ಯಕ್ಕೆ ಅನಿವಾರ್ಯವಾಗಿ ಸ್ಪಂದಿಸಿಕೊಂಡವರು. ತಮ್ಮ ಕಾವ್ಯಗಳಲ್ಲಿ ಅಂದಿನ ಕಾಲದ ವಿಜಯನಗರದ ರಾಜಕೀಯ ಅಂಶಗಳನ್ನು ಮನೋಜ್ಞವಾಗಿ ವರ್ಣಿಸಿ ಓದುಗರ ಗಮನವನ್ನು ಇತಿಹಾಸಕ್ಕೆ ಕೊಂಡೊಯ್ಯುತ್ತಾರೆ. ವಿಜಯನಗರ ಕಾಲದ ಜನಜೀವನದ ಎಳೆಗಳನ್ನು ಮರುಜೋಡಿಸಲು ಹೊರಡುವ ಸಂಶೋಧಕರಿಗೆ ಕನಕದಾಸರ ಕಾವ್ಯಗಳು ಕೈದೀವಿಗೆಯಂತಿದೆ. ಹೀಗೆ ತಮ್ಮ ಕೃತಿ ರಚನೆಯ ಸಂದರ್ಭದಲ್ಲಿ ಭಿನ್ನ ಹಾದಿ ತುಳಿಯುವ ಕನಕದಾಸರು ತನ್ನ ಸಮಕಾಲೀನ ಬದುಕಿನೊಂದಿಗೆ ನಡೆಸುವ ಸಂವಾದ ಹಾಗೂ ವರ್ತಮಾನದ ಬದುಕಿನೊಂದಿಗೆ ಏರ್ಪಡಿಸಿಕೊಳ್ಳುವ ಸಂಬಂಧ ಅಧ್ಯಯನ ದೃಷ್ಟಿಯಿಂದ ಮುಖ್ಯವಾಗುತ್ತದೆ. ಕನಕದಾಸರು ನೀಡುವ ರಾಜಕೀಯ ಅಂಶಗಳು, ಆ ಕಾಲದ ವಿದೇಶಿ ಬರವಣಿಗೆಗಳಿಗೆ ಪೂರಕವಾಗಿ ನಿಲ್ಲುತ್ತವೆ. ಕನಕದಾಸರ ರಾಮಧಾನ್ಯ ಚರಿತೆ (ರಾಗಿ ರಾಮಾಯಾಣ) ಯ ಮೂಲಕ ಆ ಕಾಲದ ರಾಜಕೀಯ, ಧಾರ್ಮಿಕ ಹಾಗೂ ಆರ್ಥಿಕ ಪರಿಸ್ಥಿಯ ಅವಲೋಕನವನ್ನು ಮಾಡಬಹುದು. ಕನಕದಾಸರ ಕಾಲದ ಅರಸೊತ್ತಿಗೆಯ ಭೋಗದ ಅನುಭವವೂ ಅವರ ಕೃತಿಗಳಲ್ಲಿ ಎದ್ದು ತೋರುತ್ತದೆ.

ಪ್ರಾಚೀನ ಕರ್ನಾಟಕದ ಚರಿತ್ರೆಯಲ್ಲಿ ಯುದ್ಧ ಬದುಕಿನ ಅನಿವಾರ್ಯ ಅಂಗಗಳಲ್ಲಿ ಒಂದು. ಅರಸರು ರಾಜ್ಯದ ಗಡಿಗಳನ್ನು ಭದ್ರ ಪಡಿಸಲು, ವಿಸ್ತರಿಸಲು ನಿರಂತರವಾಗಿ ಯುದ್ಧಗಳಲ್ಲಿ ತೊಡಗುತ್ತಿದ್ದರು. ರಾಜರು ಪ್ರಜೆಗಳ ಅನೂಕೂಲಕ್ಕೆಂದು ವಿವಿಧ ಸೌಲಭ್ಯಗಳನ್ನು ಕಲ್ಪಿಸಿದ್ದರು. ರಾಜ್ಯ ಸುಭಿಕ್ಷೆಯಿಂದ ಇತ್ತು ಎನ್ನುವುದಕ್ಕೆ ಪೂರಕವಾಗಿ ಹಲವಾರು ಮಾಹಿತಿಗಳು ಲಭ್ಯವಾಗುತ್ತವೆ.

ಕನಕದಾಸರು ದಂಡನಾಯಕನ ಮಗನಾಗಿದ್ದರಿಂದ ಅರಸರ ನಿಕಟವರ್ತಿಗಳಾಗಿದ್ದಾಗಿ ಕಂಡು ಬರುತ್ತದೆ. ಅವರ ಕಾವ್ಯಗಳಲ್ಲಿ ನೀಡುವ ಎಲ್ಲ ರಾಜಕೀಯ ಅಂಶಗಳನ್ನು ಗಮನಿಸಿದರೆ ರಾಜ್ಯ ಒಂದು ಉಚ್ಛ್ರಾಯ ಸಾಮ್ರಾಜ್ಯವಾಗಿತ್ತು ಎನ್ನಬಹುದು. ರಾಜಕೀಯವಾದ ಯಾವುದೇ ಒತ್ತಡ, ಬೇಸರ ಕನಕದಾಸರ ಮೇಲೆ ಆದಂತೆ ನಮಗೆ ಕಂಡುಬರುವುದಿಲ್ಲ. ಬದಲಾಗಿ ರಾಜಕೀಯವಾಗಿ ಸುಭದ್ರವಾಗಿತ್ತು ಎಂಬ ಅಂಶವನ್ನೇ ಮನದಟ್ಟು ಮಾಡಿಸುತ್ತದೆ.

ಆದರೆ ಕನಕದಾಸರಿಗೆ ಸಾಮಾಜಿಕವಾಗಿ ಅಸಮಾಧಾನವಿರುವುದು ಅವರ ಕೃತಿಗಳಲ್ಲಿ ಧ್ವನಿಸುತ್ತದೆ. ಕೃತಿಗಳಲ್ಲಿ ಉಲ್ಲೇಖವಾಗಿರುವ ಪ್ರಕಾರ ಕನಕದಾಸರು ಕುರುಬ ಜನಾಂಗಕ್ಕೆ ಸೇರಿದವರು. ಸಾಮಾಜಿಕ ಪರಿಸ್ಥಿತಿಯಲ್ಲಿ ಜಾತಿಯ ನೆಲೆಯು ಪ್ರಮುಖ ಅಂಶವಾಗಿರುವುದು ನಮ್ಮ ಇತಿಹಾಸದ ಅಂಶಗಳಂದ ಕಂಡುಬರುತ್ತದೆ. ಕನಕದಾಸರ ಕಾಲದಲ್ಲಿ ಬೇಡರು ಮತ್ತು ಕುರುಬರು ಒಂದು ಪ್ರಮುಖ ವರ್ಗವಾಗಿ ಗುರುತಿಸಲ್ಪಡುತ್ತಾರೆ. ಇತರ ಚಾಲ್ತಿಯಲ್ಲಿದ್ದ ಪ್ರಬಲ ವರ್ಗಗಳೆಂದರೆ ವ್ಯಾಪಾರಿ ವರ್ಗ, ಪಂಚಾಚಾರಿಗಳು ಹಾಗೂ ನೇಕಾರ ವರ್ಗ ಮತ್ತು ರೈತಾಪಿ ವರ್ಗಕ್ಕೆ ಸೇರಿದ ಒಕ್ಕಲಿಗರು ಹಾಗೂ ಲಿಂಗಾಯಿತರು. ಆದರೆ ಈ ಎಲ್ಲಾ ವರ್ಗಗಳ ನಡುವೆ ಅಂತಹ ಸಾಮರಸ್ಯವೇನೂ ಕಂಡು ಬರುವುದಿಲ್ಲ. ಒಟ್ಟಾರೆಯಾಗಿ ಶೂದ್ರರು ಎಂದು ಗುರುತಿಸಲ್ಪಡುವ ಈ ವರ್ಗಗಳ ನಡುವೆ ಸರಕು ಉತ್ಪಾದನೆ ಹಾಗೂ ವ್ಯಾಪಾರದ ವಿಷಯವಾಗಿ ಸಂಘರ್ಷಗಳು ನಡೆಯುತ್ತಲೇ ಇದ್ದವು. ಹಣಬಲ ಹಾಗೂ ಶಕ್ತಿಯ ಆಧಾರದಲ್ಲಿ ಶೂದ್ರ ವರ್ಗವು ಸಮಾಜದಲ್ಲಿ ಪ್ರಮುಖ ಸ್ಥಾನವನ್ನು ಗಳಿಸಿಕೊಂಡಿತು. ಯಾವಾಗ ಶೂದ್ರವರ್ಗವು ಆಳುವ ವರ್ಗಕ್ಕೆ ಪ್ರವೇಶ ಪಡೆಯಿತೋ ಆಗ ಅದು ಬ್ರಾಹ್ಮಣರ ಏಕಸ್ವಾಮ್ಯತೆಯನ್ನು ಪ್ರಶ್ನಿಸಿತು ಅದೇ ಸಮಯದಲ್ಲಿ ಆಳುವ ವರ್ಗದೊಳಗೆ ಹಾಗೂ ಜನತೆಯ ನಡುವೆ ಪರಸ್ಪರ ವಿರೋಧ ವ್ಯಕ್ತವಾಯಿತು. ಈ ಎಲ್ಲಾ ಸನ್ನಿವೇಶ ಹಾಗೂ ಸಂಘರ್ಷದ ಫಲವಾಗಿಯೇ ಹರಿದಾಸ ಚಳುವಳಿ ಪ್ರಾರಂಭವಾಯಿತು. ಈ ಹಿನ್ನಲೆಯಲ್ಲಿ ಬದುಕಿ ಬಾಳಿದವರು ಕನಕದಾಸರು. ಕೀರ್ತನಕಾರರಾಗಿ ಸಮಾಜದ ಓರೆಕೋರೆಗಳನ್ನು ತಿದ್ದಿ ತೀಡುವಲ್ಲಿ ದಾಸರು ನೀಡಿದ ಕೊಡುಗೆ ಗಮನಾರ್ಹವಾದದ್ದು. ಕನಕದಾಸರು ಕರ್ನಾಟಕದ ಮಟ್ಟಿಗೆ ಕೆಳವರ್ಗದ ಮೊದಲ ಕೀರ್ತನಕಾರರು. ಅದರಲ್ಲೂ ಕವಿ ಹೃದಯದ ಕೀರ್ತನಕಾರರು. ವರ್ಣ, ವರ್ಗ ಸಂಬಂಧಿ ಅಸಮಾನತೆಯ ಧೋರಣೆ ಅವರನ್ನು ಆಗಾಗ ಕಾಡಿದ ವಸ್ತು. ಬಂಡಾಯಕ್ಕಿಂತ ಸಾತ್ವಿಕ ಭಕ್ತಿಯನ್ನು ಮೆಚ್ಚಿಕೊಂಡವರು. ಕಲಿತನಕ್ಕಿಂತ ಕವಿತನವನ್ನು ಒಪ್ಪಿಕೊಂಡವರು. ದೊರೆತನ ಬಿಟ್ಟು ದಾಸತ್ವವನ್ನು ಸ್ವೀಕರಿಸಿದವರು. ಕನಕದಾಸರ ಕಾಲಕ್ಕಾಗಲೇ ವರ್ಣಾಶ್ರಮ ಧರ್ಮಗಳು

ತಮ್ಮ ಪ್ರಾಶಸ್ತ್ಯವನ್ನು ಕಳೆದುಕೊಂಡಿದ್ದವು. ಜಾತಿ ಪದ್ಧತಿಯ ಬಲೆ ಬಲವಾಗತೊಡಗಿತ್ತು. ಕುಲ – ಜಾತಿಗಳ ಹಿನ್ನಲೆಯಲ್ಲೇ ಸಮಾಜದಲ್ಲಿ ವ್ಯಕ್ತಿಗೆ ಸ್ಥಾನಮಾನಗಳು ದೊರಕುತ್ತಿದ್ದ ಕಾಲವದು. ಕೆಳವರ್ಗದಲ್ಲಿ ಹುಟ್ಟಿದ್ದ ಕನಕದಾಸರು ಸಹಜವಾಗಿಯೇ ಕೀಟಲೆ ಅಪಮಾನಗಳಿಗೆ ಒಳಗಾದರು. ಅಂತಹ ಸಂದರ್ಭದಲ್ಲಿ ಅವರ ಮಾತು, ಪ್ರತಿಕ್ರಿಯೆ ಮೊನಚಾಗಿ ಹರಿದು ಬಂದಿದೆ.

ಕುಲಕುಲವೆಂದು ಹೊಡೆದಾಡದಿರಿ ನಿಮ್ಮ
ಕುಲದ ನೆಲೆಯನೇನಾದರೂ ಬಲ್ಲಿರಾ ?

ಎಂದು ಪ್ರಶ್ನಿಸುತ್ತಾರೆ. ಆತ್ಮ ಯಾವ ಕುಲ ? ಜೀವ ಯಾವ ಕುಲ ತಿಳಿದಿದ್ದರೆ ಹೇಳಿ ಎನ್ನುತ್ತಾರೆ. ತಮ್ಮ ಕ್ರಾಂತಿಕಾರಕ ಮನೋಭಾವದಿಂದ ಜಾತಿ, ಮತ ಪಂಥಗಳನ್ನು ಮೀರಿ ನಿಂತಿರುವ ಪರಮ ಭಕ್ತರು. ಸಂತರು ಕನಕದಾಸರು. ಸ್ವತಃ ಮಾನವ ಕೃತ ಜಾತಿ, ಮತ ಕುಲಗಳಲ್ಲಿ ನಂಬಿಕೆಯೇ ಇಲ್ಲದ. ಮಾನವ ಜಾತಿ. ಮನುಜ ಮತ. ಭಕ್ತಕುಲಗಳಲ್ಲಿ ಮಾತ್ರ ವಿಶ್ವಾಸವಿರುವ ಕನಕದಾಸರು ಯಾವ ಜಾತಿಯಲ್ಲೇ ಹುಟ್ಟಿರಲಿ ಜಾತಿಮತ ಕುಲಗಳ ಇತಿಮಿತಿಗಳನ್ನು ಮೀರಿ ಬೆಳೆದಿರುವ ಪರಮ ಭಕ್ತರು. ಎಲ್ಲಕ್ಕಿಂತ ಹೆಚ್ಚಾಗಿ ಇಡೀ ಮಾನವ ಕುಲದ ಏಳಿಗೆಯನ್ನು ಬಯಸುವ ಉದಾರಿಗಳು. ಅಪಾರ ಸಾಮಾಜಿಕ ಕಳಕಳಿಯುಳ್ಳ ಹರಿದಾಸರು ತಮ್ಮ ಅಹಂಕಾರವನ್ನು ಅದುಮಿ. ಅಂತರಂಗ ಶುದ್ಧಿಯನ್ನು ಬಯಸಿ ಶ್ರೀಹರಿಯಲ್ಲಿ ಸರ್ವಸಮರ್ಪಣ ಭಾವವನ್ನು ವ್ಯಕ್ತ ಪಡಿಸಿರುವರು. ತಮ್ಮ ಭಾವಶುದ್ಧಿ. ಕ್ರಿಯಾಶುದ್ಧಿಗಳಿಂದ ಸಮಾಜದ ಮೇಲುಸ್ತರಕ್ಕೇರಿದವರು. ಧರ್ಮವೇ ಜೀವನವಾಗಿ ಆ ಮೂಲಕ ನೈತಿಕ ಸ್ಥೈರ್ಯವನ್ನು. ಧೈರ್ಯವನ್ನು ಗಳಿಸಿಕೊಂಡವರು. ವೈಯಕ್ತಿಕ ನೆಲೆಯಲ್ಲಿ ಭಕ್ತಿಸಾಧನೆ ಮಾಡಿ ಬಳಿಕ ಆ ಮೂಲಕ ಸಾರ್ವತ್ರಿಕ ನೆಲೆಯಲ್ಲಿ ಸಮಾಜದ ಉತ್ತಮಿಕೆಗೆ ಶ್ರಮಿಸಿದರು. ಈ ಬದುಕು ಶಾಶ್ವತವೆಂಬ ಭ್ರಮೆಯಿಂದ ಸ್ವಾರ್ಥ ದುರಾಸೆ ಸಣ್ಣತನಗಳಿಗೆ ಅಡಿಯಾಳುಗಳಾಗಿ ಇತರರನ್ನೂ ನೋಯಿಸುತ್ತ ತಾವು ನರಳುತ್ತ ಬದುಕುವ ಜನರನ್ನು ಕಂಡು ನೊಂದಿದ್ದಾರೆ. ಈ ಜೀವನ ಕ್ಷಣಿಕ. ಅದರಲ್ಲಿ ಅಂಟಿಯೂ ಅಂಟದಂತೆ 'ಗೇರುಹಣ್ಣಿನ ಬೀಜ'ದಂತೆ ಬಾಳಬೇಕು. ಅಭಾವ ವೈರಾಗ್ಯವನ್ನು ಬಿಟ್ಟು ಸ್ವಭಾವ ವೈರಾಗ್ಯವನ್ನು ಗಳಿಸಿ ಆ ಮೂಲಕ ಶಾಂತಿ ಸಮಾಧಾನಗಳನ್ನು ಪಡೆಯಬೇಕೆಂಬುದು ಕನಕದಾಸರ ಆಶಯವಾಗಿತ್ತು. ಅವರ ಕೀರ್ತನೆಗಳು ಸ್ವವಿಮರ್ಶೆ. ಸಮಾಜ ವಿಮರ್ಶೆಗಳೆರಡನ್ನೂ ಒಳಗೊಂಡಿವೆ. ರೋಗಗ್ರಸ್ತ ಸಮಾಜಕ್ಕೆ ತಮ್ಮ ಕೀರ್ತನೆಗಳ ಮೂಲಕ ಮದ್ದುಕೊಟ್ಟಿದ್ದಾರೆ. ನಶ್ವರವಾದ ದೇಹದ ಮೋಹವನ್ನು ಬಿಟ್ಟು ಶಾಶ್ವತ ಸುಖ ತರುವ

ಆದಿಕೇಶವನ ಚರಣಕಮಲಗಳನ್ನು ಭಜಿಸಿ ಸುಖಿಯಾಗಿರಿಯೆಂದಿದ್ದಾರೆ. ಹುಟ್ಟುವಾಗ ಏನೂ ತರಲಿಲ್ಲ, ಸಾಯುವಾಗ ಏನೂ ಒಯ್ಯುವುದಿಲ್ಲ ಎಂಬ ಮನುಷ್ಯ ಜೀವನದ ನೈಜ ಸತ್ಯವನ್ನು ತಿಳಿಸಿಕೊಟ್ಟಿದ್ದಾರೆ.

ಏನು ಇಲ್ಲದ ಎರಡು ದಿನದ ಸಂಸಾರ
ಜ್ಞಾನದಲಿ ದಾನಧರ್ಮವ ಮಾಡಿರಯ್ಯ

ಎಂದು ಹಸಿದು ಬಂದವರಿಗೆ ಅನ್ನ ನೀಡುವುದು, ಹಸುಮಕ್ಕಳಿಗೆ ಹಾಲು ಬೆಣ್ಣೆಗಳನ್ನಿತ್ತು ಉಪಚರಿಸುವುದು, ಹಸನಾದ ಭೂಮಿಯನ್ನು ಅಗತ್ಯವಿರುವವರಿಗೆ ದಾನ ಮಾಡುವುದು, ಹುಸಿಯನ್ನಾಡದಿರುವುದು ಇವೇ ಮೊದಲಾದ ಧರ್ಮ ಮಾರ್ಗಗಳನ್ನು ತೋರಿಸಿಕೊಟ್ಟಿದ್ದಾರೆ. ಸಂಸಾರದ ಮಾಯೆಗಳಾದ ಹೆಣ್ಣು, ಹೊನ್ನು, ಮಣ್ಣುಗಳ ವ್ಯಾಮೋಹದ ಕಿರುಕುಳದ ಕೂಪಕ್ಕೆ ಬೀಳದಿರಿ. ಯಮಧರ್ಮರಾಯನಿಂದ ಸಾವಿನ ಕರೆ ಬಂದಾಗ ಹೆಂಡತಿ ಧನ ಧಾನ್ಯಗಳಾವುವೂ ಜೊತೆಗೆ ಬರುವುದಿಲ್ಲವೆಂಬುದನ್ನು ಮತ್ತೆ ಮತ್ತೆ ಒತ್ತಿ ಹೇಳುವ ಮೂಲಕ ಜನರಿಗೆ ಮನದಟ್ಟು ಮಾಡಿ ಕೊಡಲು ಶ್ರಮಿಸಿದ್ದಾರೆ. ' ಹೆಣ್ಣು ಹೊನ್ನು ಮಣ್ಣು – ನಿನ್ನನಗಲಿಸಿ ಹೋಗುವರೆಚ್ಚರಿಕೆ । ಮುನ್ನ ಮಾಡಿದ ಪುಣ್ಯ ಬೆನ್ನಟ್ಟಿ ಬರುವುದು ಮುಂದೆ ನೋಡೆಚ್ಚರಿಕೆ' ಎಂದು ಎಚ್ಚರಿಸುತ್ತಾ 'ನೆಲೆಯಾದಿಕೇಶವನ ಆಳಾಗು' ಎಂದು ಉಪದೇಶಿಸಿದ್ದಾರೆ. ಹೀಗೆ ಸಮಾಜದ ಹಿತಕ್ಕೆ ಅಡ್ಡಿ ಉಂಟಾಗುವ ಮನುಷ್ಯನ ಕೆಟ್ಟ ಗುಣಗಳನ್ನು ತೋರಿಸಿಕೊಟ್ಟು, ಅದನ್ನು ಸರಿ ಪಡಿಸಿಕೊಂಡು ನಡೆವ ಮತ್ತು ಮುಕ್ತಿ ಪಡೆಯುವ ಮಾರ್ಗವನ್ನು ತಿಳಿಸಿದ್ದಾರೆ.

ನಗರ ವರ್ಣನೆ : – ಕನಕದಾಸರು ದ್ವಾರಾವತಿ ಪಟ್ಟಣದ ಸಂಪೂರ್ಣ ಶೃಂಗಾರವನ್ನು ಹೇಳಲು ಬ್ರಹ್ಮನಿಗೂ ಸಾಧ್ಯವಿಲ್ಲ. ನಾನೆಷ್ಟರವನು. ಬಲ್ಲದ್ದನ್ನು ಹೇಳುವೆ ಎಂದಿದ್ದಾರೆ.

ದ್ವಾರಾವತಿ ಪಟ್ಟಣದ ಸಂಪೂರ್ಣ ಶೃಂ
ಗಾರವ ಪೇಳ್ವೆನೆಂದೆನಲು
ನೀರಜಭವಗರಿ ದಾನೆನು ಗಹನ ವಿ
ಸ್ತಾರವ ಮಾಳ್ಪೆ ಬಲ್ಲನಿತ॥

ನಗರ ಪಟ್ಟಣ ಖೇಡ ಖರ್ವಡ ಪುರ ಗ್ರಾ
ಮಗಳೆಂಬ ನಾನಾ ಪೆಸರಾಂತ
ಸೊಗಯಿಸು ತಿಪ್ಪುವಾ ದೇಶದಿ ಬೀಳುವ
ಳ್ಳಗಳಲ್ಲ ಕೇಳಾಯತಾಕ್ಷಿ॥

ನಗರದ ಕೀರ್ತಿ ಸಕಲ ದಿಗಂತದಲ್ಲೂ ಕೀರ್ತಿ ಮೆರೆದಿತ್ತು. ನಗರ ಪಟ್ಟಣ ಖೇಡ ಖರ್ವಡಪುರ ಗ್ರಾಮಗಳು ಸೊಗಯಿಸುತ್ತಿದ್ದವು. ಆ ದೇಶದಲ್ಲಿ ಬೀಳುವಳ್ಳಗಳರಲಿಲ್ಲ. ಕೆರೆ ತೊರೆ ಅಗ್ರಹಾರಗಳಿದ್ದವು. ಅಲ್ಲಲ್ಲಿ ಅರವಟ್ಟಿಗೆಗಳಿದ್ದವು. ದಾರಿಯ ಪಕ್ಕದ ಸಾಲುಮರಗಳ ಕೆಳಗೆ ಬೆಲ್ಲದ ಪಾನಕವನ್ನು ಕೊಡುತ್ತಿದ್ದರು. ಕೆನೆಮೊಸರನ್ನು ಕರೆಕರೆದು ಎಲ್ಲರಿಗೂ ಉಣಬಡಿಸುತ್ತಿದ್ದರು. ಅಲ್ಲಲ್ಲಿ ಶ್ರೀವೈಷ್ಣವರು ಸ್ವಯಂಪಾಕ ಮಾಡಿಕೊಳ್ಳುತ್ತಿದ್ದರು. ಕೆರೆಗಳಿಂದ. ಕಾಲುವೆಗಳಿಂದ ಭಾಗೀರಥಿ ಸಾವಿರ ಮುಖಗಳಾಗಿ ಹರಿದಿರುವಳೊ ಎನ್ನುವಂತೆ ಕಾಲುವೆಗಳಿದ್ದವು. ಹಲಸು. ನೇರಿಲು. ಮಾವು. ಬೇವು. ಆಲ. ಅರಳಿ. ಬಿಲ್ವ. ನೆಲ್ಲಿಯ ಮರಗಳ ಸಾಲು ಇತ್ತು. ದೇವಾಲಯಗಳಲ್ಲಿ ವೇದವಿದ್ವಾಂಸರ ಜಪಶಾಲೆ ಇತ್ತು. ಹೇಮನಿರ್ಮಿತ ಸಾಲು ಸೌಧಗಳು. ಸೂರ್ಯವೀಧಿ ಮತ್ತು ಚಂದ್ರವೀಧಿಗಳೆಂಬ ಉಭಯ ಪಾರ್ಶ್ವಗಳಲ್ಲಿತ್ತು.

ರಮಣೀಯವಾದ ಕಳಸದಂಗಡಿಗಳಿದ್ದವು. ಬೆಳ್ಳೆಲೆಗಳ ಅಂಗಡಿ. ಸುಗಂಧದ್ರವ್ಯಗಳನ್ನು ಅರೆದು ಮಾರುವ ಅಂಗಡಿ. ಸುರಂಗಿ. ಸೇವಂತಿಗೆ. ಕುಂದ. ಮಂದಾರ. ಪಾದರಿ. ಕಂಚಿ. ಕಣಗಿಲೆ. ದವನ. ಕೆಂಜಾಜಿ ಹೀಗೆ ನಾನಾ ತರಹದ ಹೂವುಗಳನ್ನು ಮಾರುವ ಅಂಗಡಿಗಳಿದ್ದವು.

ಕಸ್ತೂರಿ. ಕರ್ಪೂರ. ಜವಾಜಿ ಪುಣುಗು ಸುಗಂಧ ತೈಲಗಳಿಂದ ಕೂಡಿದ ಅಂಗಡಿಗಳಿದ್ದವು. ಉತ್ತುತ್ತೆ. ಖರ್ಜೂರ. ದ್ರಾಕ್ಷಿ. ಸಕ್ಕರೆ. ಬೆಲ್ಲ ಮುಂತಾದವುಗಳನ್ನು ಮಾರುವ ಅಂಗಡಿಗಳಿದ್ದವು. ಚಿಪ್ಪಿಗರು ಆಯುಧದಂಗಡಿಗಳಿದ್ದವು.

ಬೀದಿಯ ಎರಡು ಕಡೆಯೂ ಕಂಚಗಾರ ಕೈದುಗಾರ ಹೊಮ್ಮಂಚಗಾರ ಶಿಲ್ಪಿಗ ಸಂಚುಗಾರ ಮತ್ತು ಪಂಚಾಳರಿದ್ದರು. ಬಳೆಗಾರರಿದ್ದರು. ದೇವಾಂಗ ವಸ್ತ್ರದ ಸಾಲಿತ್ತು. ಸೊನ್ನಾರರಂಗಡಿಗಳು ರತ್ನ ಪರೀಕ್ಷಕರಿದ್ದರು. ಹಣ ಹೊನ್ನಕುಪ್ಪೆಯ ಮುಂದಿಟ್ಟುಕೊಂಡ ಶೆಟ್ಟಿಗಳಿದ್ದರು. ಹಡಗಿನ ವ್ಯಾಪಾರಗಳಿದ್ದರು. ಕಬ್ಬಿನ ಗದ್ದೆಗಳಿಗೆ ಎಡೆಯಾಡುವ ವ್ಯವಹಾರಿ

ಜನರಿದ್ದರು. ಸಂಗೀತಗಾರರು ನಟ್ಟುವರು ಗಟ್ಟಿವಳರ ಮನೆಗಳಿದ್ದವು. ಕ್ಷತ್ರಿಯರ, ಬ್ರಾಹ್ಮಣರ ಮನೆಗಳು ನಗರದ ಅಲ್ಲಲ್ಲಿ ಕಂಡುಬರುತ್ತಿದ್ದವು.

ಬೀದಿಗಳಲ್ಲಿ ವಾರನಾರಿಯರು ವೇಶ್ಯಾಕಾಂತರು ಸುಳಿದಾಡುತ್ತಿದ್ದರು. ಅನಿರುದ್ಧನ ನಗರ ಶೋಧನೆಯ ಸಂಧಿ ವಿಜಯನಗರದ ರಾತ್ರಿಯ ಜೀವನವನ್ನು ಚಿತ್ರಿಸುತ್ತದೆ. ವೇಶ್ಯಾವಾಟಿಕೆ, ಪಾಹರೆಯಚರ, ತಳವಾರರ ಚಟುವಟಿಕೆಗಳು ಅಲ್ಲಿ ಎಡೆಪಡೆದಿದೆ. ವಿಜಯನಗರದ ಪುರ ವರ್ಣನೆಯಂತೆ ಜಲಕೇಳಿ, ವನಕೇಳಿ, ಬೇಟೆ, ಸೂಳೆಗೇರಿಯ ವರ್ಣನೆಗಳು ಎಲ್ಲೂ ಅನುಚಿತವೆನಿಸದೆ ಸಹಜವಾಗಿ ಮೂಡಿ ಬಂದಿದೆ.

ಬೆಟಗೇರಿ ಕೃಷ್ಣಶರ್ಮರು ಕನಕದಾಸರು ಕಂಡ ವಿಜಯನಗರ ಎನ್ನುವ ಲೇಖನದಲ್ಲಿ ಉಲ್ಲೇಖಿಸಿರುವಂತೆ ಶ್ರೀ ಕೃಷ್ಣದೇವರಾಯನ ಸಂಪತ್ ಪ್ರಪೂರ್ಣವಾದ ಆಳ್ವಿಕೆಯನ್ನು ದಾಸರು ಸಂಪೂರ್ಣವಾಗಿ ಕಂಡಿದ್ದಾರೆ. ಅಚ್ಯುತರಾಯನ ಸುತ್ತ ಜ್ವಾಲಾಮುಖಿಯಂತಿದ್ದ ಸಂಕ್ರಮಣ ಕಾಲದ ಆಡಳಿತವನ್ನು ನೋಡಿದ್ದಾರೆ. ವಿಜಯನಗರದ ಸಾಮ್ರಾಜ್ಯ ಸಂಸ್ಕೃತಿಯನ್ನು ಸೂರರ ಸಂಪ್ರದಾಯವನ್ನು ಕನಕದಾಸರು ಕಂಡಿದ್ದಾರೆ.

ಅಂತಃಪುರ ಶಿಖಾಮಣಿಯೆನ್ನಲು ಒಪ್ಪುವ ದಂತದ ಚಾವಡಿಯೊಳಗೆ ಸಿಂಹಾಸನದಲ್ಲಿ ಶ್ರೀಕೃಷ್ಣನು ರಾರಾಜಿಸುತ್ತಿದ್ದನು. ಸಮುದ್ರದಲ್ಲಿ ಹುಟ್ಟಿದ ಹೊಂದಾವರೆಯಂತಿದ್ದ ಪುರಮಧ್ಯದಲ್ಲಿ ಕೃಷ್ಣದೇವರಾಯನ ಅರಮನೆ ಕನ್ನಿಕೆಯಂತೆ ಜನರಿಗೆ ಮೋಹನವನ್ನುಂಟು ಮಾಡಿ ರಂಜಿಸುತ್ತಿತ್ತು. ಪರಮೈಶ್ವರ್ಯದಿಂದ ಶ್ರೀಕೃಷ್ಣನರಮನೆ ಕಣ್ಣಿಗೆ ಶೋಭಿಸುತ್ತಿತ್ತು. ಮೋಹನ ತರಂಗಿಣಿಯಲ್ಲಿ ಕನಕದಾಸರು ನೀಡಿದ ಅಂದಿನ ವಿಜಯನಗರದ ವೈಭವ ಜನಸಾಮಾನ್ಯರ ಜೀವನ, ಅವರ ಉಡುಗೆ ತೊಡಿಗೆ, ಹಬ್ಬ ಹರಿದಿನ ಇತ್ಯಾದಿ ವಿವರಗಳು ವಿಜಯನಗರವನ್ನು ಸಂದರ್ಶಿಸಿದ ಅಂದಿನ ಪ್ರವಾಸಿಗಳು ನೀಡಿದ ದಾಖಲೆಗೆ ಪೂರಕವಾಗಿವೆ.

ಕ್ರಿ.ಶ ೧೪೨೦ – ೨೧ ರಲ್ಲಿ ಬಂದ ಪಾವೊಲೋ ನಿಕೊಲೊ ಕೌಂಟಿ ಎಂಬ ಪ್ರವಾಸಿ ಅಂದಿನ ವಿಜಯನಗರದಲ್ಲಿ ನಡೆಯುತ್ತಿದ್ದ ಹೋಳಿ ಹುಣ್ಣಿಮೆ – ವಸಂತೋತ್ಸವವನ್ನು ಕುರಿತು ಬರೆದಿದ್ದಾನೆ. ಈ ದಿವಸಗಳಲ್ಲಿ ಇಲ್ಲಿಯ ಜನರು ಬೀದಿ ಬೀದಿಯಲ್ಲಿ ಹೋಗಿಬರುವವರ ಮೇಲೆಲ್ಲಾ ಸ್ವತಃ ರಾಜರಾಣಿಯರ ಮೇಲೆ ಕೂಡ ಕೆಂಪು ಕೇಸರಿ ಬಣ್ಣಗಳನ್ನು ಜೀಕುಗಳಿಂದ ಎರಚುವರು ಎಂದಿದ್ದಾನೆ. ಇದನ್ನೇ ಕನಕದಾಸರು,

ಶಾಲೆಗಳಂದೆ ಕುಚ್ಚುಗಂದೆ ಕಮ್ಮಲರ್
ಮಾಲೆ ಝುಲ್ಲರಿಯಲ್ಲಿಯಿಂದ
ಬಾಲೆಯರುಗಳ ಕಣ್ಮನಕೆ ರೌಟಣ ದಂ
ಯ್ಯಾಲೆ ನಾಲ್ದೆಸೆಯೊಳೊಪ್ಪಿದವು॥

ರತಿ ಮನ್ಮಥರ ವಿವಾಹ ಸಂದರ್ಭಗಳಲ್ಲಿ ನಡೆಯುವ ವಸಂತೋತ್ಸವವನ್ನು ಹೀಗೆ ವರ್ಣಿಸಿದ್ದಾರೆ.

ವರ್ಣಾಶ್ರಮ ಪದ್ಧತಿ ಜೀವಂತವಾಗಿದ್ದ ಕಾಲಘಟ್ಟದಲ್ಲಿ ಕನಕದಾಸರು ಬದುಕಿದ್ದರು. ತಮ್ಮ ಕಾಲದಲ್ಲಿ ಅವರು ವಿವಿಧ ಜನಸಮುದಾಯಗಳು ವಾಸ ಮಾಡುವ ವಿಧಾನವನ್ನು ಹತ್ತಿರದಿಂದ ನೋಡಿರುವವರು. ಮೋಹನ ತರಂಗಿಣಿಯಲ್ಲಿ (೩-೩೩ ರಿಂದ ೪೫) ಬ್ರಾಹ್ಮಣ ಕೇರಿಯ ಚಿತ್ರಣಗಳನ್ನು ನೀಡಿದ್ದಾರೆ.

ಬಂಗಾರದ ತಗಡು ಹೊಡೆಸಿದ ಮನೆ, ಪಡಸಾಲೆ, ಮನೆಯ ಮುಂದೆ ತುಳಸಿ ಮಂಟಪದಲ್ಲಿ ಹರಿಕೀರ್ತನೆ, ತತ್ವಾರ್ಥದ ರಹಸ್ಯವನ್ನರಿತ ಬ್ರಾಹ್ಮಣಿಯರಿದ್ದರು. ಜೋತಿಷ್ಯ, ಅಷ್ಟಭಾಷಾಕವಿಗಳು, ಗಮಕಿಗಳು, ತಾರ್ಕಿಕರು, ಓದಿಸುವ ಜಾತಿ ಹಿಡಿದ ಶಿಕ್ಷಕರು (ಕಸೆಯ ಕೋಲಣ್ಣಗಳ್) ಅಲ್ಲಿದ್ದರು. ಕನಕದಾಸರ ವರ್ಣನೆಗಳಲ್ಲಿ ಬ್ರಾಹ್ಮಣರ ವೇಷಭೂಷಣದ ವಿವರಗಳಿವೆ. ಈ ಎಲ್ಲ ವಿವರಗಳನ್ನು ನೋಡಿದರೆ ಅಗ್ರಹಾರದ ಕಲ್ಪನೆ ಬರುತ್ತದೆ. ಬ್ರಾಹ್ಮಣರು ಎಲ್ಲ ಸವಲತ್ತುಗಳನ್ನು ಪಡೆದಿದ್ದರು ಎಂಬುದು ಕಂಡುಬರುತ್ತದೆ. ರಾಜಧಾನಿಯಲ್ಲಿ ನಾನಾ ವೃತ್ತಿಯವರ ಮನೆಗಳಿದ್ದಂತೆ ವೇಶ್ಯೆಯರ ಮನೆಗಳೂ ಇದ್ದವು. ಇವರಿಗಾಗಿ ಪ್ರತ್ಯೇಕ ಕೇರಿಗಳೂ ಇದ್ದವು. ಆದರೆ ವೇಶ್ಯಾವಾಟಿಕೆಯು ಅಷ್ಟಾದಶ ವರ್ಣನೆಯಲ್ಲಿ ಒಂದಾಗಿದ್ದು, ಆಗಿನ ಕಾಲದಲ್ಲೂ ಇದ್ದಿರಬಹುದಾದ ಪದ್ಧತಿಯನ್ನು ಧ್ವನಿಸುತ್ತದೆ.

ವಿಜಯನಗರದ ಕಾಲದ ಜನಜೀವನದ ಎಳೆಗಳನ್ನು ಮರುಜೋಡಿಸಲು ಹೊರಡುವ ಸಂಶೋಧಕರಿಗೆ ಕನಕದಾಸರ ಮೋಹನ ತರಂಗಿಣಿ ಕೈದೀವಿಗೆಯಂತಿದೆ.

ಕನಕದಾಸರು ಸಮಾಜದ ಪ್ರತಿಯೊಂದು ವರ್ಗವನ್ನೂ, ವೃತ್ತಿಯನ್ನೂ ಮನಮುಟ್ಟುವಂತೆ ಚಿತ್ರಿಸಿದ್ದಾರೆ. ಪ್ರಸ್ತುತ ನಾವು ಕಾಣುತ್ತಿರುವ ನಪುಂಸಕರ ಸ್ಥಿತಿಗಳಿಗೂ,

ಆಗಿನ ವಿಜಯನಗರದ ಕಾಲದಲ್ಲಿ ನೀಡಲಾಗಿದ್ದ ಸ್ಥಾನಮಾನಗಳಿಗೂ ಹೋಲಿಸಿದಾಗ ಇಂದಿನ ಸ್ಥಿತಿಯೇ ಶೋಚನಿಯವೆಂಬ ಅಂಶಗಳನ್ನು ಗಮನಿಸಬಹುದು. ವಿಜಯನಗರದ ಗತ ವೈಭವವೇ ನಮ್ಮ ಕಣ್ಣಿಗೆ ಕಟ್ಟುತ್ತದೆ. ವಿಜಯನಗರ ಸುಭಿಕ್ಷೆಯಿಂದ ಕೂಡಿತ್ತು ಎಂಬುದು ನಮಗೆ ತಿಳಿಯುತ್ತದೆ.

ವಿಜಯನಗರದ ಕಾಲದ ಅವಧಿ, ಅದರಲ್ಲೂ ಕೃಷ್ಣದೇವರಾಯನ ಕಾಲದ ಜೀವನ ಸುಖಮಯವೂ, ಸೌಹಾರ್ದಯುತವೂ ಆಗಿತ್ತೆನ್ನುವುದು ಇತಿಹಾಸದ ಆಧಾರದಿಂದ ನಮಗೆ ತಿಳಿದುಬರುತ್ತದೆ. ಕನಕದಾಸರು ನೀಡುವ ವಿವರಣೆ ಇದಕ್ಕೆ ಪೂರಕವಾಗಿದೆ. ಅರಸರು ಪ್ರಜೆಗಳ ಪ್ರಾಣ, ಮಾನ ಮತ್ತು ಸಂಪತ್ತಿನ ರಕ್ಷಣೆಗೆ ಬೇಕಾದ ವ್ಯವಸ್ಥೆಯನ್ನು ಮಾಡಿದ್ದರು. ಅಲ್ಲದೇ ರಾಜಧಾನಿಯನ್ನು ಅಚ್ಚುಕಟ್ಟಾಗಿ ನಿರ್ಮಿಸುತ್ತಿದ್ದರು. ಕನಕದಾಸರು ಮೋಹನ ತರಂಗಿಣಿಯನ್ನು ದ್ವಾರಾವತಿಯ ನೆಪದಲ್ಲಿ ನೀಡುವ ವಿವರಗಳು ಆ ಕಾಲದ ರಾಜಧಾನಿಯನ್ನು ವರ್ಣಿಸುತ್ತದೆ. ರಾಜಧಾನಿಯ ರಕ್ಷಣೆಗೆ ಕೋಟೆಗಳಿರುತ್ತಿದ್ದವು. ಹುಲಿಮೊಗದಂತಹ ಹೆಬ್ಬಾಗಿಲು, ಕೋಟೆಯ ಮೇಲೆ ಧ್ವಜಕೇತನಗಳು ಕಂಗೊಳಿಸುತ್ತಿದ್ದವು. ಕೋಟೆಯ ರಕ್ಷಣೆಯ ಸಾಧನವಾಗಿ ಪೆಟಲು ಯಂತ್ರಗಳನ್ನು ಬಳಸುತ್ತಿದ್ದರು. ರಾಜಧಾನಿಯು ಅತ್ಯಂತ ಸುರಕ್ಷಿತ ಸ್ಥಳಗಳಲ್ಲಿ ಇರುತ್ತಿತ್ತು. ರಾಜನ ಅರಮನೆ, ಅಂತ:ಪುರಗಳಿದ್ದವು. ಅರಸನ ರಾಣಿಯರು ಸಂಗೀತ, ನೃತ್ಯ ಮುಂತಾದ ೬೪ ಕಲೆಗಳಲ್ಲಿ ಪ್ರಾವಿಣ್ಯ ಹೊಂದಿದ್ದರು (೪–೧೬) ಇನ್ನೊಂದು ಕುತೂಹಲದ ವಿಷಯವೆಂದರೆ ಅಂತ:ಪುರದ ಸಿಬ್ಬಂದಿಗಳಲ್ಲಿ ಹಲವರು ಖೋಜಾ (ನಪುಂಸಕರು) ಇದ್ದರು. " ಅಪ್ಪಣೆವಡೆದು ಬಂದುಸಿರ್ದಳು ಬಾಗಿಲೊಳಪ್ಪ ಖೊಜ್ಜೆಯ ದೈತ್ಯರಿಗೆ" (೨೩.೩) "ಕೊಜ್ಜೆಯರಿಗೆ ಮೆಲ್ಲಿಸುತೆ" (೧೮.೦೯) ಎಂಬ ಕನಕದಾಸರ ಹೇಳಿಕೆಯಲ್ಲಿ ಖೋಜಾಗಳು ಬಾಗಿಲು ಕಾಯುತ್ತಿದ್ದ ಸೂಚನೆಯಿದೆ. ಖೋಜಾಗಳನ್ನು ಬಿಟ್ಟರೆ ಬೇರೆ ಗಂಡಸರಿಗೆ ಅಂತ:ಪುರಕ್ಕೆ ಪ್ರವೇಶವಿರಲಿಲ್ಲ. ಖೋಜಾಗಳ ಬಗ್ಗೆ ಇತಿಹಾಸದಲ್ಲೂ ಅನೇಕ ಉಲ್ಲೇಖಗಳು ದೊರೆಯುತ್ತದೆ.

ಮೋಹನ ತರಂಗಿಣಿಯಲ್ಲಿ ಕನಕದಾಸರು ವರ್ಣಿಸಿರುವ ಸೌರಾಷ್ಟ್ರದೇಶ ವರ್ಣನೆ, ದ್ವಾರಕಾಪುರದ ವರ್ಣನೆಗಳು ವಸ್ತುವಿನ ಘನತೆಗೆ ತಕ್ಕ ವೇದಿಕೆಗಳಾಗಿವೆ. ವಿಜಯನಗರದ ಸಾಮ್ರಾಜ್ಯವನ್ನು ಕಣ್ಣಾರೆ ಕಂಡ ಕನಕದಾಸರು ವಿಜಯನಗರ ಅರಸ ಶ್ರೀಕೃಷ್ಣದೇವರಾಯನನ್ನು ಮತ್ತು ದ್ವಾರಕೆಯ ಶ್ರೀಕೃಷ್ಣನನ್ನು ಅವಿನಾಭಾವದಿಂದ ಸ್ತುತಿಸಿರುವುದು ಕಂಡುಬರುತ್ತದೆ. ವಿಜಯನಗರ ಸಾಮ್ರಾಜ್ಯದ ಉನ್ನತಿ ಮತ್ತು ಅವನತಿಯ

ಐತಿಹಾಸಿಕ ವಿಚಾರಗಳಿಗೆ ಕನ್ನಡಿ ಹಿಡಿಯುವ ಕನಕದಾಸರ 'ಮೋಹನ ತರಂಗಿಣಿ' ಐತಿಹಾಸಿಕ ಕಾವ್ಯವೂ ಹೌದು. ಶ್ರೀ ಕೃಷ್ಣನನ್ನು ಪ್ರಧಾನ ನಾಯಕನನ್ನಾಗಿಸಿರುವ ಕನಕದಾಸರು ಈ ಕೃತಿಯನ್ನು 'ಶ್ರೀ ಕೃಷ್ಣಚರಿತೆ' ಎಂದೂ ಕರೆದಿದ್ದಾರೆ. ಆದರೆ ಇದು ಕೃಷ್ಣನ ಕಥೆಯ ಜೊತೆಗೆ 'ಕೃಷ್ಣದೇವರಾಯನ ಚರಿತೆ' ಎಂಬರ್ಥವನ್ನೂ ಧ್ವನಿಸುವಂತಿದೆ. ಪಂಪ, ರನ್ನ ಮೊದಲಾದ ಹಳೆಗನ್ನಡದ ಕವಿಗಳು ತಮ್ಮ ಕಾವ್ಯದ ಕಥಾನಾಯಕರಾಗಿ ತಮ್ಮನ್ನು ಸಾಕಿದ ದೊರೆಗಳನ್ನೇ ಕಾವ್ಯದೊಳಗಿರುವ ಪ್ರಬಲ, ಶಕ್ತಿವಂತ ಪಾತ್ರಕ್ಕೆ ಹೋಲಿಸಿ, ಸಮೀಕರಿಸಿ ಬರೆದು ಯಶಸ್ವಿಯಾಗಿದ್ದಾರೆ. ಆದರೆ ಕನಕದಾಸರು ತಮ್ಮ ಕಾವ್ಯದಲ್ಲಿ ಈ ಬಗೆಯ ಹಂಗಿಗೆ ಒಳಗಾಗದೇ ದೂರದಿಂದ ನಿಂತು ಸಾಮ್ರಾಜ್ಯ, ಅದನ್ನಾಳುವ ಸಮರ್ಥರಾಜ, ಅಂದಿನ ವೈಭವವನ್ನು ಸಂದರ್ಭ ಬಂದಾಗಲೆಲ್ಲಾ ಬಳಸಿದ್ದಾರೆ. ವಿಜಯನಗರ ಸಾಮ್ರಾಜ್ಯದ ಸಂಪತ್ತಿನ ಅಗಾಧತೆಯನ್ನು, ಕೃಷ್ಣದೇವರಾಯನ ಅಪೂರ್ವವಾದ ಆದರ್ಶಗಳನ್ನು ಸಹಜವಾಗಿ ಕಾವ್ಯದಲ್ಲಿ ಬಳಸಿಕೊಂಡು ಶ್ರೀ ಕೃಷ್ಣನ ಲೀಲಾ ವಿನೋದಗಳಿಗೆ ಯಥಾರ್ಥತೆಯನ್ನು, ಸಹಜತೆಯನ್ನು ನೀಡಿದ್ದಾರೆ. ಕನಕದಾಸರು ತಮ್ಮ ಕಾಲದ ಸಾಂಸ್ಕೃತಿಕತೆಯೊಂದಿಗೆ ಮುಖಾಮುಖಿ ನಡೆಸಿದ್ದಾರೆ ಎನಿಸುತ್ತದೆ. ನಗರ ವರ್ಣನೆ, ರಾಜ ವೈಭವ, ವರ್ತಕರ ವ್ಯಾಪಾರ, ಬ್ರಾಹ್ಮಣ ಕೇರಿಯ ವರ್ಣನೆ, ಶ್ರೀಕೃಷ್ಣದೇವರಾಯನ ರಾಜ್ಯಭಾರ, ಧಾರ್ಮಿಕ ಸಂಪ್ರದಾಯಗಳು, ಸಾಮಾಜಿಕ ಸ್ಥಿತಿಗತಿ, ಮತ್ತು ಜನಜೀವನದ ಚಿತ್ರಣವನ್ನು ಆಪ್ತವಾಗಿ ಕಣ್ಣಿಗೆ ಕಟ್ಟುವಂತೆ ಜೀವ ತುಂಬಿ ನೀಡಿದ್ದಾರೆ. ಇತಿಹಾಸದಲ್ಲಿ ಮಾಹಿತಿ ಸಿಗುವ ವಿದೇಶಿ ಪ್ರವಾಸಿಗರ ಬರವಣಿಗೆಗಳಿಗೂ ಮತ್ತು ಕನಕದಾಸರ ಮೋಹನ ತರಂಗಿಣಿಯಲ್ಲಿ ಉಲ್ಲೇಖಿತವಾಗಿರುವ ವಿಷಯಗಳಿಗೂ ಅನೇಕ ಸಾಮ್ಯತೆಗಳಿರುವುದು ಕಂಡುಬರುತ್ತದೆ. ಆದ್ದರಿಂದ ಇದೊಂದು ಚಾರಿತ್ರಿಕ ಮತ್ತು ಸಾಂಸ್ಕೃತಿಕ ಮಹತ್ವವುಳ್ಳ ಕಾವ್ಯವಾಗಿದೆ.

ಇ. ಮೋಹನ ತರಂಗಿಣಿ ಮತ್ತು ಸ್ತ್ರೀವಾದಿ ಸಂವೇದನೆ:-

ಕನಕದಾಸರ 'ಮೋಹನ ತರಂಗಿಣಿ'ಯಲ್ಲಿ ಮೇಲ್ನೋಟಕ್ಕೆ ಕೃಷ್ಣನೇ ಕಾವ್ಯದ ನಾಯಕನಾದರೂ ಸ್ತ್ರೀ ಪಾತ್ರಗಳು ಪ್ರಧಾನ ಪಾತ್ರವಹಿಸುತ್ತದೆ. ಕನಕದಾಸರು ಈ ಕಾವ್ಯವನ್ನು ಹೇಳಿದ್ದು 'ಸುಜ್ಞಾನವಧೂಟಿ' ಎಂಬ ತಮ್ಮ ಪತ್ನಿಗೆ. ಈ ಕಾವ್ಯವು ಸ್ತ್ರೀವರ್ಣನೆಗಳಿಂದ ತುಂಬಿದೆ. ಪತ್ನಿಯರನ್ನು ಸಂಭೋದಿಸುವ ಪರಿಪಾಠವನ್ನು ನಾಗವರ್ಮ, ದೇವರಾಜನಿಂದ ಅನುಸರಿಸಿದ ಕನಕದಾಸರು ಸಂಧಿಗಳ ಆರಂಭದಲ್ಲಿ ವರ್ಣಿಸಿ ಅವಳ ರಸಿಕತೆಯನ್ನು ಕೊಂಡಾಡಿದ್ದಾರೆ. ಸುಜ್ಞಾನಪ್ರಮುದೆ, ಕಣ್ಗಮನವನಿರ್ಕುಳಿಗೊಳ್ವ ಕಡುಜಾಣ ವೆಣ್ಣುಗಳಧಿ ದೇವಿ; ಆಲೇಗಾತಿಯರ ಮಸ್ತಕದಿ ಮೆರೆವ ಪೂಮಾಲೆ, ಮತಿವಂತೆ, ಜಾಣೆವುಣ್ಣುಗಳರಸೆ ಇತ್ಯಾದಿ ಮಾತುಗಳ ಮೂಲಕ 'ಸುಜ್ಞಾನ ವಧೂಟಿ', ವಿದ್ಯೆ, ಜ್ಞಾನಕ್ಕೆ ಪ್ರತೀಕವಾದಳು ಎನ್ನುವುದು ಸ್ಪಷ್ಟವಾಗುತ್ತದೆ. ಒಂದು ವೇಳೆ ಅವಳು ಕನಕದಾಸರ ಪತ್ನಿಯೇ ಹೌದಾದಲ್ಲಿ ಕೆಳವರ್ಗದ ಮಹಿಳೆಯೊಬ್ಬಳು ಪಡೆದ ಜ್ಞಾನದ ಹಿರಿಮೆ ಪರೋಕ್ಷವಾಗಿ ನಮ್ಮ ಗಮನ ಸೆಳೆಯುತ್ತದೆ.

'ಸ್ತ್ರೀರೂಪವೇ ರೂಪಂ ಶೃಂಗಾರ ರಸಮೆ ರಸಂ ' ಎಂಬ ನಿರ್ಣಯದಲ್ಲಿ ಕೃತಿರಚನೆಗೆ ತೊಡಗುವ ಕನಕದಾಸರು ನಿತ್ಯ ಸ್ಫೂರ್ತಿಯಾಗಿ ಸುಜ್ಞಾನವಧೂಟಿಯಲ್ಲಿ ತನ್ನ ಪ್ರೇಮಭಾವದ ಅಭಿವ್ಯಕ್ತಿಯನ್ನು ಕಂಡುಕೊಳ್ಳುತ್ತಾರೆ. ಪ್ರೇಮ-ಕಾಮದ ತರಂಗಗಳನ್ನೆಬ್ಬಿಸುವ ಮೋಹನ ಶ್ರೀಕೃಷ್ಣನ ಚರಿತೆ ಎಂಬರ್ಥದಲ್ಲಿ ಕಾವ್ಯವನ್ನು 'ಮೋಹನ ತರಂಗಿಣಿ ಎಂದೇ ಕರೆದಿದ್ದಾರೆ. ತನ್ನ ಮನದನ್ನೆಯ ಮನಸೂರೆಗೊಳ್ಳಬೇಕಾದರೆ ಮಹಿಳೆಯರ ಜೀವನಕ್ಕೆ ಸಂಬಂಧಿಸಿದ ಸಂಸಾರ ಜೀವನ, ಬಸಿರು, ಬಾಣಂತನ, ಪ್ರೇಮ ಕಾಮಗಳನ್ನು ಆಧರಿಸಿದ ವಸ್ತು ಹೆಚ್ಚು ಸೂಕ್ತವೆಂಬ ಸತ್ಯವನ್ನು ಕವಿ ಕನಕದಾಸರು ಮನಗಂಡಂತಿದೆ. ಆದ್ದರಿಂದ ಇದು ಒಂದು ಸ್ತ್ರೀನಿಷ್ಠ ಕೃತಿ ಎನ್ನಬಹುದು. ' ಮೋಹನ ತರಂಗಿಣಿ, ಕೃಷ್ಣ-ರುಕ್ಮಿಣಿ, ಪ್ರದ್ಯುಮ್ನ-ರತಿ, ಅನಿರುದ್ಧ-ಉಷೆ ಈ ಮೂರು ತಲೆಮಾರುಗಳ ದಾಂಪತ್ಯ ಜೀವನದ ಕಥೆಯಾಗಿದೆ. ಹಾಗೆಯೇ ಇದನ್ನು ಕಾಮದಹನ, ಶಂಬರಾಸುರ ಕಾಳಗ, ಬಾಣಾಸುರ ಕಾಳಗವೆಂದು ಕರೆಯಬಹುದು. ಕಾಮ ಮತ್ತು ಕಾಳಗ ಇಲ್ಲಿಯ ಎರಡು ಪ್ರಧಾನ ಮನೋಭೂಮಿಕೆಗಳು. ಶೈವ-ವೈಷ್ಣವ ಎಂಬ ಎರಡು ಧರ್ಮೀಯ ಪ್ರೇಮ ಸಂವೇದನೆ ವಿವಾಹದಲ್ಲಿ ಪರ್ಯಾವಸಾನಗೊಳ್ಳುವ ಬಗೆ ವಿಶೇಷವೆನಿಸುತ್ತದೆ. ವಿಷ್ಣುಸುತ, ಮನ್ಮಥ, ತಾರಾಕಾಸುರನ ವಧೆಗಾಗಿ ತಪೋನಿರತನಾದ ಪರಶಿವನನ್ನು ಪಾರ್ವತಿಯೊಂದಿಗೆ ಸೇರಿಸುವ ಲೋಕಕಲ್ಯಾಣದ ಉದಾತ್ತ ಉದ್ದೇಶದಿಂದ ಬಂದು ಶಿವನ ಕೆಂಗಣ್ಣಿಗೆ

ಗುರಿಯಾಗಿ ದಹಿಸಲ್ಪಡುತ್ತಾನೆ. ವೈಧವ್ಯದ ಕಳಂಕ ಹೊತ್ತ ರತಿಯನ್ನು ಪಾರ್ವತಿ–ಪರ ಶಿವರು ಸಂತೈಸಿ ಪತಿಯನ್ನು ಸೇರಿಸುವ ಭರವಸೆ ನೀಡುತ್ತಾರೆ. ಶಿವನಿಂದ ದಹಿಸಲ್ಪಟ್ಟ ಮನ್ಮಥ ದ್ವಾರಕೆಯ ಕೃಷ್ಣ ರುಕ್ಮಿಣಿಯರಿಗೆ ಪ್ರದ್ಯುಮ್ನನಾಗಿ ಹುಟ್ಟುತ್ತಾನೆ. ಪ್ರದ್ಯುಮ್ನನಿಂದಲೇ ತನಗೆ ಮರಣವೆಂಬ ಸಂಗತಿ ತಿಳಿದು ರುಕ್ಮಿಣಿಯ ಹತ್ತು ದಿನದ ಮಗುವನ್ನು ಶಂಬರಾಸುರ ಅಪಹರಿಸುತ್ತಾನೆ. ಮಗುವನ್ನು ಕೊಲ್ಲಲು ಮನಸ್ಸು ಬಾರದೆ ನದಿಯಲ್ಲಿ ಎಸೆದು ಹೋಗುತ್ತಾನೆ. ಮೀನೊಂದು ಮಗುವನ್ನು ನುಂಗುತ್ತದೆ. ಇತ್ತ ರತಿದೇವಿ ತನ್ನ ಪತಿಯನ್ನು ಹುಡುಕುತ್ತಾ ಶಂಬರಾಸುರನ ಪಟ್ಟಣಕ್ಕೆ ತಲುಪುತ್ತಾಳೆ. ರತಿಯ ರೂಪಕ್ಕೆ ಮನಸೋತ ಶಂಬರ ಅವಳನ್ನು ಒಲಿಸಿಕೊಳ್ಳಲು ಪತ್ನಿಯ ಮೂಲಕ ಪ್ರಯತ್ನಿಸಿ ವಿಫಲನಾಗುತ್ತಾನೆ. ಕೊನೆಗೆ ತನ್ನ ಮನೆಯ ಅಡುಗೆ ಕೆಲಸಕ್ಕೆ ಅವಳನ್ನು ನಿಯೋಜಿಸುತ್ತಾನೆ. ಪ್ರದ್ಯುಮ್ನನನ್ನು ನುಂಗಿದ ಮೀನು ಮಿಂಗುಲಿಗರ ಮೂಲಕ ಶಂಬರನ ಅಡುಗೆ ಮನೆಗೆ ತಲುಪುತ್ತದೆ. ಅಲ್ಲಿ ರತಿ ಮೀನನ್ನು ಕತ್ತರಿಸುವಾಗ ಅದರಲ್ಲಿರುವ ಮಗುವನ್ನು ಮನ್ಮಥನೇ ಎಂದು ತಿಳಿದು ಅದನ್ನು ಸಾಕುತ್ತಾಳೆ. ನಂತರ ಪ್ರದ್ಯುಮ್ನನು ಶಂಬರಾಸುರನನ್ನು ಕೊಂದು ರತಿಯನ್ನು ವಿವಾಹವಾಗುತ್ತಾನೆ.

ದ್ವಾರಾಕಾಪುರದ ಹದಿನಾರು ಸಾವಿರ ಸ್ತ್ರೀಯರ ಮಧ್ಯದಲ್ಲಿ ಕೃಷ್ಣನ ಇಕ್ಕೆಲದಲ್ಲಿ ಭುಜಕೀರ್ತಿ ಮಣಿಗಳಂತೆ ಶೋಭಿಸುವವರು ರುಕ್ಮಿಣಿ. ಸತ್ಯಭಾಮೆಯರು. ಹಕ್ಕಿ ತನ್ನ ಮರಿಗಳಿಗೆ ಗುಟುಕಿಡುವುದನ್ನು ಕಂಡ ರುಕ್ಮಿಣಿಗೂ ಪುತ್ರವಾಂಛೆ ಹುಟ್ಟುತ್ತದೆ. ಈ ಬಯಕೆ ಸ್ತ್ರೀಯರಿಗೆ ಸಹಜವಾದುದೆಂದು ಕವಿ ಸಮರ್ಥಿಸಿದ್ದಾರೆ.

ಮಾತೃ ವಾತ್ಸಲ್ಯಕ್ಕೆ ನಿದರ್ಶನವಾದ ರುಕ್ಮಿಣಿಯ ಪುತ್ರವಿಯೋಗ ಓದುಗರ ಮನ ಮಿಡಿಯುತ್ತದೆ. ಮಗುವಂತು ಬಲ್ಮೊಲೆ ತೊರೆದರೆ ಮತ್ತಿಷ್ಟು ಬಿಗುಹುದೋರುವುದು ರಸಳದಿ ಎನ್ನುವ ರುಕ್ಮಿಣಿಯ ಮಾತು ಮಗುವು ಹಾಲು ಕುಡಿದರೆ. ಹೆಣ್ಣಿನ ಸೌಂದರ್ಯ ಕೆಡುವುದಿಲ್ಲ. ಬದಲಿಗೆ ಇನ್ನಷ್ಟು ಸೌಂದರ್ಯ ಹೆಚ್ಚುತ್ತದೆ ಎನ್ನುತ್ತಾಳೆ. ಹತ್ತು ದಿನದ ಹಸುಳೆಯನ್ನು ಶಂಬರಾಸುರ ಕದ್ದೊಯ್ದಾಗ ರುಕ್ಮಿಣಿಯ ಅಳುವಿನ ಕಟ್ಟೆ ಒಡೆದು ಬಾಣ ತಾಗಿದ ಜಿಂಕೆಯಂತೆ ಮಗುವನ್ನು ಕಾಣದೆ ಹೊರಳಾಡುವ ಪ್ರಸಂಗವು ರಾಘವಾಂಕನ ಚಂದ್ರಮತಿಯ ಪ್ರಲಾಪವನ್ನು ನೆನಪಿಸುತ್ತದೆ. ಸಾಮಾನ್ಯ ಜನಪದ ಮಹಿಳೆ ರೋದಿಸುವಂತೆ ಕನಕದಾಸರು ರುಕ್ಮಿಣಿಯನ್ನು ಚಿತ್ರಿಸಿದ್ದಾರೆ. ತಾನಿನ್ನೂ ಮಗುವಿನ ತಲೆಗೆ ಎಣ್ಣೆ ಹಾಕಿಲ್ಲ ನೊರೆವಾಲು ಬೆಣ್ಣೆಯ ಇನ್ನೂ ತಾನು ಶಿಶುವಿಗೆ ತಿನ್ನಿಸಿಲ್ಲ. ಕಣ್ಣವೆ ಹಳಜೆ ನೋಡಿದುದಿಲ್ಲ

ಮಗನ ಲಾವಣ್ಯ ಎಂದಳುಲುವ ರುಕ್ಮಿಣಿಯ ರೋದನ ಕರುಳು ಚುರ್ ಎನಿಸಿ, ಮಾತೃ ವಾತ್ಸಲ್ಯದ ಪರಾಕಾಷ್ಠತೆಯನ್ನು ಮುಟ್ಟುತ್ತದೆ.

ಮೊಲೆವಾಲು ತೊರೆದುತುತಿದೆಕೊ ಲೋಚನವಾರಿ
ಸೆಲೆ ಹಾಯ್ದೊಡೆ ಹೋಗುತಿದೆಕೊ
ನೆಲೆಗೊಳ್ಳದು ಚಿತ್ರ ಮಗನೆ ನೀನಿದಿರ್ವಂದು
ತಲೆಕೋರಿಸೆಂದಳಲಿದಳು॥
ಹಾಲಿಗೆ ಹಂಬಲಿಸುವನಲ್ಲ ಬಿಡದಂಬೆ
ಗಾಲಿಕ್ಕಿ ತೊಳಲುವನಲ್ಲ
ಕಾಲು ಬಲಿದು ದಟ್ಟಡಿಯಿಡುವನಲ್ಲ
ಬಾಲನೆಲ್ಲಿಗೆ ಹೋದನವ್ವ॥

ಮೊಲೆ ಹಾಲು ಕೊಟ್ಟರೆ ತಮ್ಮ ಸೌಂದರ್ಯ ಕಡಿಮೆ ಆಗುತ್ತದೆ ಎಂಬ ನಂಬಿಕೆಯಿಂದ ರಾಣಿಯರು ತಮ್ಮ ಮಕ್ಕಳಿಗೆ ಹಾಲು ಕೊಡದೆ, ದಾಸಿಯರ ಹಾಲನ್ನು ಮಕ್ಕಳು ಕುಡಿಯುತ್ತಿದ್ದರೆಂಬ ಉಲ್ಲೇಖಗಳು ನಮ್ಮ ಅನೇಕ ಕಾವ್ಯಗಳಲ್ಲಿ ಸಿಗುತ್ತದೆ. ಆದರೆ ಮಗುವಿಗೆ ಮೊಲೆ ಹಾಲು ಕುಡಿಸಿದರೆ ತಾಯಿಯ ಸೌಂದರ್ಯ ವೃದ್ಧಿಯಾಗುತ್ತದೆ. ಮಗುವಿಗೆ ತಾಯಿಯ ಹಾಲು ಅಮೃತ ಎಂಬ ವಿಷಯಗಳನ್ನು ಇತರ ಸ್ತ್ರೀಯರಿಗೆ ಮನದಟ್ಟು ಮಾಡುವಂತೆ ಇದು ಚಿತ್ರಿತವಾಗಿದೆ. ಎಳೆ ಮಗುವಿಗೆ ತಾಯಿಯ ಅಪ್ಪುಗೆ ಅವಶ್ಯಕ ಎಂಬುದನ್ನು ಸೂಚಿಸುತ್ತದೆ. ಆಗಿನ ರಾಣಿಯರಿಗಿದ್ದ ತಪ್ಪು ಕಲ್ಪನೆಯನ್ನು ಹೋಗಲಾಡಿಸಲು ಈ ಪ್ರಯತ್ನ ಮಾಡಿದಂತೆ ಕಾಣುತ್ತದೆ.

ಕಾಮದಹನದ ಪ್ರಸಂಗಕ್ಕೆ ಬಂದರೆ ರತಿ, ಪಾರ್ವತಿಯರ ಪಾತ್ರಗಳಲ್ಲಿ ಕರುಣೆ ಮಡುಗಟ್ಟಿ ನಿಂತಿದೆ. ಮನ್ಮಥನು ಶಿವನೊಡನೆ ಸೆಣಸಾಡಲು ಮುಂದಾದಾಗ ಪರಶಿವನೊಂದಿಗೆ ಸೆಣಸಾಟ ಸಾಧುವಲ್ಲ ಎಂಬ ಮಾತಿನಲ್ಲಿ ತಾಯ್ತನದ ವಾತ್ಸಲ್ಯ ಅಡಗಿದೆ. " ತಲೆ ಬಲ್ಲಿತೆಂದು ಕಲ್ಗನೆ ಹಾಯಬೇಡ ಹೋಗೆಲೋ ಪಾಪಿ ಮನ್ಮಥ ಮನೆಗೆ" ಎಂದು ಪಾರ್ವತಿ ಎಚ್ಚರಿಸುತ್ತಾಳೆ. ಗಂಡನ ಸಾವನ್ನು ರತಿ ವಾಸನೆಯಿಂದಲೇ ತಿಳಿದುಕೊಳ್ಳುತ್ತಾಳೆ. ರತಿಯ ಪ್ರಲಾಪವನ್ನು ವರ್ಣಿಸಲು ಪದಗಳೇ ಸಾಲದು. ಅಳದವರೂ ಅಳಬೇಕಂತೆ ರತಿಯ ದು:ಖಕ್ಕೆ. ಪತಿಯನ್ನು ಕಳೆದುಕೊಂಡ ಹೆಣ್ಣಿನ ನೋವು ಅರಿವಾಗುವುದು ಹೆಣ್ಣಿಗೆ ಎನ್ನುವ ಹಾಗೆ ತಾಯಿಯಂತೆ ಪಾರ್ವತಿ ಬಂದು ಸಂತೈಸುತ್ತಾಳೆ. ಗಂಧೋದಕದಿಂದ ರತಿಯ ಮುಖವನ್ನು ತೊಳೆದು, ಜಾರಿದ ಮುತ್ತಿನ ಸೆರಗನ್ನು ಸರಿಮಾಡಿ, ಹೆನೆತ್ತಿಯಲ್ಲಿ ತುರುಬನ್ನು

ಎತ್ತಿ ಕಟ್ಟಿದಳಂತೆ. ಮೈದೂಳನ್ನು ಕೊಡಿಹಿ ರಟ್ಟೆಯ ಹಿಡಿದು ಎತ್ತಿದಳಂತೆ. ರತಿಯ ಪಕ್ಷ ವಹಿಸಿ ಶಿವನೆಡೆಗೆ ಅವಳನ್ನು ಕರೆತಂದು ನ್ಯಾಯವನ್ನು ಕೇಳುವ ಹಾಗೆ "ಪಾಪಕ್ಷಯಕ್ಕೆಂದು ಗಂಗೆಯನ್ನು ಮೀಯಲು ಬಂದವನು ಮೊಸಳೆ ಹಿಡಿದಂತೆ" ನಿರ್ದೋಷಿಯಾದ ಕಾಮನನ್ನೇಕೆ ಸುಟ್ಟೆ ? ಎಂದು ಕೇಳುತ್ತಾಳೆ. ತನ್ನ ಗಂಡನನ್ನು ಸುಟ್ಟಂತೆ ನನ್ನನ್ನು ಸುಟ್ಟುಬಿಡು ಎಂಬ ರತಿಯ ಮಾತಿಗೆ ಪಾರ್ವತಿ ಮತ್ತಷ್ಟು ಕಳವಳಗೊಂಡು, "ಕಂದರ್ಪನರ್ಧಾಂಗಿಯ ಮೇಲೆ ವೈಧವ್ಯ ಪೊಂದದೊಲ್" ಮಾಡೆಂದು ಶಿವನನ್ನು ಬೇಡಿಕೊಳ್ಳುತ್ತಾಳೆ. ವೈಧವ್ಯ ಅಂದಿನ ಸಮಾಜದಲ್ಲಿ ಎಂತಹ ಕ್ರೂರ ಸಂಪ್ರದಾಯವೆಂಬ ಅರಿವನ್ನು ಈ ಸನ್ನಿವೇಶ ಮಾಡಿಸುತ್ತದೆ.

ಶಂಬರಾಸುರನ ಪಟ್ಟಣ ಸೇರಿದ ರತಿದೇವಿಯನ್ನು ಕಂಡು ವಿಷಯಾತುರನಾದ ಶಂಭರ ಅವಳನ್ನು ಒಲಿಸಿಕೊಂಡು ಬರಲು ತನ್ನ ಸತಿಯನ್ನು ಕಳುಹಿಸಿಕೊಡುತ್ತಾನೆ. ತನ್ನ ಯಜಮಾನನ ಮಾತನ್ನು ಬಂದು ಮೀರಲಾರದೆ ಶಂಭರನ ಪತ್ನಿ ರತಿಯಲ್ಲಿ ತನ್ನ ಪತಿಯನ್ನು ವರಿಸುವಂತೆ ಪರಿಪರಿಯಾಗಿ ಕೇಳುತ್ತಾಳೆ. ಯಾವುದಕ್ಕೂ ಒಡಂಬಡದ ರತಿ ಪತಿವ್ರತೆಗೆ ಬೇರೆಯವರೊಡನೆ ಅನುಭೋಗ ಉಂಟೆ ? ಎಂದಳು. ಶಂಬರನ ಪತ್ನಿ ರತಿಯ ನೋವಿಗೆ ಸ್ಪಂದಿಸುತ್ತಾಳೆ. ಹೆಣ್ಣು ಜನ್ಮಕ್ಕೆ ರೋಸಿ ಹೋದ ಅವಳು ಹೀಗೆನ್ನುತ್ತಾಳೆ.

ಲೋಕೇಶ್ವರನೆಂಬ ಪಾಪಿಷ್ಠ ಹೆಂಗಳ
ನೇಕೆ ನಿರ್ಮಿತವ ಮಾಡಿದನೊ
ಸಾಕಿದು ಪೆಣ್ಜನ್ಮವೇತಕೆ ಸುಡಲೆಂದು
ಆಕೆ ಪೇಳಿದಳು ದುಕ್ಕದಲ॥

ಪತಿಯೊಡನೆ ಬಂದು ಹದಿಬದೆಯ ಸಂಗ ಎಂದಿಗೂ ತರವಲ್ಲ ಎನ್ನುತ್ತಾಳೆ. ಶಂಬರನ ಹೆಂಡತಿಯ ಮನಸ್ಸಿನ ನೋವು ಲಕ್ಷ್ಮೀಶನ ಜೈಮಿನಿ ಭಾರತದಲ್ಲಿ ಬರುವ ಸೀತೆಯ ನೋವನ್ನು ನೆನೆಪಿಸುತ್ತದೆ. ಆಧುನಿಕ ಯುಗದ ಒಂಟಿ ಮಹಿಳೆಯ ಮೇಲೆ ಪುರುಷನ ಕಾಮುಕ ದೃಷ್ಟಿ ಮತ್ತು ಹೆಣ್ಣಿನ ದುರ್ಬಲತೆ, ದೌರ್ಭಾಗ್ಯಗಳ ಸನ್ನಿವೇಶವು ಇಲ್ಲಿ ಪ್ರತಿಧ್ವನಿಸುತ್ತದೆ. ಆದರೂ ಶಂಬರಾಸುರ ಹೆಂಡತಿ ಮಾತನ್ನು ಕೇಳುವ ಸಹನೆ ಉಳ್ಳವನಾಗಿದ್ದಾನೆ. ಹೆಂಡತಿಯ ಹಿತವಚನಕ್ಕೆ ತಲೆಬಾಗಿ ಚೆಲುವಿನಲ್ಲಿ ನಿನಗಿಂತ ಉತ್ತಮ ಸ್ತ್ರೀಯರಿನ್ನುಂಟೆ ? ಎಂದು ಕೇಳುತ್ತಾನೆ ಮತ್ತು ತನ್ನ ಮನೆಯ ತೊತ್ತಾಗಿರಲೆಂದು ಹೇಳುತ್ತಾನೆ. ಹೆಣ್ಣಿಗೆ ಹೆಣ್ಣೆ ಶತ್ರು ಎಂಬ ಭಾವ ಸಂಪೂರ್ಣ ಮರೆಯಾಗುವ ಕನಕದಾಸರ

ಈ ಕಾವ್ಯದಲ್ಲಿ ಮಹಿಳಾ ಸಂವೇದನೆಗೊಂದು ಹೊಸ ವ್ಯಾಖ್ಯಾನ ತಂದಂತಿದೆ. ಹೆಂಗಸರ ನಡುವಿನ ಜಗಳಗಳು ದ್ವೇಷ ಅಸೂಯೆಗಳಿಗೆ ಇಲ್ಲಿ ಎಲ್ಲೂ ಜಾಗವಿಲ್ಲ. ಪರಸ್ಪರ ಸಹಾನುಭೂತಿ, ಸಹಾನು ವರ್ತನೆಗಳಿಂದ ಕಾವ್ಯದ ಸೊಬಗನ್ನು ಹೆಚ್ಚಿಸಿವೆ.

ಮೋಹನ ತರಂಗಿಣಿಯಲ್ಲಿ ಚಿತ್ರಲೇಖೆಯ ಪಾತ್ರ ಬಹು ವಿಶಿಷ್ಟವಾದುದು. ಚಿತ್ರಲೇಖೆ ಕುಂಭಾಂಡನ ಮಗಳು. ವಿದ್ಯಾವಂತೆ, ಚಿತ್ರಕಲಾವಿದೆ, ಗುಣವಂತೆ, ಬಹುಮುಖ ಪ್ರತಿಭಾವಂತೆ. ಕುಂಭಾಂಡ ಬಾಣನ ಮಂತ್ರಿ. ಅರಸನ ಮಗಳಾದರೂ ಉಷೆಗೆ ದೊರೆತನದ ಅಹಂಕಾರವಿಲ್ಲ. ಚಿತ್ರಲೇಖೆಯೆಂದರೆ ಅವಳಿಗೆ ಅಚ್ಚುಮೆಚ್ಚು. ಒಡಹುಟ್ಟಿದ ಸಹೋದರಿಯಂತೆ. ಗೆಳತಿ ಉಷೆಗಾಗಿ ಚಿತ್ರಲೇಖೆ ಎಂತಹ ಸಾಹಸವನ್ನು ಮಾಡಬಲ್ಲಳು. ಉಷೆ ತನ್ನ ಕನಸಿನಲ್ಲಿ ನೋಡಿದ ರಾಜಕುಮಾರನ ಭಾವಚಿತ್ರ ತರಲು ಇಡೀ ಬ್ರಹ್ಮಾಂಕುರವನ್ನು ಒಂದು ರಾತ್ರಿಯಲ್ಲಿ ಸುತ್ತಿ ಹಲವು ಚಿತ್ರಗಳನ್ನು ತರುತ್ತಾಳೆ ಉಷಾ-ಅನಿರುದ್ಧರನ್ನು ಸೇರಿಸುವಲ್ಲಿ ಅವಳದ್ದೆ ಮುಖ್ಯ ಪಾತ್ರ.

ಉಷಾ-ಅನಿರುದ್ಧರಿಗೆ ಅವಳ ಉಪಕೃತಿಯನ್ನು ಎಷ್ಟು ನೆನೆದರೂ ಸಾಲದು.

ಅತ್ತಿಗೆಯಹುದಕ್ಕನಹುದು ತಾಯಹುದಕ್ಕ
ಗುತ್ತಿಗೆಗಾತಿ ನೀನಹುದು
ಪತ್ತಿಗೆ ಪರಮಾನುಕೂಲೆ ಕೇಳೆಂದು ಕೈ
ಯೆತ್ತಿ ಕೊಂಡಾಡಿದ ಕುವರ॥

ತಮ್ಮ ಮಕ್ಕಳಿಗೆ 'ಚಿತ್ರಲೇಖೆ' ಎಂದೇ ಹೆಸರಿಡಬೇಕೆಂದು ಪ್ರೇಮಿಗಳಿಬ್ಬರೂ ತೀರ್ಮಾನಿಸುತ್ತಾರೆ. ಚಿತ್ರಲೇಖೆಯ ಧೈರ್ಯ, ಸಾಹಸ ಎಂತಹವರನ್ನೂ ಮೆಚ್ಚಿಸುವಂತದ್ದು. ಅಡಿಗಡಿಗೂ ಅವಳು ಪ್ರೇಮಿಗಳಿಗೆ ಅನುಕೂಲೆಯಾಗಿ ಬರುತ್ತಾಳೆ. ನಿನ್ನ ಋಣವನ್ನು ಎಷ್ಟು ಜನ್ಮದಲ್ಲಿ ತೀರಿಸುವೆನೊ' ಎಂಬ ಉಷೆಯ ಮಾತಿಗೆ ಚಿತ್ರಲೇಖೆ ಮೈಯನ್ನು ತುರಿಸಿದ ಕೈಗಳ ಋಣವನ್ನು ತೀರಿಸಬೇಕೆಂಬ ಶಾಸ್ತ್ರವಿದೆಯೇ ಎಂದು ತಮ್ಮಿಬ್ಬರ ಬಾಂಧವ್ಯವನ್ನು ನೆನೆಯುತ್ತಾಳೆ.

ಈ ಕಾವ್ಯದಲ್ಲಿ ಎಲ್ಲಾ ಹೆಂಗಸರನ್ನು ಸೌಂದರ್ಯದ ಗಣಿಯಾಗಿ ಕನಕದಾಸರು ಕಂಡಿದ್ದಾರೆ. ಸೌಂದರ್ಯದ ಪ್ರತೀಕವಾದ ರತಿಯ ವರ್ಣನೆಯಲ್ಲಿ

ಭಾಸಿಪ ರಂಭೆಯೂರ್ವಶಿ ಮೇನಕೆ ಮಂಜು
ಘೋಷೆ ತಿಲೋತ್ತಮೆ ಸಹಿತ
ಸಾಸಿರಗಣ್ಣನ ಪಟ್ಟಣದಬಲೆಯ
ರೀ ಸುಂದರಿಗೇನು ಸಾಟಿ॥ ೧೦ – ೮

ಸಿರಿ ಗಿರಿಜಾತೆ ಶಾರದೆ ಶಚಿ ಮುಖ್ಯರು
ಸರಿಯಲ್ಲವಿವಳಚ್ಚು ಬೇಟಿ
ಹರಿ ಹರ ವಿಧಿ ಪುರಂದರರು ಜೀವಾವಧಿ
ಸ್ಮರಿಸಲ್ಕೆ ಮೊಗವ ತೋಱುವಳೆ॥ ೧೦ – ೫

ಹೊಗಳಿದ್ದಾರೆ. ಅವಳನ್ನು ನೋಡುವುದೇ ಶಂಬರನ ಹಿಂದಿನ ಜನ್ಮದ ಪುಣ್ಯವೆಂದು ಹೇಳಿದ್ದಾರೆ.

ಕವಿಗೆ ಹೆಣ್ಣಿನ ಬಗ್ಗೆ ಕರುಣೆ ಇದ್ದಂತೆ ತೋರುತ್ತದೆ. ಚಿತ್ರಲೇಖೆಯ ಪಾತ್ರದ ಮೂಲಕ ಹೆಣ್ಣಿನಲ್ಲಿರುವ ಸಾಮರ್ಥ್ಯವನ್ನು ತೋರಿಸುವ ಪ್ರಯತ್ನ ಮಾಡಿದ್ದಾರೆ. ಹೆಣ್ಣೆಂದರೆ ಸೌಂದರ್ಯವೆನ್ನುವ ಪುರುಷ ಪ್ರಧಾನವಾದ ದೃಷ್ಟಿ ಹೆಚ್ಚು ಕೆಲಸ ಮಾಡಿದೆಯಾದರೂ ಅದೊಂದು ಕಾವ್ಯಕ್ಕಿರುವ ಮಿತಿ ಎನಿಸುವುದಿಲ್ಲ. ರಸಿಕತೆ ಶೃಂಗಾರದಲ್ಲಿ ಮುಳುಗಿದ ಕವಿಗೆ ಚೆಲುವೆಯ ತೋಳ ತೆಕ್ಕೆಯಲ್ಲಿ ಅರೆ ನಿಮಿಷ ಬಾಳಿದರೂ ಮುಕ್ತಿ ದೊರೆಯುತ್ತದೆ ಎನಿಸುತ್ತದೆ. ಅನಿರುದ್ಧನ ಮಾತು ಕನಕದಾಸರ ಅಂತರಂಗದ ಧ್ವನಿಯಾಗಿ ಬಂದಂತಿದೆ.

ಕೌಶಲ್ಯಯುತ ಸ್ತ್ರೀಯರನ್ನು ನಿಯೋಜಿಸಲಾದ ವಿವಿಧ ವೃತ್ತಿಗಳನ್ನು ಈ ಕಾವ್ಯವು ಹೇಳುತ್ತದೆ. ಅಂದರೆ ಸೂಕ್ಷ್ಮ ಕೆಲಸಗಳನ್ನು ಒಳಗೊಂಡ ವೃತ್ತಿಗಳಿಗೆ ಸ್ತ್ರೀಯೇ ಯೋಗ್ಯಳು ಎಂಬ ಅಂಶ ತಿಳಿಯುತ್ತದೆ. ಗಲಭೆಯನ್ನು ನಿಲ್ಲಿಸುವ ಕಟ್ಟಿಗೆ ಕಾಲೆಯರು, ಕೈವಾರಿಸುವ ತೊಂಡೊಯ ಪಾರಕಿಯರು, ಸಂಬಳಿಗೆಗಾಲೆ, ಮೊಗವಾಡದವಳು, ಗಿಂಡಿಯವಳು, ಕಾಲಾಂಜಿಯವಳು, ಬೀಸಣಿಕೆಯವಳು, ಚಾಮರ ದಾಕೆ, ಕಠಾರಿಯವಳು, ಕನ್ನಡಿಯವಳು, ಹಾವುಗೆಯಾಕೆ, ಸಂಗೀತದಾಕೆ ಹೀಗೆ ಹತ್ತಾರು ಬಗೆಯ ವೃತ್ತಿ ಮಾಡುವ ಸ್ತ್ರೀಯರು ಗಮನ ಸೆಳೆಯುತ್ತಾರೆ. ಅಲ್ಲದೇ ಅಂದಿನ ಕಾಲದ ಸ್ತ್ರೀಯರ ಹಬ್ಬ ಹರಿದಿನಗಳು,

ವಿವಿಧ ಬಗೆಯ ಸ್ತ್ರೀಶಾಸ್ತ್ರಗಳು, ಉಡುಗೆ ತೊಡಿಗೆ, ಪುರುಷರೊಂದಿಗಿನ ಅವರ ಶೃಂಗಾರ ಚೇಷ್ಟೆಯ ವರ್ಣನೆಗಳು ಸ್ತ್ರೀ ವರ್ಣನೆಗೆ ಪ್ರತಿರೂಪದಂತಿದೆ.

ಆದರೂ ಗಂಡು – ಹೆಣ್ಣುಗಳ ವಾಸ್ತವ ಸಂಬಂಧದ ಇನ್ನೊಂದು ಮುಖ ಹೇಗಿತ್ತು ಎಂಬುದನ್ನು, ನಾವು ಈ ಕಾವ್ಯದ ಮೂಲಕ ಸೂಕ್ಷ್ಮವಾಗಿ ತಿಳಿಯಬಹುದು. ಜೀವನದ ಸಮೃದ್ಧತೆಯನ್ನು ಅನುಭವಿಸುವಲ್ಲಿ, ಅನುಭವಕ್ಕೆ ಬೇಕಾದ ಗಂಡುಗಳನ್ನು ಒಲೈಸುವುದರಲ್ಲಿ ಹೆಣ್ಣುಗಳ ನಡುವಿನ ಸ್ಪರ್ಧೆಯು ಜಲ ಕ್ರೀಡೆಯಲ್ಲಿದೆ. ಸುಂದರ, ವೈಭವ, ಭೋಗದ ಅನುಭವವು ಅರಸನಿಗಾಗಿ ಇತ್ತೇ ಹೊರತು ಅವನನ್ನು ಅನುಸರಿಸಿದ ಹೆಣ್ಣುಗಳಿಗೆ ಅಲ್ಲ ' ರಾಜಾ ಬಹುಜನ ವಲ್ಲಭಾಃ' ಎಂಬ ಮಾತಿನಂತೆ ರಾಜ ಅನೇಕ ಸ್ತ್ರೀಯರನ್ನು ವರಿಸಬಹುದು. ಸವತಿ ಮತ್ಸರ, ರಾಣಿಯರ ಆತ್ಮಹತ್ಯೆಯಂತಹ ಘಟನೆಗಳು ನಮಗೆ ಇತಿಹಾಸದ ಪುಟಗಳಿಂದ ಉದಾಹರಣೆಯಾಗಿ ಸಿಗುತ್ತವೆ. ಇದರಿಂದ ರಾಜನ ದರ್ಪ, ಪ್ರಭುತ್ವ ಆತನ ರಾಣಿಯರ ಮೇಲಿತ್ತು ಎಂಬುದು ತಿಳಿಯುತ್ತದೆ. ಇನ್ನೊಂದು ಉದಾಹರಣೆ ನೀಡುವುದಾದರೆ, ತನ್ನನ್ನು ಒಲ್ಲದ ರತಿದೇವಿಯನ್ನು ದಾಸಿಯನ್ನಾಗಿ ಮಾಡಿದೆನೆನ್ನುವ ಮಹದೈಶ್ವರ್ಯದಲ್ಲಿ ಶಂಬರಾಸುರ ಬೀಗುತ್ತಿದ್ದನು. ಇದರಲ್ಲೂ ಕೂಡ ನಾವು ದರ್ಪ, ಪ್ರಭುತ್ವವನ್ನೇ ಕಾಣುತ್ತೇವೆ. ಭೋಗದ ಬದುಕಿನ ಚಿತ್ರ, ಸೂಳೆಗೇರಿಯ ವರ್ಣನೆ, ವೃದ್ಧ ವೇಶ್ಯೆಯರು ತಮ್ಮ ಮಕ್ಕಳಿಗೆ ಸೂಳೆನೀತಿಯನ್ನು ಬೋಧಿಸುತ್ತಿದ್ದುದು, ಜಲಕ್ರೀಡೆ, ಪಾಕಶಾಸ್ತ್ರ ವರ್ಣನೆಗಳು ಬದುಕಿನ ಅನಿವಾರ್ಯತೆ ಮತ್ತು ಸ್ತ್ರೀಯರ ಮನಸ್ಥಿತಿಯನ್ನು ಅರ್ಥ ಮಾಡಿಕೊಳ್ಳುವಂತೆ ಧ್ವನಿಸುತ್ತದೆ.

ಅಧ್ಯಾಯ ೫

ಮೋಹನ ತರಂಗಿಣಿಯಲ್ಲಿ ಅಭಿವ್ಯಕ್ತವಾಗಿರುವ ಸಾಂಸ್ಕೃತಿಕ ವಿಚಾರಗಳು : –

ಅ. ಧಾರ್ಮಿಕ ಸಮನ್ವಯ : –

ಕನಕದಾಸರು ಹುಟ್ಟಿನಿಂದ ಕುರುಬರಾದರೂ ವೈಷ್ಣವ ಭಕ್ತರು. ಆದರೂ ಅವರ ಮೇಲೆ ಸಮಕಾಲೀನ ದ್ವೈತಮತ, ಶೈವಮತಗಳ ಗಾಢವಾದ ಪ್ರಭಾವವಾದದ್ದನ್ನು ಕಾಣುತ್ತೇವೆ. ಇದು ಅವರ ಸರ್ವಧರ್ಮ ಸಮನ್ವಯ ದೃಷ್ಟಿಗೆ ಜೀವಂತ ನಿದರ್ಶನ. ಕನಕದಾಸರು ಮತ ದೃಷ್ಟಿಯಿಂದ ವೈಷ್ಣವ ಭಕ್ತರಾದರೂ, ತಮ್ಮ ಕೀರ್ತನೆಗಳಲ್ಲಿ ದ್ವೈತ ಮತದ ಪ್ರಭಾವಕ್ಕೆ ಒಳಗಾದದ್ದನ್ನು ಕಾಣುತ್ತೇವೆ. ಇನ್ನು ಕನಕದಾಸರ ಮೇಲೆ ಸಮಕಾಲೀನ ಶೈವ ಮತವೂ ಗಾಢವಾದ ಪ್ರಭಾವ ಬೀರಿತ್ತೆಂಬುದಕ್ಕೆ ' ಮೋಹನ ತರಂಗಿಣಿ' ಕಾವ್ಯವೇ ಸಾಕ್ಷಿ. ಮೋಹನ ತರಂಗಿಣಿಯಲ್ಲಿ ಶ್ರೀವೈಷ್ಣವ ಮತವನ್ನು ಎತ್ತಿ ಹಿಡಿದದ್ದು, ಪ್ರಾರಂಭದ ಸ್ತುತಿ ಪದ್ಯಗಳಿಂದ ಸ್ಪಷ್ಟವಾಗುತ್ತದೆಯಾದರೂ, ಬಾಣಾಸುರನ ಶಿವಪೂಜೆ ಹಾಗೂ ನಿಷ್ಠೆಗಳನ್ನು ವರ್ಣಿಸುವಲ್ಲಿ ಕನಕದಾಸರ ಮೇಲೆ ಶೈವಮತದ ಪ್ರಭಾವವಾಗಿದ್ದನ್ನೂ ಕಾಣುತ್ತೇವೆ. ಉಷೆಯ ಶಿವ ಪೂಜೆಯಲ್ಲಿ ಇದನ್ನು ಕಾಣಬಹುದು. ಶಿವ–ಕೇಶವರಲ್ಲಿ ಅಭೇದತ್ವವನ್ನು ಸ್ಥಾಪಿಸುವುದು ' ಮೋಹನ ತರಂಗಿಣಿಯ' ಮುಖ್ಯೋದ್ದೇಶ. ಆದ್ದರಿಂದ ಧಾರ್ಮಿಕ ಸಮನ್ವಯವನ್ನೇ ನಾವು ಕಾಣಬಹುದು. ಕನಕದಾಸರು ಸರ್ವಸಮನ್ವಯ ದೃಷ್ಟಿಯುಳ್ಳ ಹಿರಿಯ ಕವಿ. ಅವರು ದಾಸ ಪಂಥದ ಕೀರ್ತನಕಾರರಾದರೂ, ಸಂತ ಕವಿಗಳಾದರೂ ಎಲ್ಲ ಮತೀಯ ಬಂಧನಗಳನ್ನು ಹರಿದೊಗೆದು, ಸಾಮಾಜಿಕ ಕಟ್ಟು ನಿಟ್ಟುಗಳನ್ನು ಕತ್ತರಿಸಿ ಹಾಕಿ ಆಧ್ಯಾತ್ಮ ಸ್ಥಿತಿಯ ಮೇರು ಶಿಖರವನ್ನೇರಿದ ಸಂತ ಕವಿಗಳು.

ಕನಕದಾಸರು ಮೋಹನ ತರಂಗಿಣಿಯಲ್ಲಿ –

ಶ್ರೀಮದ್ಗುರುರಾಯ ದುರಿತವಿಜೇಯ ದು
ಷ್ಕಾಮ ವಿಚ್ಛೇದನಾಹ್ಲಾದ
ತಾಮಸಗುಣನಾಶ ಸಾತ್ವಿಕೋಲ್ಲಾಸಶ್ರೀ
ರಾಮಾನುಜಮುನಿ ಶರಣ॥ ೧ – ೨

ಕತ್ತಲೆಗೆ ಸೂರ್ಯನ ಜೊತೆಯಲ್ಲಿ ಆಟವೆ. ಗರುಡನ ಕೂಡ ಕಾರ್ಕೋಟಕ ಮೇಳವಿಸುತ್ತದೆಯೆ. ವಾದಿ ಸಂಪರ್ಕ ರಾಮಾನುಜರೊಡನೆ ತರ್ಕಕ್ಕೆ ನಿಲ್ಲುತ್ತದೆಯೆ ? ನಿಲ್ಲಲು ಅಸಾಧ್ಯ ಎಂದಿದ್ದಾರೆ. ವಿಶಿಷ್ಟಾದ್ವೈತ ಪರಂಪರೆಯ ತಾತಾಚಾರ್ಯರನ್ನು –

ಈ ರೀತಿಯ ಪೆಂಪುವಡೆದ ಸದ್ಗುರು ಕರ
ವಾರಿಜೋದ್ಭವ ಶಿಷ್ಯಜನರ
ಪ್ರೇರಿಸಿ ಚತುರ್ವಿಧ ಫಲವೀವ ತಾತಾ
ಚಾರಿಯರಡಿಗೆ ವಂದಿಸುವೆ॥ ೧ – ೪

ಎಂದಿದ್ದಾರೆ. ಈ ಆಧಾರಗಳಿಂದ ಕನಕದಾಸರು ಮೊದಲಿಗೆ ಅಂಗೀಕರಿಸಿದ ಧರ್ಮ ಶಕ್ತಿವಿಶಿಷ್ಟಾದ್ವೈತಧರ್ಮ ಎಂದು ಹೇಳಬಹುದಾಗಿದೆ. ತಾತಾಚಾರ್ಯರು ಎಂದರೆ ತಿರುಮಲೆ ತಾತಾಚಾರ್ಯರು. ಇವರು ಕೃಷ್ಣದೇವರಾಯನ ಆಸ್ಥಾನದಲ್ಲಿದ್ದರು. ಅಳಿಯ ರಾಮರಾಯನ ಗುರುಗಳಾಗಿದ್ದರು. ಅಳಿಯ ರಾಮರಾಯ ತಾತಾಚಾರ್ಯರನ್ನು ಎಷ್ಟೋ ಬಾರಿ ಸನ್ಮಾನಿಸಿದ್ದನು. ಮೋಹನ ತರಂಗಿಣಿಯಲ್ಲಿ ಶ್ರೀರಾಮಾನುಜ ಪಂಥದ ತಿಗುಳರ ವಿವರಗಳು ಸಾಕಷ್ಟು ಲಭಿಸುತ್ತವೆ. ವ್ಯಾಸರಾಯರ ಶಿಷ್ಯ ವಾದಿರಾಜರ ಸಂಪರ್ಕ ಕನಕದಾಸರಿಗೆ ಇದ್ದಿತ್ತು ಎನ್ನಲು –

ನಕ್ರಕಂಟಕವನುತ್ತರಿಸಿ ಗಜೇಂದ್ರನ
ವಕ್ತ್ರವ ತೀರ್ಕಣೆಗೈದ
ಚಕ್ರ ಪಾಣಿಯ ಕೂರ್ತು ಕೃತಿವೇಳು ತನಗೆ ತ್ರಿ
ವಿಕ್ರಮದಾಸಸ್ಯದಾಸ॥ ೨೩ – ೧

ಎನ್ನುವ ಮೋಹನ ತರಂಗಿಣಿಯ ಪದ್ಯದಲ್ಲಿ ಬರುವ ತ್ರಿವಿಕ್ರಮದಾಸನನ್ನು ಸೋದೆಯಲ್ಲಿ ಮೂರು ಬಾರಿ ಪ್ರತಿಷ್ಠಾಪಿಸಿದ ವಾದಿರಾಜರೆಂದು ಭಾವಿಸಬಹುದಾಗಿದೆ. ಆದ್ದರಿಂದ ಕನಕದಾಸರಿಗೂ ವಾದಿರಾಜರಿಗೂ ಸಂಪರ್ಕವಿದ್ದಿತ್ತೆಂದು ಭಾವಿಸಬಹುದಾಗಿದೆ.

ಬಾಣಾಸುರನು ಶಿವಪೂಜೆಯನ್ನು ಮಾಡುವಾಗ

ಶಿರದೆಡೆಯೊಳಗಿರ್ದ ಶಿವಲಿಂಗ ದೇವರ
ಪರಮವಸ್ತ್ರವ ಬಿಚ್ಚಿ ತೆಗೆದು
ವರ ರತ್ನಾಂಚಿತ ವೃಷಭ ಮುದ್ರೆಯನಿಟ್ಟು
ಕರಕಂಜದೊಳಗೆ ಸಾರ್ಚಿದನು॥ ೨೧ – ೨೨

ವಿಸ್ತರಣೆಯ್ದು ನೋಡುವರೆ ಬ್ರಹ್ಮಾಂಡ ಸ
ಮಸ್ತ ನಿನ್ನೊಳಗಡಗಿಹುದು
ಪ್ರಸ್ತವಿದೇನು ಕಾರಣ ಸ್ವಾಮಿ ನೀನೆನ್ನ
ಹಸ್ತಾಬ್ಜದೊಳಗೆ ಮಂಡಿಸಿದೆ॥ ೨೧ – ೨೪

ಎನ್ನುವ ಮಾತುಗಳು ಬರುತ್ತದೆ. ಈ ಸಂದರ್ಭದಲ್ಲಿ ಗಮನಿಸಬೇಕಾದ ಅಂಶವೆಂದರೆ ಇಷ್ಟಲಿಂಗವನ್ನು ಕರಸ್ಥಲ ದಲ್ಲಿಟ್ಟು ಪೂಜೆ ಮಾಡುವ ಸಂಪ್ರದಾಯ ಇದು ವೀರಶೈವ ಧರ್ಮಕ್ಕೆ ವಿಶಿಷ್ಟವಾದುದು.

ಕನಕದಾಸರು ಮೋಹನ ತರಂಗಿಣಿಯಲ್ಲಿ ಈಶ್ವರ ಮತ್ತು ಕೃಷ್ಣರ ಕಾಳಗ ನಡೆಯುವಾಗ ಕಾಲಭೈರವನು ಬಲರಾಮನನ್ನು ಕಂಡು –

ಜಾಣತನ ದೊಳ ಧ್ಯಾತ್ಮದ ನುಡಿ ನಿ
ರ್ವಾಣ ದೀಕ್ಷೆಯ ಮೋಕ್ಷವನು
ಕಾಣಬೇಕಾಯಿತಾದರೆ ಜಿನ್ನದೇವರ
ತಾಣಕ್ಕೆ ತಳರೆಂದ ನಗುತೆ॥ ೩೮ – ೬

ನೋಡಿದ ಜಿನ್ನ ಶಾಸ್ತ್ರವ ನಿನ್ನಿರ್ಗ್ರಂಥವ
ಮಾಡಿ ತೋಯುವೆನೆಂದೆನುತ
ಮಾಡಿದ ಹೊಂಬರಹದ ಸರಲುಗಳಿಂದೆ
ತೋಡಿದ ಬಲರಾಮನೆದೆಯ॥ ೨೮ – ೭

ಎನ್ನುವಲ್ಲಿ ಜೈನಧರ್ಮದ ಕುರಿತು ಮಾತನಾಡಿದ್ದಾರೆ. ಇದನ್ನೆಲ್ಲ ನೋಡಿದಾಗ ಕನಕದಾಸರು ವೈಯಕ್ತಿಕವಾಗಿ ಯಾವುದೇ ಧರ್ಮವನ್ನು ಅನುಸರಿಸಿದರೂ, ಎಲ್ಲ ಧರ್ಮಗಳನ್ನೂ ಗೌರವಿಸುತ್ತಿದ್ದರೆಂಬ ಅಂಶ ಎದ್ದು ಕಾಣುತ್ತದೆ. ಆದ್ದರಿಂದ ಮೋಹನ ತರಂಗಿಣಿ ಧರ್ಮ ಸಮನ್ವಯವನ್ನು ಸಾರುವ ಕಾವ್ಯವೆನ್ನಬಹುದು.

ಆ. ಉತ್ಸವಗಳು ಮತ್ತು ಕ್ರೀಡೆಗಳು : –

ದ್ವಾಪರದ ದ್ವಾರಾವತಿಯನ್ನು ಕಲಿಯುಗಕ್ಕೆ ತಂದ ಕನಕದಾಸರು ಮೋಹನ ತರಂಗಿಣಿಗೆ ಒಂದು ಶೋಭೆಯನ್ನು ತಂದಿದ್ದಾರೆ. ವಿಜಯನಗರ ಕಾಲದ ವಸಂತೋತ್ಸವ ವರ್ಣನೆ ಮತ್ತು ಆ ಸಂದರ್ಭದ ಓಕುಳಿಯನ್ನು ಗುರುತಿಸಬಹುದು. ಜಲಕ್ರೀಡೆ, ಉಯ್ಯಾಲೆ, ಕಂದು ಕಾದಾಟ ಮುಂತಾದವುಗಳನ್ನು ಕನಕದಾಸರು ವರ್ಣಿಸಿದ್ದಾರೆ. ಇವುಗಳಲ್ಲಿ ಕೆಲವನ್ನು ಜೂಜಿನಂತೆ ಆಡುತ್ತಿದ್ದರು. ಶೋಣಿತಪುರದ ಮನೆಯಲ್ಲೆಲ್ಲ ಲೆತ್ತ, ಪಗಡೆ, ಚದುರಂಗ, ಬೊಗರಿ, ಸೊಲ್ಲೆ, ಬಾರ, ಗುತ್ತದೊಪ್ಪಿ, ಸರಿ–ಬೆಸ ಮೊದಲಾದ ಜೂಜಾಟದಲ್ಲಿ ಸಂಪತ್ತನ್ನು ಸೂರೆ ಮಾಡುವ ಜೂಜುಗಾರರಿದ್ದರು. (೨೦–೨೫) ಪಗಡೆ, ಚದುರ್ರಂಗಗಳು ವ್ಯರ್ಥ ಕಾಲಹರಣ ಮಾಡುತ್ತವೆ ಎಂಬ ಭಾವನೆಗಳಿದ್ದವು. ಅಲ್ಲದೆ ಜೂಜಾಟದ ಪರಿಣಾಮವಾಗಿ ಕೆಲವೊಮ್ಮೆ ರಾಜಬೀದಿಯಲ್ಲಿ ಹೊಡೆದಾಟಗಳೂ ಆಗುತ್ತಿದ್ದವು. (೨೦–೨೬) ಜೂಜಿನ ಭಾಗವಾಗಿ ತೆಂಗಿನ ಕಾಯನ್ನು ತೂಗಿ ಬಿಡುತ್ತಿದ್ದರು. ಬಾಳೆಯ ಹಣ್ಣಿನ ಜೂಜು, ತೆಂಗಿನ ಕಾಯಿ ಜೂಜು, ಕಬ್ಬಿನ ಜೂಜು, ಕಬ್ಬನ್ನು ಗುದ್ದಿ ಒಡೆವ ಜೂಜು ಮುಂತಾದವು ಜನಪ್ರಿಯ ಜೂಜುಗಳಾಗಿದ್ದವು. ಚೌಕನೆಯ ಹಲಗೆಯ ಮುಂದೆ ಜೂಜಿಗಾಗಿ ಜನರು ಸೇರುತ್ತಿದ್ದರು.

ಜಲಕ್ರೀಡೆಯ ವರ್ಣನೆ ೧೪ ನೆಯ ಸಂಧಿಯಲ್ಲಿದೆ. ಈ ಉದ್ದೇಶಕ್ಕಾಗಿ ಕ್ರೀಡಾಕೊಳಗಳನ್ನು ನಿರ್ಮಿಸಿದ್ದರು. ಮಲ್ಲರಿಂದ ಕಾಳಗಗಳು ಸಾರ್ವಜನಿಕವಾಗಿ ನಡೆಯುತ್ತಿದ್ದವು. (೩ – ೩೩)

ಮೋಹನ ತರಂಗಿಣಿಯಲ್ಲಿ ವಸಂತೋತ್ಸವ ಮತ್ತು ಜಲಕ್ರೀಡೆಯ ವರ್ಣನೆ ಹೆಚ್ಚಾಗಿ ಮೂಡಿ ಬಂದಿರುವುದನ್ನು ಕಾಣುತ್ತೇವೆ. ಇದರಿಂದ ಅಲ್ಲಿನ ಜನ ಹೆಚ್ಚು ಮನರಂಜನಾ ಪ್ರಿಯರಾಗಿದ್ದ ಅಂಶ ಕಂಡು ಬರುತ್ತದೆ. ಅಲ್ಲದೇ ವಿಜಯನಗರ ಕಾಲದ ರಾಜ ಪ್ರತಿಷ್ಠೆಯನ್ನು ಗುರುತಿಸಬಹುದಾಗಿದೆ.

ಇ. ಊಟೋಪಚಾರಗಳು : –

ಪ್ರಾಚೀನ ಕಾಲದಲ್ಲಿ ಆಹಾರ, ಪಾನೀಯದ ವಿವರಗಳನ್ನು ನೀಡುವ ಶಾಸ್ತ್ರಕ್ಕೆ ಸೂಪ ಶಾಸ್ತ್ರವೆಂದು ಹೆಸರು. 'ಸೂಪ' ಎಂದರೆ ಉಪ್ಪು, ಹುಳಿ, ಖಾರಗಳಿಂದ ಸಿದ್ಧವಾದ ಬೇಳೆಯ ತೊವ್ವೆ ಎಂದರ್ಥ. ಕನ್ನಡದ ಹಲವು ಪ್ರಾಚೀನ ಕೃತಿಗಳಲ್ಲಿ ಅಡಿಗೆಯ ವಿಷಯವಾಗಿ ಸಾಕಷ್ಟು ಮಾಹಿತಿಗಳು ದೊರೆಯುತ್ತವೆ. ಊಟದ ಆರಂಭದಲ್ಲಿ ಸಿಹಿಯನ್ನು ಅಂತ್ಯದಲ್ಲಿ

ಹುಳಿಯನ್ನು ತಿಂದರೆ ಉತ್ತಮವೆಂದು ರೂಢಿಯಲ್ಲಿದೆ. ಇದಕ್ಕನುಗುಣವಾಗಿ ಆರಂಭದಲ್ಲಿ ಪಾಯಸ ಕೊನೆಯಲ್ಲಿ ಮಜ್ಜಿಗೆಯನ್ನು ಊಟದಲ್ಲಿ ಬಡಿಸುತ್ತಾರೆ. ಮೋಹನ ತರಂಗಿಣಿಯಲ್ಲಿ ಬ್ರಾಹ್ಮಣ ಭೋಜನ ವಿಧಾನವನ್ನು ಅತ್ಯಂತ ಸುಂದರವಾಗಿ ವರ್ಣಿಸಲಾಗಿದೆ. ಕನಕದಾಸರ ಪ್ರಕಾರ ದ್ವಾರಕೆಯ ಸತ್ರದ ಮನೆಗಳಲ್ಲಿ ಊಟ ಬಡಿಸುತ್ತಿದ್ದವರು ತಿಗುಳರು –

ಪರಮ ಸೌಖ್ಯವನಾಂತು ತಿಗುಳರು ಪಾತ್ರಾಭಿ
ಗರ ಪರಮಾನ್ನ ಮುಂತಾದ
ವರ ಸಣ್ಣಕ್ಕಿಯೋಗರ ತೊವ್ವೆ ಪಳದ್ಯವ
ತರತರದಲ್ಲಿ ಬಡ್ಡಿಸಿದರು॥ ೩ – ೫೧

ಊಟದ ಆರಂಭದಲ್ಲಿ ಬಾಳೆ ಎಲೆ ಹಾಕಿ ದೊನ್ನೆಯನ್ನಿಟ್ಟರು. ಪಾಯಸ, ತುಪ್ಪ ಸಣ್ಣಕ್ಕಿಯ ಅನ್ನ, ಬಾಳೆ, ಪಳ್ಳಟ್ಟು, ಜೇನು ಸಕ್ಕರೆ, ಹಾಲು ಫೇಣಿ, ಸುಬ್ಬಿನುಂಡೆ, ವಡೆ, ಗಾರಿಗೆ, ಹುಳಿ, ಸಾರು ಸೀಕರಣೆ, ಅಂಬೆಹಣ್ಣು ಬಡಿಸಿದ್ದರು. ಬ್ರಾಹ್ಮಣರು ಊಟದ ಆರಂಭದಲ್ಲಿ ತುಪ್ಪವನ್ನು ಬಡಿಸಿದ ಅನಂತರ ಆಪೋಶನವನ್ನು ತೆಗೆದುಕೊಂಡು ಊಟಕ್ಕೆ ಆರಂಭಿಸಿದರು.

ಮಲ್ಲಿಗೆಯರಳಂತೆ ಬಿಚ್ಚೋಗರ ಮೊಸ
ಮೊಳ್ಳೆಯ ಬಹಳು ಪ್ಪುಗಾಯಿ
ಫಲ್ಲಿಸಿ ಗಟ್ಟಿಯ ಕಟ್ಟಿದ ಪಿರಿಯರು
ಪುಲ್ಲಿಗೆಗಳು ತರತರಿಸೆ॥

ಎಂಬಲ್ಲಿ ಊಟ ಮಾಡುವ ಚಿತ್ರಣವಿದೆ. ಕೊನೆಯಲ್ಲಿ ನೀರು ಮಜ್ಜಿಗೆಯನ್ನು ಕುಡಿದರು. ಇಲ್ಲಿ ಕನಕದಾಸರು ನೀಡುವ ಊಟದ ವಿವರಗಳು ಬ್ರಾಹ್ಮಣರ ಮನೆಯದು.

'ಪತ್ರಾಭಿಘಾರ' ದ ಅನಂತರ ಆಪೋಶನ ತೆಗೆದುಕೊಳ್ಳುವುದು ಮುಂತಾದ ಪದ್ಧತಿಗಳು ಈಗಲೂ ಬಳಕೆಯಲ್ಲಿದೆ. ಊಟದ ಅನಂತರ ಕರ್ಪೂರ ಮಿಶ್ರಿತ ತಾಂಬೂಲ ಸೇವನೆ ಮಾಡುತ್ತಿದ್ದರು. (೩–೩೨ ರಿಂದ ೩೭) ಅಲ್ಲದೇ ಆಹಾರದಲ್ಲಿ ಬಳಸುವ ಮತ್ತು ಆ ಕಾಲದಲ್ಲಿ ಸೇವಿಸುತ್ತಿದ್ದ ಹಣ್ಣುಗಳ ಬಗ್ಗೆಯೂ ಉಲ್ಲೇಖಿಸಿದ್ದಾರೆ.

ತೆಂಗಾಯಿ ಪಲಸು ಕಿತ್ತಳೆ ಮಾವು ಮೊದಲ
ಭೃಂಗಾಯಿ ವಣ್ಗಳು ಸಹಿತ
ಹಿಂಗದೆ ಬಹು ಫಲಾದಿಗಳ ತೋಂತಿಗರು ಸಾ
ರಂಗಪಾಣಿಗೆ ಸಾರ್ಚಿಸಿದರು॥

ಬ್ರಾಹ್ಮಣರು ಭೋಜನವನ್ನು ಕುರಿತಾಗಿ ಕನಕದಾಸರು ತಿಳಿಹಾಸ್ಯದ ಮೂಲಕ ತಿಳಿಸಿದ್ದಾರೆ.

ರಸ ರಸಾಯನವ ಚಪ್ಪಿರಿದು ನೀರ್ಮಜ್ಜಿಗೆ
ಹಸಗೆಯ್ದಿ ರಲೀಂತಿದರು
ಪೊಸ ವಿಘ್ನರಾಜನ ಬಳಗವೆಂಬಂತೇಳೆ
ವಶವಲ್ಲದೆದ್ದರುತ್ತವದಿ॥

ಆದರೆ ಕನಕದಾಸರ ಮೋಹನ ತರಂಗಿಣಿಯಲ್ಲಿ ಎಲ್ಲಿಯೂ ಮಾಂಸಾಹಾರದ ಬಗೆಗೆ ಮಾಹಿತಿ ನೀಡಿಲ್ಲ. ಅನಿರುದ್ಧನು ಕಂಡ ಮಧುಪಾನ ಗೋಷ್ಠಿಯನ್ನು ಚಿತ್ರಿಸುವಾಗ ಕನಕದಾಸರು ನೀಡುವ ವಿವರಗಳು ಆ ಕಾಲದ ಮಧುಪಾನಿಗಳ ಚಿತ್ರವನ್ನು ಕಣ್ಮುಂದೆ ತರುತ್ತದೆ.

ಮನೆ ಸಾರಿಸಿ ರಂಗವಲ್ಲಿ ಇಟ್ಟು ಭಕ್ಷ್ಯ ಭೋಜ್ಯವನ್ನು ಸವಿದು ನೆನೆಯಕ್ಕಿ. ಕಡಲೆ. ಪಣ್ಯಾರ ಮುಂತಾದ ಪೂಜಾವಸ್ತುಗಳನ್ನು ತಂದಿಟ್ಟರು. ಕೊಡವನ್ನು ಅಕ್ಕಿ ರಾಶಿಯ ಮೇಲಿಟ್ಟು ಕೊರಳಿಗೆ ಬೇವಿನದಂಡೆಯನ್ನಿಟ್ಟು ಧೂಪದಾರಲೆ ಕೆಂಡವನ್ನು ಒಲಿದು ಸುಳಿಸಿದರು. ನಲ್ಲರು ನಲ್ಲೆಯರಿಗೆ, ಗೆಳೆಯರು ಕೆಳದಿಯರಿಗೆ ಕುಡಿಸಲು ಪ್ರಚೋದನೆ ನೀಡುತ್ತ (೧೮ – ೮೩)

ಸಂಡಿಗೆ ಸಂಬಾರಗಡಲೆ ಪ್ರಾಸಕ ಕುಕ್ಕು
ಟಾಂಡವನವಲಕ್ಕಿಗಳನು
ದುಂಡರಳ್ಗಡಲೆ ಭಕ್ಷ್ಯಗಳ ಬಡಿಸಿಕೊಳು
ತುಂಡರು ನೆಲೆ ಸೊಕ್ಕವನಕ॥

ಈ ಮೇಲೆ ವಿವರಿಸಿದ ಎಲ್ಲ ಊಟೋಪಚಾರ, ಮಧುಪಾನಗೋಷ್ಠಿಯ ವಿವರಗಳನ್ನು ವರ್ಣಿಸಿರುವ ರೀತಿ ಆ ಕಾಲದ ಜನ ಸಮುದಾಯದ ಸಹಜ ಚಿತ್ರಣವನ್ನೇ ನೀಡುವಂತೆ ಮೂಡಿ ಬಂದಿದೆ. ವನ ವಿಹಾರ ವರ್ಣನೆಯಲ್ಲಿಯೂ ಸಹ ಅವರು ಉಲ್ಲೇಖಿಸಿರುವ ನೀರುಳ್ಳಿ, ಕೊತ್ತುಂಬರಿ, ಕರಿಬೇವು ಸಹಿತ ವಿವರಗಳು ಜನ ಸಾಮಾನ್ಯರ ಆಹಾರ ವಿಹಾರಗಳ ಮೇಲೆ ಬೆಳಕು ಚೆಲ್ಲುತ್ತದೆ. ಇಂಥ ಜನಜೀವನದ ಯಥಾರ್ಥವಾದ ಚಿತ್ರಗಳನ್ನು ಕೊಡುವುದರ ಮೂಲಕ ಕನಕದಾಸರು ತಮ್ಮ ಸಾಮಾಜಿಕ ಪ್ರಜ್ಞೆಯನ್ನು ಪ್ರಕಟಿಸಿ ಅಭಿನಂದನೀಯರಾಗಿದ್ದಾರೆ.

ಈ. ಶಾಸ್ತ್ರ, ಸಂಪ್ರದಾಯ, ವೇಷಭೂಷಣಗಳು : –

ಮೋಹನ ತರಂಗಿಣಿ ಸಂಕೀರ್ಣ ಕಥೆಯನ್ನು ಒಳಗೊಂಡ ಕೃತಿ. ಭಿನ್ನ ಸಂಸ್ಕೃತಿಯ ನಡುವಣ ಘರ್ಷಣೆಯಂತೆ ಕಂಡು ಬಂದರೂ ಕಲ್ಯಾಣಕಾರಣವಾಗಿ ಅವು ಒಂದಾಗುತ್ತದೆ. ಅಲ್ಲಲ್ಲಿ ನಮ್ಮ ಸಾಂಪ್ರದಾಯಿಕ ರೂಢಿ ಪರಂಪರೆಗಳ ಚಿತ್ರಣವು ನಮ್ಮ ಕಣ್ಮುಂದೆ ನಿಲ್ಲುತ್ತದೆ. ಆ ಮೂಲಕ ನಮ್ಮ ಪ್ರಸ್ತುತ ಸಂಪ್ರದಾಯಗಳನ್ನು ಸಮೀಕರಿಸಬಹುದಾಗಿದೆ. ಅಲ್ಲಲ್ಲಿ ನಮ್ಮ ಕೌಟುಂಬಿಕ ಬದುಕಿನ ಚಿತ್ರಗಳು ಸಹಜವಾಗಿ ಮೂಡಿ ಬಂದಿದೆ.

ರತಿ–ಪ್ರದ್ಯುಮ್ನರ ವಿವಾಹದ ಸಂದರ್ಭದಲ್ಲಿ ಸಾಂಪ್ರದಾಯಿಕ ಮದುವೆಯ ಚಿತ್ರವೊಂದು ದೊರೆಯುತ್ತದೆ. ಎಣ್ಣೆ ಸ್ನಾನ, ಬಾಸಿಂಗ, ಹಣೆಗೆ ತಿಲಕ, ಕೆನ್ನೆಗೆ ಕಾಡಿಗೆ . ಆರತಿ ಎತ್ತುವುದು, ಕಳಸ ಕನ್ನಡಿ ಹೊತ್ತವರು, ಸೋಬಾನೆ ಹಾಡು, ತೆರೆ ಹಿಡಿಯುವುದು, ಮೆಟ್ಟಕ್ಕಿ ಮೇಲೆ ನಿಲ್ಲಿಸಿ ಮಂಗಳಾಷ್ಟಕ ಹೇಳುವುದು, ಅಗ್ನಿ ಸಾಕ್ಷಿಯಾಗಿ ಧಾರೆ ಎರೆಯುವುದು, ಮದುಮಕ್ಕಳಿಂದ ದಾನ, ಗೃಹಪ್ರವೇಶ, ಐದು ದಿನದ ವಿವಾಹ ಇತ್ಯಾದಿ ಮದುವೆಯ ವಿವರಗಳು ಬಂದಿವೆ. ಕನಕದಾಸರು ನೀಡುವ ಈ ವರ್ಣನೆ ಬ್ರಾಹ್ಮಣರ ಮದುವೆಯ ವಿವರದಂತೆ ಕಾಣುತ್ತದೆ.

ಗೃಹಿಣಿಗೆ ಮಕ್ಕಳೇ ಸೌಭಾಗ್ಯವೆಂಬ ಸಾಂಪ್ರದಾಯಿಕ ಮೌಲ್ಯ ಇಲ್ಲಿ ಕ್ರಿಯಾಶೀಲವಾಗಿದೆ. "ಮಕ್ಕಳನ್ನು ಪಡೆಯದ ಮಡದಿ ಸಂಸಾರ ದುಃಖದ ಮಡುವಿನಂತೆ" (೧೨–೨) ಎಂಬ ವ್ಯಥೆ ಕಾವ್ಯದಲ್ಲಿದೆ. ತಮ್ಮ ಇಷ್ಟಾನುಸಾರ ಮಗುವಾದರೆ ಹರಕೆಯನ್ನು ತೀರಿಸುತ್ತಿದ್ದರು. ಗರ್ಭಿಣಿ ಸ್ತ್ರೀಗೆ ಹೆರಿಗೆಯ ದಿನಗಳು ಹತ್ತಿರ ಬಂದಂತೆ ಆತಂಕ

ಹೆಚ್ಚುವುದು. ಹೀಗಾಗಿ ಬಂಧುಗಳು ಸಮೀಪದಲ್ಲಿಯೇ ಇರುವರು. ಹೆರಿಗೆ ಮಾಡಿಸಲು ಬೇಕಾದ ಸೂಲಗಿತ್ತಿ, ಜಾತಕ ಬರೆಯುವ ಪುರೋಹಿತರು ಸಮೀಪದಲ್ಲಿಯೇ ಇರುತ್ತಿದ್ದರು. ಹೆರಿಗೆ ಮನೆಯು ದುಷ್ಟಶಕ್ತಿಗಳ ಪ್ರಭಾವಕ್ಕೆ ಒಳಗಾಗದಿರಲಿ ಎಂದು ಸುತ್ತಿನುಂಗುರ, ಮದ್ದುಮಣಿ ಯಂತ್ರಗಳನ್ನು ತಂದು ಕಟ್ಟುತ್ತಿದ್ದರು (೧೭-೧೮)

ಅನಿರುದ್ಧನ ಜನನ ಸಂದರ್ಭವನ್ನು ಗಮನಿಸಿದಾಗಿ ಗರ್ಭಿಣಿಯಾಗಿ ಒಂಬತ್ತು ತಿಂಗಳು ತುಂಬಿದ ರತಿದೇವಿ ಮಂಚದ ಮೇಲೆ ಮಲಗಿದಳು. ಆಗಿನ ಚಟುವಟಿಕೆಗಳು –

ಮುತ್ತಿನ ಮುಡಿಯ ವಿಲಾಸಿನಿಯರು ಸೂಲ
ಗಿತ್ತಿಯ ಕರೆ ಪುರೋಹಿತ
ಸುತ್ತಿನುಂಗುರ ಮದ್ದು ಮಣಿಮಂತ್ರಗಳ ತಂದು
ತೆತ್ತಿಸಿದರು ಕಾಲ್ದೆಸೆಯ॥ (೧೨-೧೩)

ಜಗತ್ತನ್ನು ಕಾಪಾಡುವ ಕೃಷ್ಣನ ಮೊಮ್ಮಗನ ರಕ್ಷಣೆಗಾಗಿ ಸುತ್ತಿನುಂಗರ ಮದ್ದು ಮಣಿ ಮಂತ್ರಗಳು ಎನ್ನುವುದನ್ನು ಗಮನಿಸಬೇಕು. ಸೂಲಗಿತ್ತಿಯರು ಬಂದು ಗಂಡು ಕೂಸಾಯಿತೆಂದರು. ಗೋಮಯದಿಂದ ಸಾರಿಸಿದ ಮೊರದಲ್ಲಿ ಮಗುವನ್ನು ಹಾಕಿದರು. ಹೊಕ್ಕುಳ ಬಳ್ಳಿಯನ್ನು ಕೊಯ್ದರು. ಅದನ್ನು ಮೊಗೆಗೆ ಹಾಕಿ ಹೂತರು. ಪುತ್ರೋತ್ಸವವಾಗಲು ಸೆರೆಮನೆಗಳನ್ನು ತೊಳೆದರು. ಮುಂದೆ ತೊಟ್ಟಿಲ ಶಾಸ್ತ್ರದ ವಿವರಗಳು ಹೀಗೆ ಬರುತ್ತವೆ. ಎಣ್ಣೆ, ಅರಿಶಿನ ಕೊಟ್ಟರು. ಹನ್ನೆರಡನೆಯ ದಿನ ತೊಟ್ಟಿಲಿಗೆ ಹಾಕುವೆವೆಂದು ಕೈಕೊಂಡರು. ಮೇಲು ಹಲಗೆಯ ಕೊಂಡಿಗಳಿಗೆ ಸರಪಳಿಗಳನ್ನಿಟ್ಟರು. ಮಗುವನ್ನು ತೊಟ್ಟಿಲಿಗೆ ಹಾಕಿ ಜೋಗುಳವನ್ನು ಹಾಡಿದರು. ಹಾಲುಣ್ಣುವಾಗ ಹಾಲು ಮಗುವಿನ ನೆತ್ತಿಗೇರಲು ರತಿ ಉಸಿರೂದುತ್ತ ಬೆಚ್ಚಿದಳು. ಮಗುವಿನ ಬೃಹದ್ಬೀಜಕ್ಕೆ ಮುತ್ತನಿಕ್ಕುವಳು. ತಾಯಿಯಾದವಳು ಮಗುವಿನ ಬೃಹದ್ಬೀಜಕ್ಕೆ ಮುತ್ತಿಕ್ಕಿ ಸಂತೋಷ ಪಡುವುದನ್ನು ಕನಕದಾಸರು ಮಾತ್ರ ಹೇಳಬಲ್ಲರು.

ಶ್ರೀಕೃಷ್ಣನ ಸೂಚನೆಯಂತೆ ಬಲರಾಮನು ಕಾಮ-ರತಿಯರ ಗೃಹಪ್ರವೇಶದ ಸಂದರ್ಭದಲ್ಲಿ ಹರಿಯಾಣ. ತಳಿಗೆ, ತಂಬಿಗೆ. ಗಿಂಡಿ. ಗಿಣ್ಣಿಲು. ಪುತ್ಥಳಿಯ ದೀವಿಗೆಗಂಬ. ಬುಜ್ಜಣಿಗೆ. ಕೊಡಪಾನ. ಕೊಪ್ಪರಿಗೆ. ಚಿನ್ನದಣಸಿನ ಪಲ್ಲಕ್ಕಿ. ನಲ್ಕುಂಚ. ಕಾಳಂಜಿಗಳ ಜೊತೆಗೆ ಪೆಣ್ಮಾಣಿಕಗಡಣವನ್ನು ಉಡುಗೊರೆಯಾಗಿ ನೀಡಿದನು. ಅಲ್ಲದೆ –

ದಂತಿ ಘೋಟಕ ಧೇನು ಮಹಿಷಿವತ್ಸಂಗಳ
ನಿಂತಿರಿಸಿದನು ಸಾಲ್ಗೊಳಸಿ॥ ೧೫ – ೨೨

ಮದುವೆ ಮನೆಯ ಬಿಡದಿಯಲ್ಲಿ ಜೋಡಿಸುವ ದಿನ ಬಳಕೆಗೆ ಬೇಕಾದ ಪಾತ್ರೆ ಪಡಗಗಳ ನೆನಪನ್ನು ತರುತ್ತದೆ. ಇನ್ನು ಬಾಣಂತನ ಮುಗಿದ ಮೇಲೆ ಕರೆವ ಎಮ್ಮೆಯನ್ನು ಕೊಡುವುದುಂಟು ಇದೂ ಕೂಡ ಸಹಜವಾಗಿ ಮೂಡಿ ಬಂದಿದೆ. ಈ ಮೇಲಿನ ಎಲ್ಲ ಸಂಪ್ರದಾಯ ವಿವರಣೆಗಳು ಜನಪದ ಹಾಡಾದ

ತೊಟ್ಟಿಲ ಹೊತ್ತುಕೊಂಡು ತವರುಬಣ್ಣ ಉಟ್ಟುಕೊಂಡು
ಅಪ್ಪ ಕೊಟ್ಟೆಮ್ಮೆ ಹೊಡಕೊಂಡು। ತಂಗ್ಯಮ್ಮ
ತಿಟ್ಹತ್ತಿ ತಿರುಗಿ ನೋಡ್ಯಾಳ॥

ಎಂಬುದನ್ನು ನೆನಪಿಗೆ ತರುತ್ತದೆ.

ಮೋಹನ ತರಂಗಿಣಿಯಲ್ಲಿ ಅಲ್ಲಲ್ಲಿ ಕೌಟುಂಬಿಕ ಬದುಕಿನ ಚಿತ್ರಗಳು ಬಂದಿವೆ. ಅನಿರುದ್ಧನ ಬೇಟೆಯ ಸಂದರ್ಭದಲ್ಲಿ ಬೇಡ ಹೆಣ್ಣುಗಳು ನೀಡುವ ಆತಿಥ್ಯವೂ ಕೂಡ ನಮ್ಮ ಪಾರಂಪರಿಕ ಸಂಪ್ರಾದಾಯವನ್ನೇ ನೆನಪಿಸುತ್ತದೆ.

ಬಿದಿರಕ್ಕಿಯನಿ ಜೇನುತುಪ್ಪ ಕರ್ಜೂರ ದ್ರಾಕ್ಷಿ
ಬದರಿ ಮುಂತಾದ ಸತ್ಫಲವ
ಉದುರಿದ ಕಳವಣ್ಣ ಪೊಟ್ಟಣಗಳ ತಂದು
ಇದಿರಿಕ್ಕಿದರು ಮೇಲ್ಮೆಲೆ॥ ೧೭ – ೩೩

ಉ. ವೇಷಭೂಷಣಗಳು :–

ಉಷಾದೇವಿಯ ಶೃಂಗಾರದ ಚಿತ್ರಣದಿಂದ ಆ ಕಾಲದ ಸ್ತ್ರೀಯರ ಚಿನ್ನದ ವ್ಯಾಮೋಹವನ್ನು ತಿಳಿಯಬಹುದು. ಉಷಾದೇವಿಗೆ ಸ್ನಾನ ಮಾಡಿಸಿ ತುರುಬನ್ನಿಕ್ಕಿ ಜಾತಿಮುತ್ತುಗಳನ್ನು ಕೇವಣಿಸಿದ್ಧ ರತ್ನಕೇತಕಿಯನ್ನು ಕಟ್ಟಿದರು. ಕಾಶ್ಮೀರಮಂಗಳ ತಿಲಕವನ್ನಿಟ್ಟರು. ಕಣ್ಣಿಗೆ ಕಾಡಿಗೆ ಹಚ್ಚಿದರು. ಮೂಗಿಗೆ ಮೂಕುತಿ. ಕರ್ಣದಲ್ಲಿ ಮಾಣಿಕ್ಯದೋಲೆ. ಗಂಡಯುಗಳದಲ್ಲಿ ಕರ್ಣಪತ್ರಿಕೆ. ಕಿವಿಗೆ ಕೊಪ್ಪು. ಮುಂಗೊರಲಿಗೆ ಚಿಂತಾಕು. ಕಂಠಮಾಲೆ. ಭುಜಪತ್ರಿಕೆ. ಭಾಪುರಿ. ಮಾಣಿಕದುಂಗರ. ಒಡ್ಯಾಣ. ಕಟಿಸೂತ್ರ.

ಕಾಂಚೀದಾಮ, ಕಾಲಂದುಗೆ, ಬೆರಳುಗಳಿಗೆ ಮಂಟಿಕೆ, ಕಾಲ್ನಿಗಳ ಹೀಗೆ ಆಪಾದಮಸ್ತಕ ಉಷಾದೇವಿಯನ್ನು ಆಭರಣಗಳಿಂದ ಅಲಂಕರಿಸಿದರು. ಇದು ರಾಜಕುಮಾರಿಯರ ಶೃಂಗಾರ ಎನ್ನುವುದನ್ನು ಮರೆಯುವಂತಿಲ್ಲವಾದರೂ ಅಭಿರುಚಿಯ ಕಾರಣವಾಗಿ ಆಭರಣಗಳ ಮಾದರಿಗಳು ಬೇರೆ ಬೇರೆಯಾಗಿರಬಹುದಾದರೂ ಇಂದಿಗೂ ಸಾಲಂಕೃತಕನ್ಯಾದಾನ ಮಾಡುವ ಸಂದರ್ಭಗಳಲ್ಲಿ ಈ ಬಗೆಯ ಆಭರಣಗಳನ್ನು ನೋಡಬಹುದು. ಮೈಮೇಲೆ ಎರಡು ಬಟ್ಟೆಗಳು ಇರಬೇಕು ಎಂಬುದು ಸಾಂಪ್ರದಾಯಿಕ ತಿಳುವಳಿಕೆ. ಪ್ರಾಚೀನ ಕಾಲದಿಂದಲೂ ವಸ್ತ್ರಾಲಂಕಾರದಲ್ಲಿ ಕನ್ನಡಿಗರು ತಮ್ಮ ವೈಶಿಷ್ಟ್ಯವನ್ನು ಉಳಿಸಿಕೊಂಡು ಬಂದಿದ್ದಾರೆ. ವಿಜಯನಗರ ಕಾಲದಲ್ಲಿ ನಿಲುವಂಗಿ (ಮಹಾಕೂರ್ಪಾಸ) ಕುಲಾವಿ (ರುಮಾಲು) ಪಾದಪರ್ಯಂತ ಚೊಲ್ಲಣ (ಷರಾಯಿ), ಉತ್ತರೀಯ, ನಡುಕಟ್ಟು ರಾಜೋಚಿತ ವೇಷಗಳಾಗಿದ್ದವು. ಮೋಹನ ತರಂಗಿಣಿಯಲ್ಲಿ " ಉತ್ತರೀಯ, ಅಂಗಿ, ಮೇಲಂಗಿಯನ್ನು ಕಳೆದು ಶುಭ್ರವಾದ ಬೈರ್ವಾಸದೊಂದಿಗೆ ಸ್ನಾನ ಮಾಡಿ ಬಂದರು" (೩- ೪೩) ಇಂತಹ ಬಟ್ಟೆಗಳಿಗೆ ಚಿತ್ರದ ಅಚ್ಚುಗಳನ್ನು ಒತ್ತುವ ಚಿತ್ರಗೆಲಸಿ ಚಿಪ್ಪಿಗರ ಕೇರಿಗಳು ನಗರದಲ್ಲಿತ್ತು. (೩-೨೧) ರಾಜರಾಣಿಯರು ಚಿನ್ನ ಬೆಳ್ಳಿಗಳ ಬೆಲೆಬಾಳುವ ಹಾವುಗೆಗಳನ್ನು ಮೆಟ್ಟುತ್ತಿದ್ದರು. (೪-೧೫) ಪುರುಷ ಮಹಿಳೆಯರಿಬ್ಬರೂ ಕಾಲಿಗೆ ಆಭರಣವನ್ನು ಧರಿಸುತ್ತಿದ್ದರು. ಮಹಿಳೆಯರ ಆಭರಣಗಳಲ್ಲಿ ಹಲವು ವೈವಿಧ್ಯಗಳಿದ್ದವು. ವಿಶೇಷವಾಗಿ ಪುರುಷರು ಪೆಂಡೆಯ, ಗೆಜ್ಜೆಯನ್ನು ಧರಿಸುತ್ತಿದ್ದ ಮಾಹಿತಿಯಿದೆ. ದ್ವಾರಕಾನಗರದಲ್ಲಿ ತಿರುಗಾಡುತ್ತಿದ್ದ ಮಾಂಡಲಿಕರ ಕಾಲಿನಲ್ಲಿ ಕಾಲುಗಡಗ, ಕಾಲಂದುಗೆ ಇತ್ತೆಂದು ಮೋಹನ ತರಂಗಿಣಿಯಲ್ಲಿದೆ (೩-೬೧) ಇವೆಲ್ಲವುಗಳು ಜನಸಾಮಾನ್ಯರ ವೇಷಭೂಷಣಗಳನ್ನು ಚಿತ್ರಿಸುತ್ತದೆ.

ಕನಕದಾಸರ ವರ್ಣನೆಗಳಲ್ಲಿ ಬ್ರಾಹ್ಮಣರ ವೇಷಭೂಷಣದ ವಿವರಗಳಿವೆ. "ಕಿರುವಸ್ತ್ರ, ಉತ್ತರೀಯ, ಮೇಲುಬಟ್ಟೆಗಳನ್ನು ಸಡಿಲಿಸಿ ಸೊಗಸಾದ ವಸ್ತ್ರವನ್ನು ತಲೆಗೆ ಸುತ್ತಿ, ರೇಶಿಮೆ ಬಟ್ಟೆಯ ತಲೆಹೊದಿಕೆಯನ್ನು ಮಾಡಿದ ಬ್ರಾಹ್ಮಣರು ಸಾಲು ಸಾಲಾಗಿ ಸೇರಿದರು" (೩-೪೯) ಎಂದಿದೆ. ಪಟ್ಟೆನಾಮದ ನಡುವೆ ಕೆಂಪಾದ ತಿರುಚೂರ್ಣ ಹಚ್ಚುವ ರಾಮಾನುಜ ಅನುಯಾಯಿಗಳು, ಗೋಪಿಚಂದನ ನಾಮಶಂಖ, ಚಕ್ರ ಇತ್ಯಾದಿ ಐದು ಮುದ್ರೆಗಳನ್ನು ಹಾಕುವ ಮಾಧ್ವರು, ವಿಭೂತಿ, ಗಂಧಾಕ್ಷತೆ ಧರಿಸುವ ಶಾಂಕರ ಮತಾನುಯಾಯಿಗಳು ಇಲ್ಲಿದ್ದಂತೆ ತೋರುತ್ತದೆ. ಈ ಎಲ್ಲ ವಿವರಗಳನ್ನು ನೋಡಿದರೆ ಅಗ್ರಹಾರದ ಕಲ್ಪನೆ ಬರುತ್ತದೆ. ರಾಜರು ಪುತ್ರೋತ್ಸವ, ಜಾತಕಕರ್ಮದಂತಹ ಸಂದರ್ಭದಲ್ಲಿ ಬ್ರಾಹ್ಮಣರಿಗೆ ವಿಶೇಷವಾಗಿ ದಾನ ಮಾಡುತ್ತಿದ್ದರು. ಇಂತಹ ಒಂದು ಸಂದರ್ಭದಲ್ಲಿ ವಸ್ತ್ರಾಭರಣ ನೀಡಿದ್ದರ ಬಗೆಗೆ

ಉಲ್ಲೇಖವಿದೆ (೧೩-೨೪-೩೩) ದೇವಾಲಯದಲ್ಲಿ ನಡೆಯುತ್ತಿದ್ದ ಪೂಜೆಗಳಲ್ಲಿ ಏಕಾರತಿ, ಪಂಚಾರತಿ, ನೀಲಾಂಜನ, ಮಹಾರತಿ ಮುಂತಾದ ವಿವಿಧ ರೀತಿಯ ಆರತಿಯನ್ನು ಎತ್ತುತ್ತಿದ್ದರು. ಸನ್ಯಾಸಿಗಳು ಮಠಗಳಲ್ಲಿ ಇರುತ್ತಿದ್ದು ಅವರು ಕಾಷಾಯ ವಸ್ತ್ರವನ್ನು ಧರಿಸುತ್ತಿದ್ದರು. (೩-೬೦, ೬-೨೭,೩೦)

ಊ. ಶಕುನ, ನಂಬಿಕೆಗಳು :-

ಇಂದು ನಾವು ಕಾಣಬಹುದಾದ ಅಥವಾ ನಂಬುವ ಶಕುನಗಳ ಪ್ರಸ್ತಾಪಗಳೂ ಕಾವ್ಯದಲ್ಲಿ ಬಂದಿವೆ. ಶಕುನಗಳು ಎಲ್ಲ ಕಾಲಕ್ಕೂ ತಮ್ಮ ಪ್ರಭಾವವನ್ನು ಉಳಿಸಿಕೊಂಡು ಬಂದಿವೆ. ಎಡಬಲದಲ್ಲಿ ಪೌಜಿಕ್ಕಿದ ಚಂದ್ರ ವಸಂತ ಮಂದಾನಿಲಾದಿಗಳೊಡನೆ ಶಿವನೊಡಲನ್ನು ದಿಮ್ಮೇಳೆ ಹೊಯ್ವೆನೆಂದು ಮನ್ಮಥ ನಡೆದ. ಆಗ

ತೋಱಿ ವಾಯಸನೆದಗಡೆಯಡದಿಂದ
ಹಾಱಿತು ಹಂಗ ದಕ್ಷಿಣಕೆ
ದೂಱಿತು ಬಲದ ಭಾಗದೆ ಪಲ್ಲಿ ಮುಂಗಟ್ಟಿ
ಪಾಱಿತು ವಾಸುಗಿವಕ್ಕಿ॥ ೬ – ೨೫

ಇವು ಬಾಹ್ಯ ಶಕುನಗಳಾದರೆ. ಮನ್ಮಥನಿಗೆ ದೈಹಿಕವಾಗಿಯೂ ಶಕುನಗಳಾಗುತ್ತದೆ.

ಎಡದೋಳು ಹಾಱಿತು ವಾಮಲೋಚನ ಬೆಂ
ಬಿಡದಲುಗಿತು ಮುಂದೆ ನೋಡೆ
ಗಿಡುವೆದ್ದು ಪರಿದುದು ಮನ್ಮಥ ಬಲಗೂಡಿ
ನಡೆವಾಗಲೇನ ಹೇಳುವೆನು॥ ೬ – ೨೭

ಶಕುನಗಳಿಗೆ ಹೆದರಿ ಹಿಂತಿರುಗಿದರೆ ಮಾನಭಂಗ. ಈಶ್ವರನನ್ನು ಎದುರಿಸುವೆನೆಂದು ಮನ್ಮಥ ಮುಂದೆ ನಡೆದನು. ಲೋಕಕಲ್ಯಾಣಕ್ಕಾಗಿ ಹೊರಟಾತನು ಶಕುನಗಳಿಗೆ ಹೆದರಿದರೆ ಹೇಗೆ ? ಈ ಬಗೆಯ ಅನೇಕ ಶಕುನಗಳು ಮೋಹನ ತರಂಗಿಣಿಯಲ್ಲಿ ದಾಖಲಾಗಿವೆ.

ಜನರ ನಂಬಿಕೆಗಳಾದ ಭವಿಷ್ಯ, ದೃಷ್ಟಿ ಬೊಟ್ಟು, ರಕ್ಷಾಬೊಟ್ಟುಗಳ ಉಲ್ಲೇಖವೂ ಮೋಹನ ತರಂಗಿಣಿಯಲ್ಲಿ ಬರುತ್ತದೆ. ಮೀನಿನ ಗರ್ಭದಲ್ಲಿ ಹುಟ್ಟಿಬಂದ

ಮನ್ಮಥನಿಗೆ ರತಿ ವಿಭೂತಿಯನ್ನು ಮಂತ್ರಿಸಿ, ದೃಷ್ಟಿ ಬೊಟ್ಟನ್ನಿಟ್ಟು, ಕಣ್ಣಿಗೆ ಕಾಡಿಗೆಯನ್ನು ಹಚ್ಚುತ್ತಾಳೆ. (೧೧-೪೩)

ಉಷಾದೇವಿಯ ಶೃಂಗಾರದಲ್ಲಿ ಗಾಡಿಕಾರ್ತಿಯರು ಉಷೆ ಮತ್ತು ಚಿತ್ರಲೇಖೆಯ ಲಾವಣ್ಯವನ್ನು ನೋಡಿ ರಕ್ಷೆಯ ಬೊಟ್ಟನ್ನಿಡುತ್ತಾರೆ. (೨೩-೫೫) ಕಂದರ್ಪ ಜನನದಲ್ಲಿ ರುಕ್ಮಿಣಿಗೆ ಭವಿಷ್ಯವಾಣಿ ಆಗುತ್ತದೆ.

ದರ್ಪಕಹರನಿಂದ ತನು ದಗ್ಧನಾದ ಕಂ
ದರ್ಪ ನಿನ್ನಯ ಬಸ್ರಿೞೊಳಗೆ
ಬರ್ಪನು ನಾ ಕೊಟ್ಟ ವರದೊಳು ತುಸುಮಾತ್ರ
ತಪ್ಪದು ಕೇಳಾಯತಾಕ್ಷಿ॥ (೪-೨೪)

ಈ ಮೊದಲಾದ ನಂಬಿಕೆಗಳು ಆಧುನಿಕ ಮನುಷ್ಯನ ಜೀವನದಲ್ಲೂ ಹಾಸುಹೊಕ್ಕಾಗಿರುವುದನ್ನು ಕಾಣುತ್ತೇವೆ.

ಅಧ್ಯಾಯ ೭

ಉಪಸಂಹಾರ

ಕನಕದಾಸರು ಸಾಮಾನ್ಯವಾಗಿ ಎಲ್ಲರೂ ಗುರುತಿಸಿರುವಂತೆ ಹರಿದಾಸರಲ್ಲಿ ಕವಿಗಳು: ಕವಿಗಳಲ್ಲಿ ಹರಿದಾಸರು ಎಂದು ಪ್ರಸಿದ್ಧರಾದವರು. ಸಮಕಾಲೀನ ದಾಸಶ್ರೇಷ್ಠರ ಎದುರಿನಲ್ಲಿ ತಮ್ಮತನವನ್ನು ಮೆರೆದು ಸ್ವತಃ ಸ್ಥಾನ ಗುರುತಿಸಿಕೊಂಡವರು. ಬಹುತೇಕ ಸಂತರ ಬದುಕಿಗೆ ಅಂಟಿಕೊಂಡಂತೆ ಕನಕದಾಸರ ಜೀವನದೊಂದಿಗೂ ಅನೇಕ ದಂತ ಕಥೆಗಳು. ಐತಿಹ್ಯಗಳು ಬೆರೆತುಕೊಂಡಿವೆ. ಕನಕದಾಸರ ಸಂಬಂಧವಾಗಿ ಇರುವ ಐತಿಹ್ಯಗಳನ್ನು ಪರಿಶೀಲಿಸಿದಾಗ ನಿಜಕ್ಕೂ ಅವು ಒಂದು ನೆಲೆಯಲ್ಲಿ ಅವರ ತೀಕ್ಷ್ಣಮತಿ. ಭಕ್ತಿಭಾವದ ಪರಾಕಾಷ್ಠೆಗಳನ್ನು ಎತ್ತಿ ತೋರಿಸುವಂತಹುಗಳಾಗಿವೆ. ನಮ್ಮ ದೇಶದ ಎಲ್ಲ ಸಂತರ ಒಳಗನ್ನೂ ಕಾಡಿದಂತೆ ಕನಕದಾಸರನ್ನೂ ಕಾಡಿದ ಸಮಸ್ಯೆ ಅಂದು ಆಚರಣೆಯಲ್ಲಿದ್ದ ಸಾಮಾಜಿಕ ಅಸಮಾನತೆ. ಒಬ್ಬ ಶೂದ್ರನು ಆ ಸಮಾಜದಲ್ಲಿ ಅನುಭವಿಸುತ್ತಿದ್ದ ಎಲ್ಲ ರೀತಿಯ ಕಿರುಕುಳದೊಂದಿಗೆ ವಿಶೇಷವಾಗಿ ಮಠದ ಮಡಿಯ ಪರಿಸರದಲ್ಲಿ ಜ್ಞಾನಿಯಾಗಿದ್ದೂ ಅವಜ್ಞೆಗೊಳಗಾದ, ಆಟಿಕೆಯ ವಸ್ತುವಾಗಬೇಕಾದ ಪರಿಸ್ಥಿತಿ ಅವರಿಗೊದಗಿತ್ತು. ಜೊತೆಗೆ ಚಿಕ್ಕಂದಿನಲ್ಲಿ ತಂದೆಯ ಅಧಿಕಾರದಿಂದ ವೈಭೋಗ ಜೀವನಕ್ಕೆ ಒಗ್ಗಿದ್ದ ಅವರು ಯುದ್ಧದಲ್ಲಿ ಪೆಟ್ಟು ತಿಂದು ಆ ಭೋಗ ಭಾಗ್ಯಗಳನ್ನೆಲ್ಲ ಬಿಟ್ಟು ದೈವೀಕೃಪೆಯನ್ನರಸಿ ಹರಿದಾಸರಾದರು. ಅಂದರೆ ಒಂದು ರೀತಿಯಲ್ಲಿ ಸಾಮಾಜಿಕ ಮೇಲುವರ್ಗದಿಂದ ಧುತ್ತನೆ ಜಾತಿಯ ಕೆಳವರ್ಗಕ್ಕೆ ಇಳಿದು ಮಾನಸಿಕ ಯಾತನೆಯ. ಅವಹೇಳನದ ದುರ್ಭರ ಪರಿಸ್ಥಿತಿಯನ್ನು ಎದುರಿಸುವುದು ಅವರಿಗೆ ಅನಿವಾರ್ಯವಾಯಿತು. ಅಂದಿನ ಸಾಮಾಜಿಕ ವ್ಯವಸ್ಥೆಯೊಂದಿಗಿನ ಅವರ ಬದ್ಧತೆಯಿಂದಾಗಿ ಅವುಗಳನ್ನು ನೇರವಾಗಿ ಅಭಿವ್ಯಕ್ತಿಸಲೂ ಆಗದೆ ಅದುಮಿಟ್ಟು ಸಹಿಸಿಕೊಳ್ಳಲೂ ಆಗದೆ ಪರಿತಪಿಸಿದ್ದಾರೆ. ಆದ್ದರಿಂದಲೇ ಅವರ ಕಾವ್ಯಗಳು ಸಾಂಕೇತಿಕತೆ, ಪೌರಾಣಿಕ ಹಿನ್ನೆಲೆಗಳಲ್ಲಿ ಅಭಿವ್ಯಕ್ತಿ ಪಡೆದಿರುವುದು ಕಂಡು ಬರುತ್ತದೆ. ಸಮಸ್ಯೆಗಳನ್ನು ವೈಯಕ್ತಿಕ ನೆಲೆಗಳಲ್ಲಿ ಎದುರಿಸಬೇಕಾದ ಅನಿವಾರ್ಯತೆಯ ಪರಿಣಾಮ ಇದು ಎನ್ನಬಹುದು. ಅವರ ಅನುಭವದ ತೀವ್ರತೆ ಅಭಿವ್ಯಕ್ತಿಯಲ್ಲೂ ಇಳಿದಿದೆ.

ಮಾತು ಮೊನಚಾಗಿದೆ ಮತ್ತು ಹೆಚ್ಚು ಹೆಚ್ಚು ಕಾವ್ಯಾತ್ಮಕತೆಯನ್ನು ಪಡೆದಿದೆ. ಕನಕದಾಸರ ಕಾವ್ಯಗಳಲ್ಲಿಯ ವಸ್ತು, ಪಾತ್ರಗಳು ಪೌರಾಣಿಕವಾದರೂ ಅವುಗಳ ನಿರ್ವಹಣೆಯಲ್ಲಿ ಪ್ರಸ್ತುತತೆಯಿದೆ. ಪ್ರಸ್ತುತ ನಿಬಂಧದ ರಚನೆಯ ವಸ್ತುವಾದ ಕನಕದಾಸರ

'ಮೋಹನ ತರಂಗಿಣಿ' ಕನಕದಾಸರ ಮೊದಲ ಕಾವ್ಯಕೃತಿಯೆಂಬುದು ವಿದ್ವಾಂಸರ ಅಭಿಪ್ರಾಯ. ಸಾಂಗತ್ಯ ಛಂದಸ್ಸಿನಲ್ಲಿ ರಚಿತವಾಗಿರುವ ಇದು ಅವರ ಕಾವ್ಯಗಳಲ್ಲಿಯೂ, ಗಾತ್ರದಲ್ಲಿಯೂ, ವರ್ಣನಾಕೌಶಲ್ಯದಲ್ಲಿಯೂ ಹಿರಿದಾಗಿದೆ ಎನ್ನಬಹುದು. ಹಾಡುಗಬ್ಬವಾದ ಸಾಂಗತ್ಯದ ಮೃದು ಮಧುರ ಪಲುಕುಗಳಲ್ಲಿ ಹರಿಯುತ್ತ ಸಾಗುವ ಈ ಕೃತಿಗೆ 'ಮೋಹನ ತರಂಗಿಣಿ' ಎಂಬುದು ಅನ್ವರ್ಥನಾಮವಾಗಿದೆ. ಪುರಾಣಗಳಿಂದ ಕತೆಯನ್ನು ಸ್ವೀಕರಿಸಿ ಅದನ್ನು ಒಂದು ರಸಭರಿತ ಶೃಂಗಾರ ಕಾವ್ಯವಾಗಿ ಮಾರ್ಪಡಿಸುವಲ್ಲಿ ಕನಕದಾಸರು ಯಶಸ್ವಿಯಾಗಿದ್ದಾರೆ. ಕಾವ್ಯ ವಸ್ತು ಮೋಹಕ ಶೃಂಗಾರ; ಅದನ್ನು ಹೇಳುತ್ತಿರುವುದು ತನ್ನ ಮಡದಿ ಸುಜ್ಞಾನವಧೂಟಿಗೆ ಆದ್ದರಿಂದ ಕವಿಗೆ ಯಾವ ರೀತಿಯಲ್ಲಿ ಮುಚ್ಚುಮರೆಯ ಅಗತ್ಯವೂ ಇಲ್ಲವಾಯಿತು! ಆಕೆಯೂ ಕೂಡ ಅಷ್ಟೇ ಉತ್ಸಾಹದಿಂದ 'ಮನ್ನಾಥ ಕೇಳು ಮೆಲ್ಲತೆಯ' ಎಂದು ಕಿವಿಗೊಟ್ಟಿರುವಳು ಕನಕದಾಸರು ಬಳಸಿರುವ ಈ ತಂತ್ರವೇ ಸತಿಪತಿಗಳ ಸರಸಸಲ್ಲಾಪದ ಹಿನ್ನೆಲೆಯಲ್ಲಿ ಕಾವ್ಯಕ್ಕೆ ಒಂದು ಶೃಂಗಾರದ ಚೌಕಟ್ಟನ್ನೊದಗಿಸಿದೆ. ಕಾವ್ಯದ ಕಥಾವಸ್ತುವನ್ನು

೧) ಕೃಷ್ಣ-ರುಕ್ಮಿಣಿಯರ ವೃತ್ತಾಂತ : ಕಾಮದಹನದ ಕಥೆ

೨) ಪ್ರದ್ಯುಮ್ನ – ರತಿಯರ ವೃತ್ತಾಂತ : ಶಂಬರಾಸುರ ವಧೆ ಮತ್ತು

೩) ಅನಿರುದ್ಧ-ಉಷೆಯರ ವೃತ್ತಾಂತ: ಬಾಣಾಸುರ ವಧೆ – ಹೀಗೆ ಮೂರು ನೆಲೆಗಳಲ್ಲಿ ಗುರುತಿಸಬಹುದು.

ಇಡೀ ಕಾವ್ಯವೇ ಈ ಮೂರು ಜೋಡಿಗಳ ಪ್ರಣಯ ಕಥೆ ಜೊತೆಗೆ ಮೂರು ವಧಾಪ್ರಸಂಗಗಳೂ ತೆಗೆದುಕೊಂಡು ಬಂದಿರುವ ಮೂರು ತಲೆಮಾರುಗಳ ಕಥೆಯಿದು. ಕೃಷ್ಣ ರುಕ್ಮಿಣಿ, ಪ್ರದ್ಯುಮ್ನ ರತಿ. ಅನಿರುದ್ಧ ಉಷೆ, ಶಂಬರಾಸುರ ಮತ್ತು ಬಾಣಾಸುರರು ಕಾವ್ಯದ ಪ್ರಮುಖ ಪಾತ್ರಗಳು ಕಾವ್ಯದ ನಾಯಕ ಕೃಷ್ಣ. ಇಡೀ ಕೃತಿಗಳಲ್ಲಿ ಎಲ್ಲ ಕಾರುಬಾರೂ ಕೃಷ್ಣನದೇ, ಎಲ್ಲವೂ ಅವನ ಲೀಲೆಗಳೇ, ಉಳಿದ ಪಾತ್ರಗಳು ಅವನು ಕುಣಿಸಿದಂತೆ ಕುಣಿಯುವ ಸೂತ್ರದ ಬೊಂಬೆಗಳು ಎಂಬ ಅಂಶ ಬರುವಂತೆ ಕತೆಯನ್ನು ಬೆಳೆಸಿದ್ದಾರೆ.

ಬಾಣಾಸುರ ಪ್ರತಿನಾಯಕನೆಂದು ಹೇಳಬಹುದು. ಅವನೂ ಕೂಡ ಅಪ್ರತಿಮ ಸಾಹಸಿ, ಶೂರ, ಅನನ್ಯ ಶಿವಭಕ್ತ. ಹಾಗಾಗಿ ಕೃಷ್ಣನಿಂದ ತನ್ನ ೯೯೮ ತೋಳುಗಳನ್ನು ಕಡಿಸಿಕೊಂಡ ಬಾಣಾಸುರನನ್ನು ಶಿವ ನೇರವಾಗಿ ಕೈಲಾಸಕ್ಕೆ ಕರೆದೊಯ್ಯುತ್ತಾನೆ. ಇದರಿಂದ ಕಾವ್ಯಕ್ಕೆ ಒಂದು ಮಂಗಳದ ತಿರುವು ಒದಗಿದ್ದು, ಉಷಾ-ಅನಿರುದ್ಧರ ಮದುವೆಯಿಂದ ಕಾವ್ಯ ಮುಕ್ತಾಯಗೊಂಡಿದೆ. ಈ ರೀತಿ ಕಥಾವಸ್ತುವು ಶೃಂಗಾರ, ಶೌರ್ಯ ಮತ್ತು

ದೈವಿಕವಾಗಿ ತೋರುತ್ತಾರೆ, ಇನ್ನೊಂದೆಡೆ ದೇವತೆಗಳು ಭೋಗದಿಂದ ಮಾನವರಾಗಿ ತೋರುತ್ತಾರೆ. ಇಂತಹ ಭಕ್ತ ಕವಿ ಕನಕದಾಸರ ಜೀವನ ಸಾರ್ಥಕವಾದುದು. ಯಾವ ಕುಲದಲ್ಲಿ ಹುಟ್ಟಿದರೂ ನಿಷ್ಠೆಯಿಂದ ನಡೆದರೆ ದೇವರ ಕೃಪೆ ಪಡೆಯಬಹುದೆನ್ನುವುದಕ್ಕೆ ಇದು ನಿದರ್ಶನವಾಗಿದೆ. ದಾಸರಾಗಿ, ಸಾಹಿತಿಗಳಾಗಿ, ಕವಿವರ್ಯರಾಗಿ, ಅನುಭಾವಿಗಳಾಗಿ ನಾಡಿನ ಜನತೆಗೆ ಮಾರ್ಗದರ್ಶನ ನೀಡಿದ್ದಾರೆ. ತಮ್ಮ ಉತ್ತಮ ಕೃತಿಗಳಿಂದ ಕನ್ನಡ ಸಾಹಿತ್ಯ ಭಂಡಾರವನ್ನು ಶ್ರೀಮಂತಗೊಳಿಸಿದ್ದಾರೆ.

ಆಧಾರ ಗ್ರಂಥಗಳು

೧) ಕನಕ ಸಾಹಿತ್ಯ ದರ್ಶನ ಸಂಪುಟ – ಮೋಹನ ತರಂಗಿಣಿ, ಸಂಪಾದಕರು – ಜಿ.ಜಿ.ಮಂಜುನಾಥನ್ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ – ೧೯೯೯

೨) ಕನಕ ಚಿಂತನ – ೨೦೦೯ – ೨೦೧೦ ಅಕ್ಷಯ ಶೆಟ್ಟಿ, ರಾಧಿಕಾ, ಡಾ.ಹಜರತ್ ನದಾಫ್, ಡಾ.ಬಿ.ಶಿವರಾಮ ಶೆಟ್ಟಿ. ಕನಕದಾಸ ಸಂಶೋಧನ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳ ಗಂಗೋತ್ರಿ

೩) ಕನಕದಾಸರ ಒಂದು ಅಧ್ಯಯನ, ಸಂಪಾದಕರು – ಡಾ.ಭಗವತಿ ಮತ್ತು ಡಾ.ಮೇಲಿನಮನಿ, ವಿದ್ಯಾನಿಧಿ ಪ್ರಕಾಶನ ೨೦೦೭.

೪) ಮಹಾತ್ಮ ಕನಕದಾಸ ಪ್ರಶಸ್ತಿ, ರಾಜ್ಯ ಸಮಿತಿ ಶ್ರೀ ಕನಕದಾಸರ ನಾಲ್ಕನೆಯ ಶತಮಾನೋತ್ಸವ.ರವೀಂದ್ರ ಕಲಾಕ್ಷೇತ್ರ, ಶ್ರೀ ಜಯಚಾಮರಾಜ ಒಡೆಯರ್ ರಸ್ತೆ, ಬೆಂಗಳೂರು.

೫) ಭಾರತೀಯ ಸಾಹಿತ್ಯ ನಿರ್ಮಾಪಕರು ಕನಕದಾಸ, ಟಿ.ಎನ್.ನಾಗರತ್ನ, ಸಾಹಿತ್ಯ ಅಕಾಡೆಮಿ ೨೦೦೦

೬) ದಾಸಶ್ರೇಷ್ಠ ಕನಕದಾಸ ಮೋಹನ ತರಂಗಿಣಿ, ಎಲ್ಲೆಸ್ಕೆ. ವಿದ್ಯಾನಿಧಿ ಪ್ರಕಾಶನ – ಗದಗ, ೨೦೦೫

೭) ಕನಕ ಪವಾಡ ಶ್ರೀ ಭಕ್ತ ಕನಕದಾಸರ ಸಂಕ್ಷಿಪ್ತ ಜೀವನ ಚರಿತ್ರೆಯ ಅದ್ಭುತ ಘಟನೆಗಳು – ಎಮ್.ದೇವಾರ್ಜುನ, ನವಜ್ಯೋತಿ ಪ್ರಕಾಶನ, ಹೊಸಕೋಟೆ.

೮) ಭಾರತೀಯ ಕಾವ್ಯ ಮೀಮಾಂಸೆ, ಡಾ.ಜಿ.ವಿ.ಡಿ. ಪ್ರಕಾಶಕರು – ಚೇತನ ಬುಕ್ ಹೌಸ್ ಮೈಸೂರು ೨೦೦೩

೯) ಸಂತಕವಿ ಕನಕದಾಸರ ಚರಿತ್ರೆ ಮತ್ತು ಆಯ್ದ ಹಾಡುಗಳು, ಧೂಳೇಂದ್ರ ಅರಗಂಜಿ, ಪಾರು ಪ್ರಕಾಶನ, ಗದಗ – ೨೦೦೦

೧೦) ಕನ್ನಡ ಸಾಹಿತ್ಯ ಚರಿತ್ರೆ, ರಂ ಶ್ರೀ.ಮುಗಳಿ, ಗೀತಾ ಬುಕ್ ಹೌಸ್ : ಮೈಸೂರು ೨೦೦೨

೧೧) ಕರ್ನಾಟಕದ ಜನ ಜೀವನ, ಬೇಟಗೇರಿ ಕೃಷ್ಣಶರ್ಮ, ಸಮಾಜ ಪುಸ್ತಕಾಲಯ, ಧಾರವಾಡ ೧೯೭೧

****